
ಅಖಿಲ ಭಾರತ ಪತ್ರಿಕೆ

ಡಿಸೆಂಬರ್ 2018



# ನವಜನ್ಮ

ಬೆಲೆ : 15/-



*"Supreme Lord, teach us to be silent*
*so that in silence we may receive Thy force*
*and understand Thy will.*

- The Mother

**ಅಖಿಲ ಭಾರತ ಪತ್ರಿಕೆ**
**ಡಿಸೆಂಬರ 2018**

ಸಂಪುಟ: 28 ಸಂಚಿಕೆ: 12

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ಹೆಗಡೆ–ಕುಮಟಾ – 581 330.
ಫೋನ್: 94487 74920
editorabpbng@yahoo.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಆರ್.ಕೆ. ಕುಲಕರ್ಣಿ
ಶ್ರೀ ಪುರುಷೋತ್ತಮ ಗಲಗಲಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್ : 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಪರಿವಿಡಿ

# “ನವಜನ್ಮ”

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಅವಿನಾಶಿ ಆತ್ಮ** 7
**ನವಜನ್ಮದ ಉದ್ದೇಶ** 16
ಅನು: ಶ್ರೀ ಪುಟ್ಟು ಕುಲಕರ್ಣಿ
**ನವಜನ್ಮದ ಪ್ರಕ್ರಿಯೆ** 37
ಅನು: ಡಾ॥ ಬಿ.ಆರ್. ಭೀಡ
**ಗತಜನ್ಮದ ಸ್ಮರಣೆಗಳು** 58
ಅನು: ಶ್ರೀ ಎಂ.ಬಿ. ನರವಣೆ ಮತ್ತು
ಶ್ರೀ ಪುಟ್ಟು ಕುಲಕರ್ಣಿ
**ವಾರ್ತಾಪತ್ರ** 67

## ಸಂಪಾದಕರ ಟಿಪ್ಪಣಿ

ನವಜನ್ಮದ ವಿಷಯವು ಆಧ್ಯಾತ್ಮಿಕ ಆನ್ವೇಷಕರಿಗೆ ಮತ್ತು ಜೊತೆ ಜೊತೆಗೆ ಸಾವಿನ ನಂತರದ ಪ್ರತಿಭಾಸ(Phenomenon)ಗಳನ್ನು ಶೋಧಿಸುತ್ತಿರುವ ವಿಷಯದಲ್ಲಿ, ಹಾಗೂ ಅದರ ಆಳವಾದ, ನಿಗೂಢವಾದ ಮರ್ಮಗಳ ಆಧ್ಯಯನದಲ್ಲಿ ತೊಡಗಿರುವ ವಿಜ್ಞಾನಿಗಳಿಗೆ, ಹೀಗೆ ಇಬ್ಬರಿಗೂ ಸಹಿತ ಈ ವಿಷಯವು ಅವರನ್ನು ಸದಾ ಕಾರ್ಯಪ್ರವೃತ್ತರನ್ನಾಗಿಸುತ್ತಿದೆ. ಸಾವು ಎನ್ನುವದು ನಮ್ಮ ಇಂದ್ರಿಯಗಳು (ಸಂವೇದನೆಗಳು) ತಲುಪಲಾರದ ಹಾಗೆ ಕಬ್ಬಿಣದ ಗೋಡೆಯ ಆಚೆಯೇ ಇರುವ ನಿಗೂಢವಾಗಿ ಉಳಿದಿದೆ. ನಾವು ದೇಹದ ಅವಸಾನವನ್ನು ಕಾಣುತ್ತೇವೆ. ಆದರೆ ಮಾನವನಿಗೆ ಪ್ರಜ್ಞಾಪೂರ್ವಕವಾಗಿ ತಿಳಿದಿರುವ ಸಂಗತಿ ಏನೆಂದರೆ, – “ನಾವು ಕೇವಲ ದೇಹ ಮಾತ್ರ ಅಲ್ಲ; ನಾವು ಜೀವಿಸುತ್ತಿರುವ ವ್ಯಕ್ತಿತ್ವವನ್ನು ಸಹ ಹೊಂದಿದ್ದೇವೆ” ಎನ್ನುವದು ತಿಳಿದಿದೆ.

ಈ ಸಂಗತಿಗೆ ಅತೀಂದ್ರಿಯ(Mystery)ವೂ ಸೇರಿಕೊಂಡು ನಾವು ಅಸ್ತಿತ್ವದಲ್ಲಿದ್ದೇವೆ, ಅದಕ್ಕಿಂತಲೂ ಮುಖ್ಯವಾಗಿ, ಒಂದು ಚೈತನ್ಯಪೂರ್ಣ ಅವಿನಾಶಿ ಆತ್ಮವೊಂದು, ಈ ನಶಿಸಿ ಹೋಗುತ್ತಿರುವ ಆತ್ಮದಲ್ಲಿ ಇದೆ ಎನ್ನುವದು ಮುಖ್ಯ ವಿಷಯವಾಗಿದೆ. ಸೂಕ್ಷ್ಮ ಇಂದ್ರಿಯಗಳ ವಿಷಯದಲ್ಲಿ ಅನುಭಾವವನ್ನು ಹೊಂದಿದ ಮತ್ತು ಅದರ ವಿಕಸನದ ಹಂತದಲ್ಲಿ, ಈ ಸೂಕ್ಷ್ಮ ಇಂದ್ರಿಯಗಳ ಮೂಲಕ, ಈ ಭೌತಿಕ–ಪಂಜರದ ರೂಪಿಯಾಗಿರುವ ದೇಹದಿಂದ ಅದರ ಪರಿಮಿತಿಯನ್ನು ಮೀರಿ ತದುತ್ತರದ ಕಡೆಗೆ ಸಾಗುವ ಹಂತದಲ್ಲಿ, ಆತ್ಮದ ರಹಸ್ಯವನ್ನು ತಿಳಿಸಿಕೊಡುವದಷ್ಟೇ ಅಲ್ಲದೇ, ಅದು ಹಲವು ದೇಹಗಳ ಮೂಲಕ ಸಂಚಾರ ಗೈಯುವ ಮತ್ತು ವಿಭಿನ್ನ ವ್ಯಕ್ತಿತ್ವಗಳಲ್ಲಿ ಪ್ರಕಟಗೊಳ್ಳುತ್ತ ಸಾಗಿದ ವಿಷಯವನ್ನೂ ಅನುಭವವನ್ನೂ ತೋರಿಸಿಕೊಡುತ್ತದೆ.

ಹಾಗಾದರೆ ಈ ಎಲ್ಲ ಹಂತಗಳ ಅಭಿವ್ಯಕ್ತಿಯ ಉದ್ದೇಶವಾದರೂ ಏನು? ಇಲ್ಲಿ ಏನಾದರೂ ನಿಗದಿತ ಉದ್ದೇಶವಿದೆಯೇ? ಒಂದು ವೇಳೆ ಉದ್ದೇಶವಿರುವದೇ ಆದಲ್ಲಿ, ಮತ್ತೆ ಮತ್ತೆ ಈ ಮರ್ತ್ಯದೇಹದಲ್ಲಿ ವಾಸಗೊಳ್ಳಲು ಪುನರಪಿ ಪುನರಪಿ ಬರುತ್ತಿರುವದೇತಕ್ಕೆ? ಯುಗಯುಗಗಳಿಂದಲೂ ಈ ಪ್ರಶ್ನೆ ಈ ಪ್ರಶ್ನೆಗಳು ಮಾನವ ಕುಲವನ್ನು ಪೀಡಿಸುತ್ತಲೇ (vexed) ಇವೆ. ಈ ಎಲ್ಲ ನಿರಂತರ (perennial) ಪ್ರಶ್ನೆಗಳಿಗೆ, ಶ್ರೀ ಅರವಿಂದರು ಮತ್ತು ಶ್ರೀಮಾತೆಯವರು ತೋರಿದ ಬೆಳಕಿನಲ್ಲಿ ಉತ್ತರಗಳನ್ನು ಕಂಡುಕೊಳ್ಳಲು ಈ ಸಂಚಿಕೆಯಲ್ಲಿ ಪ್ರಯತ್ನಿಸಲಾಗಿದೆ.

*

## ಸಂಪಾದಕೀಯ

ಶ್ರೀ ಅರವಿಂದರ ಭಾಷೆ ತಂಬ ಗಹನ ಎನ್ನುವ ಅಭಿಪ್ರಾಯಗಳಿವೆ. ಆದರೆ ಆಧಾರಭೂತ ತತ್ತ್ವಗಳನ್ನು ಪ್ರತಿಪಾದಿಸುತ್ತಿರುವಾಗ, ಹಾಗೂ ಪರಿಪೂರ್ಣತೆಯ ಬಗೆಗೆ ನಿಗದಿತವಾದ ಪಥವನ್ನು ನಿರ್ಮಿಸುತ್ತಿರುವಾಗ, ಈ ನವೀನ ಪಥದಲ್ಲಿ ಅವರ ದರ್ಶನಕ್ಕೆ ಬಂದ ಎಲ್ಲವೂ, ಓದುಗರಿಗೆ ಖಂಡಿತವಾಗಿಯೂ ಗಹನವೆನಿಸುತ್ತದೆ. ಆದರೆ, ಒಂದು ಶಬ್ದದ ಮೂಲಕ ಆ ಶಬ್ದವು ಅಡಕಗೊಳಿಸಿಕೊಂಡಿರುವ ಸಾಮಾಜಿಕ, ಬೌದ್ಧಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಆಯಾಮಗಳೊಡನೆ, ಅದೇ ಶಬ್ದವು ಒಳಗೊಂಡಿರುವ ವೈಶ್ವಿಕ ಆಯಾಮ (Cosmic-dimension)ವನ್ನೂ ವಿವರಿಸುತ್ತಿರುವಾಗ, ಈ ಭಾಷಾ ಗಹನತೆ ಸಹಜವಾಗಿರುತ್ತದೆ.

ಅದರಲ್ಲೂ "ನವಜನ್ಮ"ದಂತಹ ಒಂದು ಗುಹ್ಯಾತಿಗುಹ್ಯದ ವಿಷಯ ಪ್ರತಿಪಾದನೆಯಲ್ಲಿ ದೈನಂದಿನ ಹಾಗೂ ಕೇವಲ ಸಾಮಾಜಿಕ ಆಯಾಮ ಹೊಂದಿದ ಶಬ್ದಗಳು ಸೋಲುತ್ತವೆ. ಬುದ್ಧಿ ಪ್ರಾಧಾನ್ಯದಲ್ಲಿ ಪ್ರಕಟಗೊಳ್ಳುವ ಈ ಸಾಮಾಜಿಕ ಶಬ್ದಗಳಿಗಿಂತ, ಮನೋಪಾತಳಿಯ ಅನುಭಾವಗಳಲ್ಲಿ ಆಕಾರಗೊಂಡ, ಚೇತನಾವಸ್ಥೆಯಲ್ಲಿ ಸ್ವರೂಪ ತಾಳಿದ ಹಾಗೂ ಆತ್ಮದ ಆಭೀಪ್ಸೆಗೆ ನಾದದ ಮೂಲಕ ಅಕ್ಷರ ರೂಪಕ್ಕಿಳಿಯುವ ಹಾಗೂ ವಿಕಸನದ ಪಥಕ್ಕೆ ಮಾರ್ಗದರ್ಶಿ–ಯಾಗುವ ಸದಾಶಯದೊಡನೆ ಅಭಿವ್ಯಕ್ತಗೊಂಡ ಶ್ರೀ ಅರವಿಂದರ ಶಬ್ದಗಳ ಆಳ, ಅರ್ಥವ್ಯಾಪ್ತಿ, ವೈಶಾಲ್ಯತೆ ಮತ್ತು ಔನತ್ಯಗಳ ಕುರಿತು ಶ್ರೀ ಎಂ.ಪಿ, ಪಂಡಿತರು "ಶ್ರೀ ಅರವಿಂದರ ವೇದದ ಪ್ರತಿಮಾ ತತ್ತ್ವ" (Sri Aurobindo's Vedic Symbolism) ಎನ್ನುವ ಶಬ್ದಕೋಶವೊಂದನ್ನು (ಇಂಗ್ಲೀಷಿನಲ್ಲಿ) ಸಂಕಲನ ರೂಪದಲ್ಲಿ ನೀಡಿದ್ದಾರೆ. ಈ ಶಬ್ದಕೋಶದ ಆಧಾರದಲ್ಲಿ, ಶ್ರೀ ಅರವಿಂದರ ತತ್ವಗಳನ್ನು ಇತರ ಭಾಷೆಗಳಿಗೆ ಅನುಸ್ಪಂದನಗೊಳಿಸಬಹುದಾಗಿದೆ. ಸಧ್ಯದ ಈ "ನವಜನ್ಮ"ದ ಈ ಸಂಚಿಕೆಯಲ್ಲಿ, ಮರಣಾನಂತರದ ಸ್ಥಿತಿ–ಗತಿ–ಪ್ರಗತಿ ಎಲ್ಲವೂ ಸಾಮಾನ್ಯ ಮನೋಚೇತನಕ್ಕೆ ಸ್ಪಂದಗೊಳ್ಳುವದು ಒಂದು ಸಾಧನೆ. ಹೀಗಾಗಿ, ಹೀಗಾಗಿ ಕನ್ನಡದ ಅವತರಣಿಕೆಗಳಲ್ಲಿ, ಶ್ರೀ ಅರವಿಂದರ ಶಾಬ್ದಿಕ ಆಯಾಮಗಳೆಲ್ಲವನ್ನೂ ರೂಪಾಂತರಗೊಳಿಸಲು ಪ್ರಯತ್ನಿಸಲಾಗುವದು. ಪ್ರಾದೇಶಿಕ ವೈವಿಧ್ಯತೆ, ಪ್ರಾದೇಶಿಕ ಪ್ರತಿಮಾ ರೂಪಗಳು ಅವುಗಳ ಆರಾಧನೆ ಮತ್ತು

ಗ್ರಹಿಕೆಗಳು ನಿಸರ್ಗ ಸಹಜವಾಗಿಯೇ ವೈವಿಧ್ಯತೆಯಿಂದ ಕೂಡಿರುತ್ತವೆ, ಇದನ್ನು ಸದಸನ್ನಲಿಪಿ ಎನ್ನುತ್ತಾರೆ. ಮಾನವನ ಅಭಿವ್ಯಕ್ತಿಗೆ ದೊರಕಿ, ನಾದವಾಗಿ–ಸ್ವರವಾಗಿ–ಧ್ವನಿಯಾಗಿ, – ಅಕ್ಷರವಾಗಿ ಆಕಾರ ಪಡೆದುಕೊಂಡು ಸದಸಸನ್ನವಾದದ್ದು ಮೂಲದಲ್ಲಿ ವಿಶ್ವಸದಸನ್ನವಾಗಿರುತ್ತದೆ (ಕಾಸ್ಮಿಕ್ ಸ್ಕ್ರೈಬ್). ಈ ವಿಶ್ವಸದಸನ್ನಲಿಪಿ ಸತ್ ಮತ್ತು ಅಸತ್ ಎರಡೂ ಅಲ್ಲದ್ದು. ಭೂ–ಮಂಡಲದ ವ್ಯಾಪ್ತಿಯ ಮಾನಸ ಪ್ರಜ್ಞೆಗೆ ನಿಲುಕದ ಸಂಗತಿಯಾಗಿದೆ. ಆದರೆ ಈ ವಿಶ್ವಸದಸತ್ ಅನ್ನು ಕೆಲವು ದೃಷ್ಟಾರರು ದರ್ಶಿಸಿ, ಅದನ್ನು ಸದಸನ್ನಲಿಪಿಯಾಗಿ ರೂಪಾಂತರಗೊಳಿಸಿ ಈ ಭೂಮಂಡಲಕ್ಕೆ ಪರಿಚಯಿಸುತ್ತಾರೆ. ಇದನ್ನು ಅರ್ಥೈಸಿಕೊಳ್ಳುವದು ನಮಗೆ ಇದೊಂದು ಸವಾಲಿನ ವಿಷಯ. “ಸಾವಾಗಲೀ ಅಥವಾ ಜೀವನವೇ ಆಗಲಿ ಇವೆರಡೂ ಪರಿಪೂರ್ಣ ಕಲೆಯ ಆಯಾಮಗಳಾಗಿವೆ. ಇವೆರಡೂ ಸದಾ ಕಾಲದಲ್ಲೂ ದಿಗ್ಭ್ರಮೆಗೊಳಿಸುತ್ತಿದ್ದರೂ ಸಹಿತ, ಇವುಗಳ ಮಧ್ಯದಲ್ಲಿಯೇ ಜೀವನವು ಸಾಗುತ್ತಿರುವದೂ ಒಂದು ಕಲೆಯಾಗಿಯೇ ಇರುವದು ಒಂದು ಆಶ್ಚರ್ಯದ ವಿಷಯವೇ ಆಗಿದೆ. ಇದನ್ನು ಅತ್ಯಂತ ಸೂಕ್ತವಾಗಿ ಹೇಳುತ್ತಿರುವ ಬಂಗಾಳೀ ಭಾಷೆಯಲ್ಲಿ “ಯಾವ ರೀತಿಯಲ್ಲಿ ಸಾವು ಬರುತ್ತದೆ ಎನ್ನುವದನ್ನು ಅರಿತುಕೊಳ್ಳದಿದ್ದರೆ, ಜಪ ಮತ್ತು ತಪಗಳಿಂದ ಯಾವ ಪ್ರಯೋಜನವಿದೆ?” ಎಂದು ಹೇಳುವ ಮಾತಿದೆ. ಜೀವಿಯೊಬ್ಬನ ಅಂತಿಮ ಘಳಿಗೆಯ ಧಾರ್ಮಿಕ ವಿಧಾನಗಳನ್ನು ವಿವರಿಸುವ ಭೇಷಜಶಾಸ್ತ್ರ (Therapecitic) ಒಂದಿದೆ. ಸಾವಿನ ಹಂತದಲ್ಲಿದ್ದ ವ್ಯಕ್ತಿಯು “ಈ ಹಂತದಿಂದ” ಮುಂದೆ ಯಾವ “ಹಂತದೆಡೆಗೆ” ಸಾಗುತ್ತಿದ್ದಾನೆ ಎನ್ನುವದನ್ನು ದಾಖಲಿಸುವ ವಿವರಗಳನ್ನು ನೀಡುವ ಗ್ರಂಥಗಳಿವೆ.[೧] ಹೀಗಾಗಿ ಇಲ್ಲಿ ಸಾವು ಎನ್ನುವದು ಅಂತಿಮ ಹಂತ ಅಲ್ಲವೇ ಅಲ್ಲ. ಆದರೆ ಈ ಭೌತಿಕ ಶರೀರದ ವ್ಯವಸ್ಥೆಯಿಂದ ಮುಕ್ತನಾಗಿ ಹೊರ ಹೋಗುತ್ತಿರುವ “ಪ್ರಾಣ”ವು ನೂತನ ಲೋಕವೊಂದನ್ನು ಪ್ರವೇಶಿಸಿ ಹೊಸ ಜೀವನವೊಂದನ್ನು ಪಡೆದುಕೊಳ್ಳುತ್ತದೆ. ದೇಹ ಮಾತ್ರ ರೂಪಾಂತರವಾಗುವ ತತ್ವವನ್ನು ಕಳೆದುಕೊಂಡು ಪಂಚಭೂತಗಳಲ್ಲಿ ಲೀನಗೊಳ್ಳುತ್ತದೆ. ಈ ಸರಣಿ–ಸರಣಿಗಳ ಸರಮಾಲೆಯು ಸಾವಿನ ಮೂಲಕ ತುಂಡರಿಸಲ್ಪಡುವದಿಲ್ಲ. ಈ ಪ್ರಜ್ಞೆಯಲ್ಲಿರುವ ಶಕ್ತಿಯು, ಪ್ರಜ್ಞೆಯ ಹಂತವನ್ನು ನಿಗದಿಗೊಳಿಸುತ್ತ, ಮತ್ತೊಂದು ದೇಹವನ್ನು (ರೂಪವನ್ನು) ಪ್ರವೇಶಿಸುತ್ತದೆ. ಭಾರತೀಯ ರಹಸ್ಯವಾದವು ಈ ವಿಷಯವಾಗಿ “ತಂತ್ರರಾಜ”; ಪಾಠ: XXVII, VV, 45-7/72-80 ರಲ್ಲಿ ವಿವರಗಳಿವೆ. ಇದು ದೇಹದಲ್ಲಿರುವ


ದಶವಾಯುವಿನ ಕಾರ್ಯಗಳನ್ನು ವಿವರಿಸುತ್ತ, ವಾಯುವಿನ ಧಾರಣೆಯ ಕಾರ್ಯಗಳನ್ನು ವಿವರಿಸುತ್ತದೆ.

ಇಲ್ಲಿ "ಜನನ ಎನ್ನುವದು ಆತ್ಮದ ಪುನರುತ್ಥಾನ; ಮರಣ ಎನ್ನುವದು ಆತ್ಮದ ವಿಮೋಚನ" ಎನ್ನುವ ಮಾತನ್ನು ಡಾ॥ ಇವಾನ್ ಮೆಂಟಿಗ್ಷರು ಬರೆಯುತ್ತಾರೆ. ಹೀಗಾಗಿ ಸಾವು ಎನ್ನುವದು ಒಂದು ಜೀವನದ ವ್ಯವಸ್ಥೆಯಿಂದ ಮತ್ತೊಂದು ವ್ಯವಸ್ಥೆಗೆ ಇಡುವ ಪ್ರಪ್ರಥಮ ಹೆಜ್ಜೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಸಾವನ್ನು ಅಂತಿಮ ಹಂತ ಎಂದು ಪರಿಗಣಿಸಲು ಸಾಧ್ಯವಾಗುವದಿಲ್ಲ.

ಮರಣ ಮತ್ತು ನವಜನ್ಮದ ಬಗೆಗೆ ಭಾರತೀಯ ಮನಸ್ಸು ತುಂಬ ಭಾವನಾತ್ಮಕವಾಗಿಯೇ ಸ್ಪಂದಿಸುತ್ತಿದೆ. ಅದರಲ್ಲೂ ನವಜನ್ಮ ವಿಷಯದಲ್ಲಂತೂ ಸಂಪೂರ್ಣ ವಿಶ್ವಾಸದಲ್ಲಿಯೇ ಪರಂಪರೆಯನ್ನು ಸೃಷ್ಟಿಸಿಕೊಂಡಿದೆ. ಈ ವಿಷಯದ ಬಗೆಗೆ ಇಂದಿನ ಯುಗವು ಬಯಸುತ್ತಿರುವ "ವೈಜ್ಞಾನಿಕ" ವಿವರಣೆಗಳನ್ನು, ಭಾರತದ ಅಸ್ಮಿತೆಯಾಗಿರುವ ಆಧ್ಯಾತ್ಮದ ಆಯಾಮದೊಂದಿಗೆ ಶ್ರೀ ಅರವಿಂದರು ತೋರಿದ ತತ್ವಗಳು ಮತ್ತು ಶ್ರೀಮಾತೆಯವರು ಅನುಷ್ಠಾನಿಸಿದ ಕಾರ್ಯಗಳ ಹಿನ್ನೆಲೆಯಲ್ಲಿ, ರೂಪು ತಳೆಯುತ್ತಿರುವ "ನವೀನ ಚಿಂತನಾ ಕ್ರಮದ" ಪ್ರಜ್ಞಾ ವಿಕಸನದಲ್ಲಿ, ಈ "ನವಜನ್ಮ"ದ ವಿಷಯದ ಲೇಖನಗಳಿವೆ. ಇಂಗ್ಲೀಷಿನಲ್ಲಿ ರೀಬರ್ತ ಎನ್ನುವದನ್ನು "ಪುನರ್ಜನ್ಮ" ಎನ್ನುವದಕ್ಕಿಂತ ನವಜನ್ಮ ಎನ್ನುವದು ಸೂಕ್ತ. ಪುನರ್ಜನ್ಮ ಎಂದರೆ ಅದೇ ದೇಹದಲ್ಲಿ ಪುನಃ ಪ್ರಾಣವು ಪ್ರವೇಶಿಸುವದು ಎಂದಾಗುತ್ತದೆ. ಇಂತಹ ಉದಾಹರಣೆಗಳು ಬಲು ಅಪರೂಪವಾಗಿವೆ. ಆದರೆ "ನವಜನ್ಮದಲ್ಲಿ" ನವದೇಹ ತಳೆದರೂ, ಆ ವ್ಯಕ್ತಿಯ ಚೈತ್ಯಾತ್ಮವು, ಜನ್ಮದಿಂದ ಜನ್ಮಕ್ಕೆ ಪಡೆಯುತ್ತಿರುವ ವಿಕಸನದ ಹಂತಗಳು ಇಲ್ಲಿ ಸಂಕ್ಷಿಪ್ತವಾಗಿ ನೀಡಲ್ಪಟ್ಟಿವೆ. ಒಂದು ಸೈದ್ಧಾಂತಿಕ ವಿಷಯವಾಗಿರುವದರಿಂದ, ಇಲ್ಲಿ ಅದರದೆ ಆದ ಭಾಷಾ ವ್ಯವಸ್ಥೆಯಲ್ಲಿ ಸೈದ್ಧಾಂತಿಕ ಭಾಷಾ ಶಬ್ದಗಳನ್ನು (ಕೆಲವು ಸಾರಿ ಅನಿವಾರ್ಯವಾಗಿ) ಬಳಸಲಾಗಿದೆ. ಜೊತೆ ಜೊತೆಗೆ ಸುಲಭದಲ್ಲಿ ಸಂವಹನಗೊಳ್ಳಲು, ಆ ಪಾರಿಭಾಷಿಕ ಪದಕ್ಕೆ ಸಮೀಪವಿರುವ ಶಬ್ದಗಳನ್ನು ಬಳಸಲಾಗಿದೆ.

ಈ ಸಂಚಿಕೆಯಲ್ಲಿ ಶ್ರೀ ಅರವಿಂದರು ಮತ್ತು ಶ್ರೀಮಾತೆಯವರು "ನವಜನ್ಮ"ದ ಬಗೆಗೆ ರೂಪಿಸಿರುವ ವಿಚಾರಗಳನ್ನು ಸಾದರ ಪಡಿಸಲಾಗಿದೆ.

*



ಮಾನಸದ ಜೊತೆಗೆ ಪ್ರಾಣವದು ಮತ್ತೆ ಕುಂಡಲಿಯ ಛಂದದಲ್ಲಿ
ಅದರರಿವು ಪೂರ ಅವಳಾತ್ಮಕುಂಟು, ಆದರೂ ಪ್ರೇಮದಲ್ಲಿ
ಮಾತೆಯೊಲು ಸತತ ಸಂವೇದಗೊಳುತ ಜೊತೆ ಹಂಚಿಕೊಂಡು ನಿಂದು
ತನ್ನ ಸಂತತಿಯ ಜೀವ–ಜೀವಗಳ ಭಾವದೊಡೆಗೂಡಿಕೊಂಡು,
ಬಲು ಸೂಕ್ಷ್ಮ ಅಂಶವೊಂದನ್ನು ಮಾತ್ರ ತನಗೆಂದು ಮೀಸಲಿಟ್ಟು
ಮನುಜನಂಗುಷ್ಠ ಗಾತ್ರಕಿಂತದುವು ಹೆಚ್ಚಿರದ ಅಂಶಗಳಲಿ
ಆ ಹೃದಯದಲ್ಲಿ ಅಡಗಿರುವ ಗೂಢ ವಲಯದಲಿ ತೇಜದುಂಬಿ.

**Savitri, p. (ಸಾವಿತ್ರಿ ಪುಟ) 526** – ಶ್ರೀ ಅರವಿಂದರು

*

# ಅವಿನಾಶಿ ಆತ್ಮ

– ಅನುವಾದ: ಪುಟ್ಟು ಕುಲಕರ್ಣಿ

**ದಿವ್ಯಾಗ್ನಿಯ ಸ್ಫುಲಿಂಗ**

ಆತ್ಮವೆನ್ನುವದು ಜೀವ ಮತ್ತು ಜಡತತ್ವದಲ್ಲಿ ಇರುವ ದಿವ್ಯಾಗ್ನಿಯ–ಕಿಡಿ (ಸ್ಫುಲಿಂಗ) (spark). ಇದೊಂದು ಪ್ರತಿಮೆ ಎಂದು ವರ್ಣಿಸಲಾಗಿದೆ. ಆದರೆ ಇದನ್ನು ಚೈತನ್ಯದ ಸ್ಫುಲಿಂಗವೆಂದು ಎಂದೂ ವರ್ಣಿತವಾಗಿಲ್ಲ.

ಮಾನಸಿಕ, ಪ್ರಾಣಮಯ, ಭೌತಿಕ ಪ್ರಜ್ಞೆಗಳು ಇರುವ ವಿಷಯ ಎಲ್ಲರಿಗೂ ತಿಳಿದಿದೆ. ಆದರೆ ಚೈತ್ಯಾತ್ಮ (Psychic) ಮತ್ತು ಪ್ರಜ್ಞೆಗಳು ಸಮರೂಪಿ–ಯಾಗಿರುವದಿಲ್ಲ. ಈ ಆತ್ಮ ಅಥವಾ ಈ ದಿವ್ಯಾಗ್ನಿಯ ಸ್ಫುಲಿಂಗ(ಕಣ)ವೊಂದು ತನ್ನದೇ ಆದ ಆತ್ಮಿಕ ಅಸ್ಮಿತೆಯನ್ನು (ವ್ಯಕ್ತಿತ್ವವನ್ನು) ಹೊಂದಿ ವಿಕಸನಗೊಳ್ಳಲು ಪ್ರಾರಂಭಿಸುತ್ತದೆಯೋ, ಆಗ ಅದು ಆತ್ಮಿಕ ಅಸ್ಮಿತೆಯ – ”ಆತ್ಮಸತ್ತೆ (Psychic being) ಅಥವಾ ಚೈತ್ಯಪುರುಷವಾಗಿರುತ್ತದೆ. ಈ ಆತ್ಮ ಅಥವಾ ಸ್ಫುಲಿಂಗವು, ಒಂದು ವ್ಯವಸ್ಥೀಕೃತವಾದ ಪ್ರಾಣಮಯ ಸತ್ತೆ ಮತ್ತು ಮನೋಮಯ ಸತ್ತೆಯು ನಿರ್ಮಿತಿಗೊಳ್ಳುವದಕ್ಕಿಂತ ಮುಂಚೆಯೇ ಇರುತ್ತದೆ. ಈ ಆತ್ಮವೆನ್ನುವದು ಆ ದಿವ್ಯತೆಯ ಅಂಶವಾಗಿದ್ದು, ಈ ಅವತರಣಗೊಳ್ಳುವ ಮೂಲಕ, ಈ ದಿವ್ಯ ತತ್ತ್ವದ ವಿಕಸನದ ಹಂತದಲ್ಲಿ ಅದರಲ್ಲಿಯೇ ಅಡಕಗೊಂಡೇ, ಆ ವ್ಯಕ್ತಿಯ ವಿಕಾಸದ ಹಂತದಲ್ಲಿದ್ದುಕೊಂಡು, ತಮಸ್ಸಿನಿಂದ ಪ್ರಕಾಶದತ್ತ ಸಾಗಲು ಸಹಕಾರಿಯಾಗುತ್ತದೆ. ಇದು ಒಂದು “ಆತ್ಮಿಕ–ಅಸ್ಮಿತೆ” ಅಥವಾ ವ್ಯಕ್ತಿಗತ ಆತ್ಮ ರೂಪದ (Psychic Individual or Soul Individual) ಮೂಲಕ ಜೀವ(ನ)ದಿಂದ ಜೀವ(ನ)ಕ್ಕೆ ಪ್ರಗತಿ ಸಾಧಿಸುವ ಮೂಲಕ, ಮನೋವಿಕಸನವನ್ನು, ಪ್ರಾಣವನ್ನು ಮತ್ತು ದೇಹವನ್ನು ಉಪಕರಣಗೊಳಿಸಿಕೊಂಡು ಅವುಗಳ ಸಹಚರ್ಯದಲ್ಲಿ ಪ್ರಗತಿ ಹೊಂದುತ್ತದೆ. ಇಲ್ಲಿ ಈ ಆತ್ಮವು ಮಾತ್ರ ಅವಿನಾಶಿಯಾಗಿದ್ದು, ಉಳಿದಂತೆ ಇರುವದೆಲ್ಲವೂ ವಿಯೋಜನೆಗೊಳಿಸಲ್ಪಡುತ್ತದೆ (Disintegrated) ಇದು ಜನ್ಮದಿಂದ ಜನ್ಮಕ್ಕೆ ಸಾಂದ್ರಗೊಂಡ ಅನುಭವಗಳನ್ನು ಮತ್ತು ವ್ಯಕ್ತಿಯೋರ್ವನ ವಿಕಸನ ಗತಿ–ಪ್ರಗತಿಯನ್ನು ಮುಂದುವರೆಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/117–118**

*

## ಆತ್ಮದ ಉಪಸ್ಥಿತಿ ಮತ್ತು ಆತ್ಮದ ಅಸ್ತಿತ್ವ (ಸತ್ತೆ)

ಈ ಊರ್ಧ್ವಮುಖಿ ವಿಕಸನದ ಕುರಿತಾಗಿ, ಆತ್ಮದ ಅಸ್ತಿತ್ವಕ್ಕಿಂತ ಆತ್ಮದ ಉಪಸ್ಥಿತಿಯ ಬಗೆಗೆ ಮಾತನಾಡುವದು ಹೆಚ್ಚು ಸೂಕ್ತವಾಗಿರುತ್ತದೆ. ಏಕೆಂದರೆ ಆ ಆತ್ಮದ ಉಪಸ್ಥಿತಿಯೇ ಹಂತಹಂತವಾಗಿ "ಆತ್ಮಸತ್ತೆ (Psychic being) ಆಗಿ ಆಗಮಿಸುತ್ತದೆ. ಈ ವಿಕಸನದ ಪ್ರತಿಯೊಂದು ರೂಪದಲ್ಲೂ ಈ "ಉಪಸ್ಥಿತಿಯು" ಇರುತ್ತದೆ. ಆದರೆ ಇದು ವೈಯಕ್ತಿಕ ನೆಲೆಯಲ್ಲಿ ಮಾತ್ರ ವ್ಯಕ್ತೀಕರಣಗೊಂಡಿ–ರುವದಿಲ್ಲ. ಇದು ಪ್ರಗತಿ ಸಾಧಿಸಲು ಶಕ್ತವಾಗಿರುವ ಮತ್ತು ವಿಕಸನದ ಎಲ್ಲ ಅಂಶಗಳನ್ನು ಅನುಸರಿಸುವದಕ್ಕೆ ಶಕ್ತವಾಗಿರುತ್ತದೆ. ಮುಖ್ಯವಾಗಿ ಇದು ಊರ್ಧ್ವದ ನೆಲೆಯಿಂದ ಅವತರಣಗೊಂಡು ಬಂದಿರುವ ಅವಸರ್ಪಿಣಿ(Involution)ಯಂತೂ ಆಗಿರುವದಿಲ್ಲ.

ಇದು ರೂಪಣೆಗೊಳ್ಳುತ್ತಲೇ ಉತ್ತರೋತ್ತರವಾಗಿ ದಿವ್ಯ–ಚೇತನವನ್ನೂ ಪೂರ್ಣವಾಗಿ ಪಡೆದು, ಆ ದೈವೀ ಚೈತನ್ಯದ ಸ್ಫುಲಿಂಗವಾಗಿ ಆ ಶುದ್ಧ ಸತ್ತೆಯಲ್ಲಿ ಪ್ರಗತಿ ಹೊಂದಿ, ತದನಂತರದಲ್ಲಿ ಆತ್ಮಸತ್ತೆಯಲ್ಲಿ, ಅಂದರೆ ಅಂತಿಮವಾಗಿ ಅದು ವೈಯಕ್ತಿಕವಾಗಿ – ವ್ಯಕ್ತೀಕರಣಗೊಳಿಸಲ್ಪಟ್ಟ ಹಂತದಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಈ ಸ್ಫುಲಿಂಗವು ಶಾಶ್ವತವಾಗಿದ್ದು ಅದು ತನ್ನಷ್ಟಕ್ಕೆ ತಾನೇ ಪೂರ್ಣವಾಗಿದ್ದು ಕ್ರೋಢೀಕರಣಗೊಂಡಿದ್ದರೂ – ಎಲ್ಲ ಮೂಲಧಾತುಗಳ ಮೂಲಕ ರೂಪಣೆಗೊಳುವ ವ್ಯಕ್ತೀಕರಣವಾಗಿದೆ; ಆ ನೈಜ ಆತ್ಮ ಸತ್ತೆಯು – ಯಾವಾಗ ಈ ಪ್ರಾಣಿಕ–ವ್ಯಕ್ತಿತ್ವವು ಸಂಪೂರ್ಣವಾಗಿ ಬೆಳವಣಿಗೆ ಆದ ಮೇಲೆ, ಸಂರಚನೆಗೊಂಡ ಮೇಲೆ, ಆ ಶಾಶ್ವತದ ದಿವ್ಯ–ಸ್ಫುಲಿಂಗದ ವಲಯದಲ್ಲಿಯೇ, ಅದರದೇ ಆದ ಪರಾಕಾಷ್ಠೆಯನ್ನು (Culimination) ಹೊಂದಿರುವದು. ಅದರ ಒಟ್ಟೂ ಸಾರ್ಥಕತೆಯನ್ನು, ಆ ಊರ್ಧ್ವದ ವ್ಯಕ್ತಿತ್ವದೊಡನೆ ಅಥವಾ ಆ ಸತ್ತೆಯೊಡನೆ ಸಂಯೋಗಗೊಂಡ ಏಕತ್ವವಾದ ಸಂದರ್ಭದಲ್ಲಿ.... ಇರುವದು. ಆದರೂ ಸಹಿತ ಪ್ರತಿಯೊಬ್ಬರೂ ಈ ಆತ್ಮಸತ್ತೆ (Psychic being) ಅನ್ನು ಹೊಂದಿರುತ್ತಾನೆ ಎಂದು ಹೇಳಲು ಬರುವದಿಲ್ಲ. ಅದೇ ರೀತಿಯಲ್ಲಿ ಪ್ರತಿಯೊಂದು ಪ್ರಾಣಿಗೂ ಸಹಿತ ಇದನ್ನು ಒದಗಿಸಲು ನಿರಾಕರಿಸಲು ಬರುವದಿಲ್ಲ. ಮಾನವನ ಸಮಕಾಲೀನವಾಗಿಯೇ ಜೀವಿಸುತ್ತಿರುವ ಎಷ್ಟೋ ಪ್ರಾಣಿಗಳೂ ಸಹಿತ, ತಮ್ಮದೇ ಆದ ಜೀವನದ ಉಗಮಗಳನ್ನು ಹೊಂದಿವೆ. ಆದರೆ ಪದೇ ಪದೇ – ಸಾಮಾನ್ಯವಾಗಿ–, ಮಾನವನ ಜೀವನದ ಪಥದಲ್ಲಿ ಆಗಮಿಸುವ ಜನತೆ ಮಾತ್ರ

ಕೇವಲ ಅವಿಚೇತನದ (brutes) ಹಾಗೆ ಕಂಡುಬರುವದಿಲ್ಲ. ಹೀಗಾಗಿ ಇಲ್ಲಿಯೂ ಸಹಿತ, ಸಮತಲನಗೊಳಿಸುವಲ್ಲಿ ಒಂದು ಸದವಕಾಶದ ವ್ಯವಹರಣೆ ಇರುವದು ಕಂಡು ಬರುತ್ತದೆ: ಈ ಕಾರಣದಿಂದಾಗಿಯೇ ಕ್ಯಾಥೋಲಿಕ್ ಪಂಥವು "ಕೇವಲ ಮಾನವನು ಮಾತ್ರ ಆತ್ಮವನ್ನು ಹೊಂದಿದ್ದಾರೆ" ಎಂದು ಘೋಷಿಸುತ್ತಿದೆ. ಕೇವಲ ಮಾನವನಲ್ಲಿ ಮಾತ್ರ ಈ ರೀತಿಯ ಆತ್ಮಸತ್ತೆಯು ತನ್ನ ಪೂರ್ಣತೆಯ ಸಾಕಾರ ಪಡೆದುಕೊಳ್ಳುವಲ್ಲಿ ಶಕ್ತವಾಗಿದ್ದು, ಅಂತಿಮವಾಗಿ ಅದು ಅಧಿರೋಹಗೊಳ್ಳುತ್ತಿರುವ ಆ ಪ್ರಾಣದ ಜೊತೆಗೆ ಸೇರಿ ಅದರಲ್ಲಿಯೇ ಸಂಯೋಗಗೊಂಡು ಏಕವಾಗುವ, ಊರ್ಧ್ವದಿಂದ ಬರುವ ದೇವಶೀರ್ಷನ ಜೊತೆಗೆ ಸಂಯೋಗಗೊಳ್ಳುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/150–151**

*

**ಆತ್ಮ ಸತ್ತೆಯ ಉಗಮ (ಮೂಲ)**

ವಸ್ತು–ವಿಷಯಗಳು ಹೇಗೆ ಘಟಿಸುತ್ತವೆ ಎನ್ನುವದನ್ನು ಇದು ಹೇಳುತ್ತಿದೆ. ಈ ಚೈತನ್ಯದ ಜೀವನ (Psychic Life) ಈ ಜಡಸತ್ತೆಯಲ್ಲಿಯೇ ದಿವ್ಯಸತ್ತೆಯ ಸಮ್ಮುಖತ್ವವನ್ನು (ಉಪಸ್ಥಿತಿ) ಹೊಂದಿ ಎರಡೂ ಒಂದೇ ಆಗಿದ್ದು ಅದೇ ಸಮಯದಲ್ಲಿ ಸಮಸಮವೂ ಆಗಿರುತ್ತವೆ. ಇದು ಈಗಾಗಲೇ ತಿಳಿದಿರುವ ಸಂಗತಿಯಾಗಿದ್ದು, ಆದರೆ ಆ ಊರ್ಧ್ವಲೋಕದಲ್ಲಿ ಇರುವ ಜೀವಗಳು (ಚೈತ್ಯಾತ್ಮಗಳು) ಇದುವರೆಗೂ ಈ ಭೂಮಿಯ ಮೇಲೆ ಯಾವುದೇ ಜೀವ (ದೇಹ) ಧಾರಣೆಯನ್ನೂ ಹೊಂದದೇ ಆ ಸ್ಥಳದಲ್ಲಿ ಕ್ರಿಯಾಪ್ರವೃತ್ತವಾಗಿರಲು, ಐಹಿಕದ ಕರ್ಮಗಳಲ್ಲಿ ತೊಡಗಲು ಬಂದಿರುವದಿಲ್ಲ. ಆದ್ದರಿಂದ, ಕೆಲವು ಚೈತ್ಯಾತ್ಮಗಳು ತಮ್ಮಲ್ಲಿಯೇ ಸಂಪೂರ್ಣ ವಿಕಸನಗೊಂಡು ಮತ್ತೆ ಅವುಗಳೊಡನೆ ಒಂದಾಗಿ (ಸಂಲಗ್ನಗೊಂಡು), ಆಯಾ ಸ್ವಭಾವಕ್ಕನುಗುಣವಾಗಿ ಕಾರ್ಯಗಳನ್ನು ಮಾಡುವವರೆಗೂ ಪ್ರತೀಕ್ಷೆಯಲ್ಲಿ ಇರುತ್ತವೆ. ಅವುಗಳ ಚೈತನ್ಯವು ಈ ಆತ್ಮ–ಪ್ರಜ್ಞೆ ಜೊತೆಗೆ ಕೂಡಿಕೊಂಡಿರುತ್ತವೆ. ಆದರೆ ಇವುಗಳಲ್ಲಿ ಎಲ್ಲವೂ ಈ ಭೂಮಿಯ ಮೇಲೆ ಜನ್ಮ ತಾಳಿ ಬಂದಿಲ್ಲ. ಸೃಷ್ಟಿಯ ಮುಂದುವರಿಕೆಯಾದಂತೆಲ್ಲವೂ ಸಹಿತ, ಹೆಚ್ಚು–ಹೆಚ್ಚಾಗಿ ಭೌತಿಕ ಪ್ರಪಂಚದಲ್ಲಿ ಕಾರ್ಯಾನ್ವಿತಗೊಳಿಸಿಕೊಂಡಿಲ್ಲ.

ಹೀಗಾಗಿ ಇವು ಬಹುತೇಕವಾಗಿ ಪ್ರಪ್ರಥಮವಾಗಿಯೇ ಉದ್ಭವ (Emanuation)ವಾಗಿರಬೇಕು. ಒಂದು ವಿಶೇಷ ಕಾರಣಕ್ಕಾಗಿಯೇ ವಿಶ್ವಕ್ಕೆ

ಕಳಿಸಲ್ಪಟ್ಟವುಗಳಾಗಿರಬೇಕು. ಹೀಗಾಗಿಯೇ ಮಾನವರು "ದೇವ ಗಣಗಳು" ಅಥವಾ "ಗಂಧರ್ವ ಗಣ" (demy gods) ಎಂದು ಕರೆದಿರಬೇಕು. ಆದ್ದರಿಂದ ಈ ಚೈತ್ಯಾತ್ಮಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು, ಅದೂ ನಿಗದಿಗೊಳಿಸಿದ ವಿಶೇಷ ಕಾರಣಕ್ಕೇ, ಆ ಒಂದು ಚೈತ್ಯಪುರುಷನ ರೂಪಧಾರಣೆಯಾಗಿದೆ ಎಂದು ಆರಾಧಿಸುತ್ತಾರೆ. ಆ ರೀತಿಯಲ್ಲಿ ಆಗಮಿಸುವ ವ್ಯಕ್ತಿಯು ಸಹಕರಿಯಾಗಿರುವನು, ಪ್ರಗತಿಯನ್ನು ಅನುಸರಿಸುವನು ಮತ್ತು ಯಾವಾಗ ಈ ಚೈತ್ಯವು ಸಕ್ಷಮದಲ್ಲಿ ಶಕ್ತವಾಗಿ, ಸಕ್ಷಮದಲ್ಲಿ ಸಿದ್ಧವಾಗಿ ಹಾಗೂ ಅಸ್ಮಿತೆಗೆ ಸಹಕಾರಿಯಾಗಿಲು ಶಕ್ತವಾಗಿರುವದೋ, ಅಗ ಅದರೊಡನೆ ಏಕೀಕರಣಗೊಳ್ಳುವನು. ಅದರೊಡನೆ ಅಸ್ಮಿತೆಯನ್ನೂ ಕಂಡುಕೊಂಡು ಈ ಭೂಮಿಯ ಮೇಲೆ ಕೆಲವು ಕಾರ್ಯಗಳನ್ನು ಕೈಕೊಳ್ಳುತ್ತಾನೆ. ಇದು ಅಪರೂಪದಲ್ಲಿ ಘಟಿಸುವ ಘಟನೆ ಅಲ್ಲ. ಏಕೆಂದರೆ ಇದು ಈ ಹಿಂದೆ ಘಟಿಸಿದೆ ಮತ್ತು ಘಟಿಸುತ್ತಲೇ ಇರುವದು. ಅದಕ್ಕಾಗಿಯೇ ದೇವರು ಭೂಮಿಯ ಮೇಲೆ ಅವತರಿಸಿ ಬಂದಿರುವ ಹಲವಾರು ಕಥೆಗಳನ್ನು ಪ್ರಾಚೀನ ಸಂಪ್ರದಾಯಗಳಲ್ಲಿ ಕಾಣುತ್ತೇವೆ; ಕೆಲವು ಪುರಾಣಗಳೂ ಅವರ ಬಗೆಗೆ ವ್ಯಾಖ್ಯಾನಿಸುತ್ತಿವೆ. ಅವುಗಳಲ್ಲಿ ಕೆಲವು ನೈಜ ಎನ್ನುವದನ್ನೂ ಅವು ತಿಳಿಸುತ್ತವೆ. ಆದರೆ ಮುಖ್ಯವಾಗಿ ಎಲ್ಲ ಚೈತ್ಯಪುರುಷರೂ ಆ ಊರ್ಧ್ವ ಸ್ತರದಲ್ಲಿರುವ ದಿವ್ಯಚೈತ್ಯದ ಜೊತೆಗೇ ಒಂದಾಗಿರುತ್ತವೆ ಎಂದೇನೂ ಇರಬೇಕಾಗಿಲ್ಲ,

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/184**

*

**ಚೈತ್ಯ ಪುರುಷನ ಉತ್ಥಾನ**

ಈ ಚೈತ್ಯ ಪುರುಷನ ವಿಷಯದಲ್ಲಿ ಎರಡು ವಿಭಿನ್ನ ನೆಲೆಯ ಉತ್ಥಾನಗಳು ಇರುತ್ತವೆ. ಒಂದು ಅದರ ಉಗಮದ (Formation) ಕುರಿತು, ರಚನೆಯ ಕುರಿತು ಮತ್ತು ಸುಸಂಘಟಿತವಾಗುತ್ತದೆ. ಇದು ಚೈತ್ಯ–ಪುರುಷನ (Psychic being) ಮೂಲಕವೇ ಪ್ರಾರಂಭಗೊಳ್ಳುವದು. ಇಲ್ಲಿ ಇರುವ ಅತ್ಯಂತ ಸೂಕ್ಷ್ಮಾತಿಸೂಕ್ಷ್ಮ ದಿವ್ಯ ಸ್ಫುಲಿಂಗದಲ್ಲಿದ್ದು ಅದರ ಮೂಲಕವೇ ಈ ಸ್ಫುಲಿಂಗವು ಉತ್ಥಾನಗೊಳ್ಳುವದರ ಮೂಲಕ ಹೊರಹೊಮ್ಮುತ್ತದೆ. ಇದು ಸ್ವತಂತ್ರವಾದ ಚೈತನ್ಯಾತ್ಮ(ಚಿದಾತ್ಮ)ವಾಗಿದ್ದು, ತನ್ನದೇ ಆದ ಕ್ರಿಯೆ ಮತ್ತು ಸಂಕಲ್ಪ(Will)ವನ್ನು ಹೊಂದಿರುತ್ತದೆ.

ಈ ಚೈತ್ಯಾತ್ಮ–ಪುರುಷ ಉಗಮಾವಸ್ಥೆಯಲ್ಲಿಯೇ, ಈ ದಿವ್ಯ ಚೈತನ್ಯದ ಸ್ಫುಲಿಂಗವಾಗಿದ್ದು, ಹಾಗೂ ಇದು ತನ್ನ ಹಲವು ಜೀವನದ ಹಂತಗಳಲ್ಲಿ ಒಂದು ಚೈತನ್ಯ ವ್ಯಕ್ತಿತ್ವದ ರೂಪದಲ್ಲಿ ಸಂರಚನೆಗೊಳ್ಳುವದು. ಒಂದು ಶಿಶುವು ಹೇಗೆ ಸರ್ವ ರೀತಿಯಲ್ಲಿಯೂ ವಿಕಸನ ಹೊಂದುತ್ತ ಬರುತ್ತದೆಯೋ ಅದೇ ರೀತಿಯಲ್ಲಿ ಇರುವ ವ್ಯವಸ್ಥೆಯಲ್ಲಿ ಇರುತ್ತದೆ. ಇದು ಸದಾ ಸಿದ್ಧಗೊಳ್ಳುತ್ತಲೇ ಇರುವ ವಿಷಯ–ವಸ್ತುವಾಗಿದೆ. ದೀರ್ಘಾವಧಿಯ ಕಾಲದಿಂದ, ಬಹುತೇಕ ಜೀವಿಗಳಲ್ಲಿ ಈ ಪ್ರಾಣವು (Psychic) ರೂಪಣೆಗೊಳ್ಳುತ್ತಲೇ ಇದೆ. ಇದು ಈವರೆಗೂ ತನ್ನದೇ ಆದ ವ್ಯಕ್ತಿತ್ವದ ಹಂತವನ್ನು ತಲುಪಿಲ್ಲ; ಸಂಪೂರ್ಣ ಚೈತನ್ಯವಾಗಿಲ್ಲ; ಮತ್ತು ತನ್ನಷ್ಟಕ್ಕೆ ತಾನೇ ಪರಿಪಕ್ವತೆಯನ್ನು (ಪ್ರಭುತ್ವವನ್ನು) ಹೊಂದಿಲ್ಲ. ಹೀಗಾಗಿ ಇದು ನವಜನ್ಮಗಳ ಸರಣಿಯನ್ನು ಬಯಸುತ್ತದೆ. ಒಂದಾದ ಮೇಲೆ ಒಂದರಂತೆ, ತನ್ನಷ್ಟಕ್ಕೆ ತಾನೇ ಸಂಪೂರ್ಣ ಚೈತನ್ಯವಾಗುವವರೆಗೂ ಸಂರಚನೆಗೊಳ್ಳುತ್ತಲೇ ಇರುತ್ತದೆ. ಆದರೆ ಈ ಎಲ್ಲ ಪ್ರಕ್ರಿಯೆಗಳಿಗೆ ಒಂದು ಅಂತಿಮ ಹಂತವಿದ್ದೇ ಇರುತ್ತದೆ. ಯಾವಾಗ ಈ ಚೈತ್ಯಪುರುಷ ಸಂಪೂರ್ಣವಾಗಿ ಪ್ರಗತಿಯಾಗಿ, ವಿಕಾಸದ ಹಂತವನ್ನು ತಲುಪುತ್ತದೆಯೋ, ಪರಿಪೂರ್ಣವಾದ ವ್ಯಕ್ತಿತ್ವ(ಅಸ್ತಿತ್ವ)ವನ್ನು ಹೊಂದುತ್ತದೆಯೋ, ಆಗ ತನ್ನಲ್ಲಿಯೇ ಪೂರ್ಣ–ಪರಿಪಕ್ವತೆಯನ್ನು ಹೊಂದಿ ಮತ್ತೆ ತನ್ನ ಗಮ್ಯವನ್ನು ತಲುಪುತ್ತದೆಯೋ, ಅಂತಹ ಸ್ಥಿತಿಗೆ ಬಂದಿರುತ್ತದೆ.

ಯಾವಾಗ ಈ ಶುದ್ಧಸನ್ಮಾತ್ರ (Being) ಅಥವಾ ಚೈತ್ಯಾತ್ಮಗಳ ಪೈಕಿ ಯಾವುದಾದರೂ ಒಂದು, ಈ ನಿರ್ಧರಿತ ಹಂತವನ್ನು ತಲುಪುತ್ತದೆಯೋ ಮತ್ತು ಮಾನವ ಜೀವಿಯ ರೂಪವನ್ನು ಧಾರಣ ಮಾಡುತ್ತದೆಯೋ, ಆಗ ಅದು ಬಹು ದೊಡ್ಡ ವ್ಯತ್ಯಾಸವಾಗಿರುತ್ತದೆ; ಇಲ್ಲಿ ಮೂಲವಾಗಿ ಉಲ್ಲೇಖಿಸಬೇಕಾದರೆ, ಈ ಮಾನವ ಜೀವಿಯು ಮುಕ್ತನಾಗಿಯೇ ಜನಿಸಿರುತ್ತಾನೆ. ಅವನು ಇಲ್ಲಿರುವ ಯಾವುದೇ ವಾತಾವರಣಗಳಿಗೆ, ಅವನ ಸುತ್ತಮುತ್ತಲಿನ ಘಟನಾವಳಿಗಳಿಗೆ ಅವನ ಉಗಮಕ್ಕೆ ಮತ್ತು ವಂಶವಾಹಿನಿಯ ಮುಂದುವರಿಕೆಯಲ್ಲಿ ಹಲವು ಪೀಳಿಗೆಯ ನಂತರದಲ್ಲಿ ಪುನಃ ಕಾಣಿಸಿಕೊಳ್ಳುವ ಅನಾರೋಗ್ಯದ (atavism) ಹಂತದಿಂದ ದೂರವೇ ಇದ್ದು ಈ ಅವಸ್ಥೆಯಿಂದ ಮುಕ್ತವಾಗಿರುತ್ತದೆ. ಸಾಮಾನ್ಯವಾಗಿ ಮಾನವ ಕುಲವು ಇವೆಲ್ಲವುಗಳಿಂದ ಬಂಧಿತವಾಗಿಯೇ ಇರುತ್ತದೆ. ಆದರೆ ಈ ಚೈತ್ಯ ಪುರುಷ ಮಾತ್ರ ಈ ವಲಯದವನಾಗಿರುವದಿಲ್ಲ.

ಅವನು ಈ ಲೋಕಕ್ಕೆ ಒಂದು ನಿಗದಿತ ಉದ್ದೇಶವನ್ನು ಹೊತ್ತುಕೊಂಡೇ, ಅದನ್ನು ಅನುಷ್ಠಾನಗೊಳಿಸುವದರ ಸಲುವಾಗಿಯೇ ಆಗಮಿಸಿರುತ್ತಾನೆ. ಅದನ್ನು ಮುಂದುವರೆಸಿಕೊಂಡು ಹೋಗಲು ಕಾರ್ಯಪ್ರವೃತ್ತನಾಗುವದರ ಮೂಲಕ, ಒಂದು ಪ್ರೇರಣೆಯನ್ನು ಫಲಪ್ರದಗೊಳಿಸುವದರ ಮೂಲಕ, ಅಂತಹ ಯೋಜನೆಯನ್ನು ಹೊಂದಿರುತ್ತಾನೆ. ಈ ಅಭಿಪ್ರಾಯದ ಹಿನ್ನಲೆಯಲ್ಲಿ ನೋಡಿದರೆ, ಅವನ ಪ್ರಗತಿಯು ಒಂದು ನಿಗದದಿತವಾದ ಅಂತಿಮ ಹಂತವನ್ನು ತಲುಪಬೇಕಾಗುವದು. ಅದೆಂದರೆ, ಅವನು ಮತ್ತೆ ದೇಹಧಾರಿಯಾಗಿ ಅವತರಿಸಬೇಕು ಎನ್ನುವ ಅನಿವಾರ್ಯತೆಯು ಅಲ್ಲಿ ಇರುವದಿಲ್ಲ. ಎಲ್ಲಿಯವರೆಗೂ ಈ ರೀತಿಯ ನವಜನ್ಮದ ಅವಶ್ಯಕತೆ ಇರುತ್ತದೆಯೋ, ಅದಕ್ಕಾಗಿಯೇ ಆ ಹಂತದವರೆಗೂ ಅವನು ಪ್ರಗತಿ ಹೊಂದುತ್ತಲೇ ಇರುವನು; ಇದು ಅವನ ಭೌತಿಕ ದೇಹ ಮತ್ತು ಲೌಕಿಕ ಜೀವನದಲ್ಲಿ ಇರುತ್ತವೆ. ಇಲ್ಲಿಯೇ ಇವನು ಪೂರ್ಣಾತ್ಮ (Fully conscious being) ನಾಗಿ ಪ್ರಗತಿ ಹೊಂದುತ್ತಾನೆ. ಯಾವಾಗ ಅವನು ಒಮ್ಮೆ ಪರಿಪೂರ್ಣ ಹಂತವನ್ನು ತಲುಪುತ್ತಾನೋ ಆಗ ಅವನು "ಮುಕ್ತ"ನಾಗಿರುತ್ತಾನೆ. ಅದರಂತೆ ಮತ್ತೆ ಅವನು ಜನ್ಮವನ್ನು ಪಡೆಯಬಹುದು ಇಲ್ಲವೇ ಮತ್ತೆ ಜನ್ಮ ತಳೆಯುವದನ್ನು ಇಚ್ಛಿಸದೆಯೂ ಇರಬಹುದು. ಇದು ಅವನ ಇಚ್ಛೆಯನ್ನು ಅವಲಂಬಿಸಿರುತ್ತದೆ. ಹೀಗಾಗಿ ಇಲ್ಲಿಗೆ ಪ್ರಗತಿಯೊಂದು ಒಂದು ನಿಗದಿತ ಹಂತದಲ್ಲಿ ನಿಲ್ಲುತ್ತದೆ.

ಆದರೆ, ಈ ಪರಿಪೂರ್ಣಗೊಂಡ ಆತ್ಮವು (ಜೀವವು) ಆ ದಿವ್ಯತ್ವದ ಕಾರ್ಯವನ್ನು ಮಾಡಲು ಒಂದು ಉಪಕರಣ(ಸಾಧನ)ವಾಗಲು ಇಚ್ಛಿಸಿದಲ್ಲಿ, ಅಂದರೆ, ಇಲ್ಲಿಂದ ನಿವೃತ್ತಿ ಹೊಂದಿ ಚೈತ್ಯದ ಪರಮ ತೋಷದಲ್ಲಿಯೇ ವಿಲೀನಗೊಳ್ಳುವದನ್ನು ಬಯಸದೇ ಇದ್ದಲ್ಲಿ, ಆಗ ಆ ವ್ಯ(ಶ)ಕ್ತಿಯು ಈ ಭೂಮಿಯ ಮೇಲೆ ಓರ್ವ ಕೆಲಸಗಾರನಾಗಿ, ಆ ದಿವ್ಯ ಕಾರ್ಯದ ಪೂರ್ಣತೆಗೆ ಸಹಾಯ ಮಾಡುವದನ್ನು ಆಯ್ಕೆ ಮಾಡಿಕೊಂಡಲ್ಲಿ, ಆಗ ಅವನು ಮತ್ತೆ ನವೀನ ಪ್ರಗತಿಯನ್ನೇ ರೂಪಿಸಬೇಕಾಗುತ್ತದೆ. ಅಂದರೆ, ಆ ರೀತಿಯ ಕಾರ್ಯಾನುಷ್ಠಾನಕ್ಕಾಗಿಯೇ ಅವಶ್ಯವಿರುವ ಸಾಮರ್ಥ್ಯದಲ್ಲಿ ತನ್ನ ಕಾರ್ಯಗಳನ್ನು ಸಂಘಟಿತಗೊಳಿಸುವದಕ್ಕೆ ಮತ್ತು ಆ ದೈವೀ–ಹಂಬಲವನ್ನು ಅಭಿವ್ಯಕ್ತಗೊಳಿಸುವದಕ್ಕೆ ಆಗಮಿಸಬೇಕಾಗುತ್ತದೆ.

ಆದ್ದರಿಂದ, ಈ ರೀತಿಯ ವಿಷಯಗಳು ಪರಿವರ್ತನೆಗೊಳ್ಳುವಲ್ಲಿ ಒಂದು ನಿಗದಿತ ಅವಧಿ ಇರುತ್ತದೆ. ಎಷ್ಟು ದೀರ್ಘ ಕಾಲದವರೆಗೆ ಅವನು ಈ ಭೂಮಿಯ

(ಲೋಕದ) ಸಂಪರ್ಕವನ್ನು ಹೊಂದಿರುತ್ತಾನೆಯೋ, ಮತ್ತು ಎಷ್ಟು ದೀರ್ಘ ಕಾಲದವರೆಗೆ ಆ ದಿವ್ಯಕಾರ್ಯ(ಕರ್ಮ)ವನ್ನು ಆಯ್ಕೆ ಮಾಡಿಕೊಳ್ಳುತ್ತಾನೆಯೋ, ಅಲ್ಲಿಯವರೆಗೂ ಅವನು ಪ್ರಗತಿಯನ್ನು (ವಿಕಸನವನ್ನು) ಹೊಂದುತ್ತಾನೆ.

ಒಂದು ವೇಳೆ ತನ್ನನ್ನು ತಾನೇ ಪ್ರಾಣಮಯ ಲೋಕಕ್ಕೆ ತಲ್ಲೀನಗೊಳಿಸಿ–ಕೊಂಡು, ಮತ್ತು ಈ ದಿವ್ಯ–ಕರ್ಮವನ್ನು ಮುಂದುವರೆಸಲು ನಿರಾಕರಿಸಿದಲ್ಲಿ, ಅಥವಾ ಪರಿತ್ಯಾಗ ಮಾಡಿದರೆ, ಆಗ ಈ ಎಲ್ಲ ಪ್ರಗತಿಯ ಆಚೆ, ದೂರವೇ ಅವನು ಸ್ಥಿತಗೊಳ್ಳುತ್ತಾನೆ. ಏಕೆಂದರೆ, ಈಗಾಗಲೇ ನಾನು ನಿಮಗೆ ತಿಳಿಸಿರುವಂತೆ, ಈ ಭೂಮಿಯ ಮೇಲೆ ಮಾತ್ರ ಈ ಪ್ರಗತಿ –ವಿಕಸನ ಇರುವದು. ಅದೂ ಕೇವಲ ಈ ಭೌತಿಕ ಜಗತ್ತಿನಲ್ಲಿ (ಮಾತ್ರವೇ) ಇದ್ದು, ಇದು ಸರ್ವತ್ರವೂ ಘಟಿಸಲೇ–ಬೇಕೆಂದೇನೂ ಇರುವದಿಲ್ಲ. ಈ ಪ್ರಾಣಮಯ ಜಗತ್ತಿನಲ್ಲಿ ತೋಷದುಂಬಿದ ಸ್ಥಿತಿಯಲ್ಲಿ ತಲ್ಲೀನಗೊಳುವ ಒಂದು ಹಂತವಿರುವದು. ಯಾವುದು ಏಕವಾಗಿತ್ತೋ ಅದರಲ್ಲಿಯೇ ಲೀನವಾದ ನಂತರದಲ್ಲಿ, ಯಾವುದೆ ಚಲನವಲನವಿಲ್ಲದೇ "ಏಕವೇ" ಆಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/203–204**

*

**ಸಾವು ಮತ್ತು ಪ್ರಗತಿ (ವಿಕಾಸ)**

*ಹಾಗಾದರೆ ಯಾರು ತಮ್ಮ ಆತ್ಮದ ಬಗೆಗೆ ಪ್ರಜ್ಞೆಯನ್ನು ಹೊಂದಿಲ್ಲವೋ ಅವರಿಗೆ..?*

ಅವರಿಗೆ ಇಚ್ಛೆ ಇರಲಿ ಇಲ್ಲದಿರಲಿ, ಅವರು ನಿಗದಿಗೊಳಿಸಲ್ಪಟ್ಟಿರುವ ರೀತಿಯಲ್ಲಿಯೇ ಪ್ರಗತಿ ಹೊಂದಲು ನಿರ್ಬಂಧಿಸಲ್ಪಟ್ಟವರಾಗಿರುತ್ತಾರೆ.

ಈ ಪ್ರಾಣಮಯ ತತ್ತ್ವವು ತನ್ನಷ್ಟಕ್ಕೆ ತಾನೇ ಇವರಲ್ಲಿ ವಿಕಸನಗೊಳ್ಳುತ್ತಿರುತ್ತದೆ. ಆದರೆ ಅವರಿಗೆ ಇದರ ಬಗೆಗೆ ಅರಿವು ಇರುವದಿಲ್ಲ. ಆದರೆ ಅವರಷ್ಟಕ್ಕೆ ಅವರು ವಿಕಸನಕ್ಕೆ ನಿರ್ಬಂಧಿತರಾಗಿರುತ್ತಾರೆ. ಒಟ್ಟಿನಲ್ಲಿ ಇದನ್ನು ಸರಳವಾಗಿ ಹೇಳಬೇಕೆಂದರೆ, ಅವರು ಒಂದು ಬಾಗು ಪಥವನ್ನು (curve) ಅನುಸರಿಸುತ್ತಾರೆ. ಅವರು ಜೀವನದ ಒಂದು ಆರೋಹಣವನ್ನು ಅನುಸರಿಸುತ್ತಾರೆ. ಅಂದರೆ ಒಂದು ಮಗು ಹೇಗೆ ಬೆಳೆಯುತ್ತದೆಯೋ ಅದೇ ತೆರನಾದ ಪ್ರಗತಿಯನ್ನು ಹೊಂದಿರುತ್ತಾರೆ;

ಆದರೆ ಅಲ್ಲಿ ಈ ಪ್ರಗತಿಯ ಹಂತವು ಪರಾಕಾಷ್ಠೆಯ ಹಂತಕ್ಕೆ ಬಂದಾಗ, ಆಗ ಅಲ್ಲಿ ಪ್ರಗತಿಯ ಆಧಾರಗಳನ್ನು ಪರಿವರ್ತನಗೊಳಿಸದ ತನಕ, ಅಂದರೆ – ಈ ಶುದ್ಧ–ಭೌತಿಕ ಪ್ರಗತಿಯು ಬೌದ್ಧಿಕ ಪ್ರಗತಿಯಲ್ಲಿ ಪರಿವರ್ತನಗೊಳ್ಳದ ತನಕ, ಈ ವಕ್ರೀಭವನದ (ಬಾಗುರೇಖೆಯ) ವಿಚಲನದಲ್ಲಿ ಸಿಲುಕಿಕೊಳ್ಳುವದು. ಆಗ ಅಲ್ಲಿ ವಿಘಟನೆಯು ಪ್ರಾರಂಭಗೊಳ್ಳುವದು. ಹೀಗಾಗಿ ಇದು ದೀರ್ಘಾವಧಿಯವರೆಗೆ ಅಸ್ತಿತ್ವವನ್ನು ಹೊಂದುವದಿಲ್ಲ. ಇದು ಏಕೆ ಹೀಗಾಗುತ್ತದೆ ಎಂದರೆ, ಯಾವುದೇ ಸಂದರ್ಭದಲ್ಲಿಯೂ ಪ್ರಗತಿಯು ಈ ಭೌತಿಕ ಜಗತ್ತಿನಲ್ಲಿ ಅಚಲವಾಗಿರುವದಿಲ್ಲ. ಮತ್ತು ಚಿರಸ್ಥಾಯಿಯೂ ಆಗಿರುವದಿಲ್ಲ. ಪ್ರಗತಿಯಿಂದ "ಅತಿದೂರದ ಬಿಂದುವೂ" (apogee) ಸಹಿತ ಆಗಿರುವದಿಲ್ಲ; ಜೊತೆಗೆ ಸದಾ ಪತನಗೊಳ್ಳುತ್ತಿರುವ ಮತ್ತು ವಿಘಟನೆಗೊಳ್ಳುತ್ತಿರುವ ಹಂತದಲ್ಲೂ ಇರುವದಿಲ್ಲ. ಯಾವುದೇ ವಿಷಯವು ಉನ್ನತೀಕರಣಗೊಳ್ಳುವದಿಲ್ಲವೋ, ಅಲ್ಲಿ ಅದು ಪ್ರಗತಿಯಿಂದ ಹಿಂದೆ ಉಳಿಯುತ್ತದೆ; ಆಗ ಇದೆಲ್ಲವು ಪ್ರಗತಿ ಎನ್ನಿಸುವದೇ ಇಲ್ಲ. ಅದು ಹಿಂಜರಿತ ಇಲ್ಲವೇ ಕುಸಿತವಾಗಿರುತ್ತದೆ.

ಈ ಘಟನೆ ಮಾತ್ರ ಭೌತಿಕವಾಗಿ ಘಟಿಸಲ್ಪಡುತ್ತದೆ, ಈ ಭೌತಿಕ ಜಗತ್ತಿಗೆ ಅನಿಶ್ಚಿತವಾಗಿ ಪ್ರಗತಿ ಹೊಂದುವದರ ಬಗೆಗೆ ಯಾವುದೇ ಅರಿವು ಇರುವದಿಲ್ಲ; ಅದು ನಿಶ್ಚಿತವಾದ ಹಂತವನ್ನು ತಲುಪಿದ ಸಮಯದಲ್ಲಿಯೇ, ಆಗ ಅದು ಪ್ರಗತಿಯ ಗತಿಯಲ್ಲಿ ಬಳಲಿದ (ಆಯಾಸದ) ಸ್ಥಿತಿಯಲ್ಲಿರಬೇಕು ಅಥವಾ ಪ್ರಚಂಡ ಸಂರಚನಾ–ವ್ಯವಸ್ಥೆಯಲ್ಲಿ ಪ್ರಗತಿ ಹೊಂದಲು ಸಮರ್ಥವಾಗಿಲ್ಲ ಎನ್ನುವ ಅವಸ್ಥೆಯಲ್ಲಿ ಇರಬೇಕು. ಇದು ಯಾವುದೇ ಸಂದರ್ಭದಲ್ಲಿಯೂ ಸಹಿತ ತನ್ನ ಪ್ರಗತಿಯನ್ನು ಸ್ಥಗಿತಗೊಳಿಸಿಕೊಂಡು ಕೆಲವೇ ಅವಧಿಯಲ್ಲಿ ವಿಘಟನೆ ಹೊಂದುತ್ತದೆ. ಯಾರು ಕೇವಲ ಭೌತಿಕ–ಜೀವನ (ಲೌಕಿಕ ಜೀವನ) ವಿಧಾನವನ್ನು ಮಾತ್ರವೇ ಅನುಸರಿಸುತ್ತಿದ್ದಾರೆಯೋ, ಅವರು ಇಂತಹ ಒಂದು ರೀತಿಯ ಶೃಂಗಬಿಂದುವನ್ನು ತಲುಪುತ್ತಾರೆ. ತದನಂತರದಲ್ಲಿ ಅವರು ಅಲ್ಲಿಂದ ತಕ್ಷಣವೇ – ಅದೂ ವೇಗವಾಗಿಯೇ – ಜಾರಿ ಬಿಡುತ್ತಾರೆ. ಆದರೆ ಇದೀಗ, ಮಾನವ ಸಮುದಾಯದ ಒಕ್ಕೂಟದ ವ್ಯವಸ್ಥೆಯ ಪ್ರಗತಿಯಲ್ಲಿ, ಇದರ ಹಿಂದೆ ಆ ಭೌತಿಕ ಪ್ರಗತಿ, ಪ್ರಾಣಮಯ ಪ್ರಗತಿ (vital progress) ಮತ್ತು ಮಾನಸಿಕ ಪ್ರಗತಿ ಇರುತ್ತವೆ. ಹೀಗಾಗಿ ಈ ಮಾನಸಿಕ ಪ್ರಗತಿಯು ದೀರ್ಘಾವಧಿಯವರೆಗೂ ಸಾಗಬಲ್ಲುದು. ಅದೂ ಈ ಭೌತಿಕ ಪ್ರಗತಿಯು ತನ್ನ ಗಮ್ಯವನ್ನು ತಲುಪಿದ

ಮೇಲೆಯೂ ಸಹಿತ ಮುಂದುವರೆಯಲ್ಪಡುವದು. ಈ ರೀತಿಯ ಮಾನಸಿಕ ಪ್ರಗತಿಯಿಂದಾಗಿ, ವ್ಯಕ್ತಿಯೋರ್ವನು ಆರೋಹಣದ ಒಂದು ಹಂತವನ್ನು ಮುಂದುವರೆಸಿಕೊಳ್ಳಲು ಸಾಧ್ಯವಾಗುತ್ತದೆ. ಅದೂ ಭೌತಿಕವಾಗಿ ಪ್ರಗತಿಯು ಈಗಾಗಲೇ ನಿರ್ಬಂಧಿಸಲ್ಪಟ್ಟಿದ್ದರೂ ಸಹಿತ ಇದು ಸಾಧ್ಯವಾಗುತ್ತದೆ.

ತದನಂತರದಲ್ಲಿ ಯಾರು ಯೋಗದಲ್ಲಿ ನಿರತರಾಗಿದ್ದಾರೋ, ಮತ್ತು ತಮ್ಮ ಚೈತ್ಯಾತ್ಮದ ಬಗೆಗೆ ಪ್ರಜ್ಞೆಯನ್ನು ಹೊಂದಿದ್ದಾರೋ, ಅದರೊಡನೆ ಸಂಯೋಗಗೊಂಡು ಏಕತ್ರವಾಗಿದ್ದಾರೋ, ಆಗ ಮಾತ್ರ ಅದರೊಡನೆ ಜೀವಿಸುವದಕ್ಕೆ ಸಹವರ್ತಿಯಾಗಿರುವರು; ಇವೆಲ್ಲವೂ ಖಂಡಿತವಾಗಿಯೂ ಅವರ ಜೀವನದ ಅಂತಿಮ ಉಸಿರಿನವರೆಗೂ ಮುಂದುವರೆಯುತ್ತವೆ. ಇವರು ಸಾವಿನ ನಂತರದಲ್ಲಿಯೂ ಸಹಿತ ಈ ಕ್ರಿಯೆಯನ್ನು ನಿಲ್ಲಿಸುವದಿಲ್ಲ; ಯಾವಾಗ ತಾವಿರುವ ಸದ್ಯದ ದೇಹವು ದೀರ್ಘಾವಧಿಯವರೆಗೆ ಸಹಕರಿಸುವದಿಲ್ಲ ಎನ್ನುವದು ಸಕಾರಣವಾಗಿ ಗೊತ್ತಾಗುತ್ತದೆಯೋ, ಆಗ ಆ ದೇಹವನ್ನು ತ್ಯಜಿಸುತ್ತಾರೆ. ಆದರೆ ಅವರು ತಮ್ಮ ಪ್ರಗತಿಯನ್ನು ಮಾತ್ರ ಮುಂದುವರೆಸಿಕೊಂಡೇ ಇರುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/204–05 – ಶ್ರೀಮಾತೆ**

*

*ಸಂಘಟನೆಯ ಕೇಂದ್ರವಾಗಿ ಮತ್ತು ರೂಪಾಂತರದ ಕ್ರಿಯೆಗಳು ಯಾವಾಗಲೂ ದೇಹದಲ್ಲಿ ಇರುವ ಪ್ರಾಣ (psychic) ದ ಅಸ್ತಿತ್ವವನ್ನು ತೋರಿಸುತ್ತದೆ. ಆದ್ದರಿಂದ, ಈ ಪ್ರಗತಿಯು ಮುಂದುವರೆಯುತ್ತದೆ ಎನ್ನುವ ಕೆಲವರ ಅಭಿಪ್ರಾಯದ ಪ್ರಕಾರ ಅದು ಹೆಚ್ಚೂ–ಕಡಿಮೆ ಪೂರ್ತಿಯಾಗಿದ್ದು ಮತ್ತು ಎರಡು ಭೌತಿಕ–ಜೀವನಗಳ ಮಧ್ಯದ ಸಂಕ್ರಮಣದ ಅವಧಿಯಲ್ಲಿ (ಅವಧಿಗಳಲ್ಲಿ) ತೀವ್ರಗೊಳ್ಳುತ್ತದೆ ಎಂದು ನಂಬುದು ದೊಡ್ಡ ತಪ್ಪಿಗೆ ಕಾರಣವಾಗುತ್ತದೆ. ಸಾಮಾನ್ಯವಾಗಿ, ಆ ಪ್ರಾಣವು ವಿಶ್ರಾಂತಗೊಳ್ಳುವ ಹಂತಕ್ಕೆ ಪ್ರವೇಶಿಸುವಲ್ಲಿ ಮತ್ತು ಅದರ ಮಜಲುಗಳಲ್ಲಿ ಹೆಚ್ಚು–ಕಡಿಮೆ ಅಲ್ಪಾಯುಷಿ (ephimeral life) ಜೀವನವನ್ನು ಹೊಂದಿದ್ದು, ಅದೂ ಸಹತ ಅದರದೇ ಕ್ಷೇತ್ರದಲ್ಲಿಯೇ ಎಲ್ಲವೂ ವಿಘಟನೆಗೊಳ್ಳುವ ಸ್ಥಿತಿಯಲ್ಲಿ ಇರುತ್ತದೆ.*

*ಭೂ–ಬದುಕಿನ ಜೀವನವು ಯಾವಾಗಲೂ ಪ್ರಗತಿದಾಯಕ–ವಾಗಿರುತ್ತದೆ (ವಿಕಸನದಾಯಕವಾಗಿರುತ್ತದೆ). ಅದು ಇಲ್ಲಿಯೇ ಅಂದರೆ ಈ ಭೂಮಿಯ ಮೇಲೆಯೇ ಆಗಬೇಕು; ಇದು ಸಾಧ್ಯವಿರುವ ಪ್ರಗತಿಯಾಗಿದೆ, ಅದೂ ಈ ಭೂ–ಬದುಕಿನ ಅಸ್ತಿತ್ವದಲ್ಲಿಯೇ ಘಟಿಸುತ್ತದೆ. ಮತ್ತೆ ಈ ಪ್ರಾಣವು ಒಂದು ಜನ್ಮದಿಂದ ಮತ್ತೊಂದು ಜನ್ಮಕ್ಕೆ ಈ ಪ್ರಗತಿಯನ್ನು ಮುಂದುವರೆಸಿಕೊಂಡು ಹೋಗುತ್ತದೆ. ಆ ಇದು ತನ್ನದೇ ವಿಕಸನಾ ವಿಧಾನವನ್ನೂ ಮತ್ತು ಅಭಿವೃದ್ಧಿಯನ್ನೂ ತನ್ನಷ್ಟಕ್ಕೆ ತಾನೇ ಸಂಘಟನೆಗೊಳಿಸಿಕೊಂಡಿರುತ್ತದೆ.*

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/269–70 – ಶ್ರೀಮಾತೆ**

*

## ನವಜನ್ಮದ ಉದ್ದೇಶ

– ಅನುವಾದ: ಪುಟ್ಟು ಕುಲಕರ್ಣಿ

### ನವಜನ್ಮವು ಪ್ರತಿಪಲವೂ ಅಲ್ಲ/ಶಿಕ್ಷೆಯೂ ಅಲ್ಲ

ಒಂದು ವೇಳೆ ನಾವು ಯಾವುದೇ ವ್ಯಕ್ತಿಗೆ ಅವನ ಉತ್ತಮ ವ್ಯಕ್ತಿತ್ವಕ್ಕೆ ಮತ್ತು ಜೊತೆಜೊತೆಗೆ ಅವನ ಒಳ್ಳೆಯತನವನ್ನೂ ಸಹಿತ – ಅದರ ಬಗೆಗೆ ಅದೆಷ್ಟೇ ನಿಖರವಾಗಿರುವ ಹಾಗೂ ಗೌರವಾನ್ವಿತವಾದ ಲೆಕ್ಕಿಗನಂತೆ ಎಷ್ಟೇ ಪರಮೋಚ್ಚನೆಂದು ಗಣಿಸಿದರೂ ಸಹಿತ – ಅವನು ಎಷ್ಟೇ ಪ್ರಮಾಣದಲ್ಲಿ ಸುಖಭೋಜನದಿಂದ ಸಂತೃಪ್ತಗೊಂಡಿದ್ದರೂ ಹಾಗೂ ಅವನ ಬ್ಯಾಂಕ್ ಖಾತೆಯಲ್ಲಿ ಎಷ್ಟೇ ಪ್ರಮಾಣದಲ್ಲಿ ಹಣದ ಝಣತ್ಕಾರವನ್ನು ಹೊಂದಿದ್ದರೂ ಸಹಿತ, ಮತ್ತೆ ಅದೆಷ್ಟೋ ಬಗೆಯ ಸೌಲಭ್ಯಗಳನ್ನು ಅವನಲ್ಲಿ ಖಚಿತಗೊಳಿಸಿದ್ದರೂ ಸಹಿತ ನಾವು ಅವನನ್ನು ಉತ್ತಮನೆಂದು ಕರೆಯುವದಕ್ಕೆ ಈ ಮಾನಕಗಳೇ ಕಾರಣವಾಗಿರುವದಿಲ್ಲ. ಅದೇ ಸಮಯಕ್ಕೆ ಪಾಪದ ಕೃತಿಗಳಿಂದ ಪ್ರಚ್ಛನ್ನಗೊಂಡ ಘಟನೆಗಳನ್ನು ಎತ್ತಿ ಓರ್ವ ವ್ಯಕ್ತಿಯ ಕಡೆಗೆ ಬೆರಳು ಮಾಡಿ ತೋರಿಸುವ ಜೊತೆಗೆ ಅವನ ಬಗೆಗೆ ಬೊಬ್ಬೆ ಹೊಡೆಯುತ್ತ, “ಓ ಎಂಥ ಕ್ರೂರಿ, ಹುಚ್ಚ ನೀನು!, ಒಂದು ವೇಳೆ ನೀನು ಈ ದುಷ್ಟ ನಿಂದನೀಯ ಮೌಲ್ಯಗಳಿಗೆ ಪಕ್ಕಾಗದಿದ್ದಲ್ಲಿ, ಆಗ ನೀನು ದೇವರಿಂದ ಶಾಸನ–ಕ್ಕೊಳಪಡುತ್ತಿದ್ದಲ್ಲಿ ಅಥವಾ ಕನಿಷ್ಠಪಕ್ಷ ಒಳ್ಳೆಯತನದಿಂದ ಶಾಸನಕ್ಕೊಳಪಡಿಸುತ್ತಿದ್ದಲ್ಲಿ, ಈ ರೀತಿಯಾಗಿ ಚಿಂದಿ–ಚಿಂದಿಯಾಗಿ, ಹಸಿವಿನಿಂದ ಬಳಲಿ, ಅದೃಷ್ಟಹೀನವಾಗಿ

ದುಃಖಗಳನ್ನೇ ಬೆನ್ನತ್ತಿಕೊಂಡು, ಗೌರವಾನ್ವಿತ ವಲಯದಿಂದ ಏಕೆ ತಿರಸ್ಕೃತನಾಗಿರುತ್ತಿರಲಿಲ್ಲ, ಅಲ್ಲವೇ?" ಹೌದು, ನಿನ್ನನ್ನು ಧರ್ಮಗಳು ಕ್ರೂರಿ ಎಂದು ನಿರ್ಣಯ ನೀಡಿವೆ, ಏಕೆಂದರೆ ನಿನ್ನ ಕ್ರಿಯೆಗಳು ಛಿದ್ರ–ಛಿದ್ರವಾಗಿವೆ. ದೇವರ ನ್ಯಾಯವೇ ಯಾವಾಗಲೂ ಪ್ರತಿಷ್ಠಾಪಿಸಲ್ಪಡುತ್ತದೆ. ಈ ಪರಮೋಚ್ಚ ಜಾಣ್ಮೆಯ ಜೀವಿಯು ಅದೃಷ್ಟವಶಾತ್ ಮಾನವನ ಬಾಲಿಶತನಕ್ಕಿಂತಲೂ ಉದಾತ್ತವಾಗಿದ್ದು ಜೊತೆಗೆ ಜಾಣ್ಮೆಯನ್ನೂ ಹೊಂದಿರುತ್ತದೆ. ಆದರೆ ನಾವೀಗ ಅದನ್ನು ಸಮಾಧಾನಕರವಾಗಿ ಸ್ವೀಕರಿಸೋಣ! ಅದು ತೋರಿಸುತ್ತಿರುವ ದೃಷ್ಟಾಂತಗಳಲ್ಲಿ, ಓರ್ವ ಸಜ್ಜನ ವ್ಯಕ್ತಿಯು ಅವನಿಗೆ ಅದೃಷ್ಟದ ಕೃಪೆ ಇರದೇ, ಸುಗ್ರಾಸ ಭೋಜನ ಮತ್ತು ಧನವೂ ಇರದಿರುವದನ್ನು ನೋಡಿದಾಗ, ಅದಕ್ಕೆ ಕಾರಣವೆಂದರೆ, ಅವನು ನಿಜವಾಗಿಯೂ ಓರ್ವ ನೀಚ ವ್ಯಕ್ತಿಯಾಗಿದ್ದು ಅವನು ತಾನು ಮಾಡಿದ ಅಪರಾಧಗಳಿಂದಾಗಿ ತೊಂದರೆ ಅನುಭವಿಸುತ್ತಿದ್ದಾನೆ, ಅವನು ಹಿಂದಿನ ಜನ್ಮದ ಜೀವನದ ಒಂದು ಹಂತದಲ್ಲಿ ನೀಚನೇ ಆಗಿದ್ದು, ತದನಂತರದ ಅವಸ್ಥೆಯಲ್ಲಿ ತಾಯಿಯ ಗರ್ಭದಲ್ಲಿ ಭ್ರೂಣಾವಸ್ಥೆಯಲ್ಲಿ ಒಂದು ಹೊಸ ಪುಟಕ್ಕೆ ಬದಲುಗೊಂಡಿರುತ್ತಾನೆ; ಮತ್ತೆ ಅತ್ತಣ (Yonder) ಜೀವನದ (ಹಿಂದಿನ ಜನ್ಮದ) ಕ್ರೂರಿಯೋರ್ವನು ಈಗ ಪ್ರಸಿದ್ಧನಾಗಿ ಏಳ್ಗೆ ಹೊಂದಿದ್ದರೆ, ಮತ್ತು ವೈಭವಪೂರ್ಣವಾಗಿ ಈ ಜಗತ್ತಿನಲ್ಲಿ ಮಿಂಚುತ್ತಿದ್ದರೆ (ವಿಜೃಂಭಿಸುತ್ತಿದ್ದರೆ) ಅದಕ್ಕೆ ಆ ವ್ಯಕ್ತಿಯು ತನ್ನ ಹಿಂದಿನ ಜನ್ಮದಲ್ಲಿ ತೋರಿದ್ದ ಒಳ್ಳೆಯತನ – ಒಬ್ಬ ಸಂತ ಸದೃಶ ವ್ಯಕ್ತಿತ್ವದ ಜೀವನವನ್ನು ಹೊಂದಿದ್ದು ಅದರಿಂದ ಪರಿವರ್ತನೆ ಹೊಂದುವವರೆಗೂ – ಅದೂ ಅವನ ಅನುಭವದ ಆ ತಾತ್ಕಾಲಿಕ ಆಡಂಬರದ ಸದ್ಗುಣವೇ ಆಗಿದ್ದರೂ, ಆ ಪಾಪದ ಪಂಥದ ಎಡೆಗೆ ಸಾಗುವವರೆಗೂ, ಸರ್ವಸ್ವವೂ ಇಲ್ಲಿ ವಿವರಿಸಲ್ಪಟ್ಟಿದೆ. ಎಲ್ಲವೂ ಸಹಿತ ಸಮರ್ಥನೀಯಗೊಳಿಸಲ್ಪಟ್ಟಿದೆ; ನಾವು ನಮ್ಮ ತಪ್ಪುಗಳಿಂದಲೇ ಮತ್ತೊಂದು ಜನ್ಮದ ದೇಹದಲ್ಲಿ ಬಾಧೆಗೊಳಪಡುತ್ತೇವೆ; ಈ ಜನ್ಮದ ಸನ್ನಡತೆಗಳಿಗೆ ಮುಂದಿನ ಜನ್ಮದ ದೇಹದಲ್ಲಿ ನಾವು ಗೌರವಿಸಲ್ಪಡುತ್ತೇವೆ; ಹೀಗಾಗಿ ಇದು ಅವಿರತವಾಗಿ ಮುಂದುವರೆಯುತ್ತದೆ. ಅನಂತತಾ ತತ್ವದಂತೆಯೇ (ad infinitum) ಇರುತ್ತದೆ. ತತ್ವಜ್ಞಾನಿಗಳು ಇದನ್ನು ಒಂದು ಸೂಕ್ತವಲ್ಲದ ವ್ಯವಹಾರವೆಂದು ಗುರುತಿಸಿ, ಮತ್ತೆ ಈ ಪಾಪ ಮತ್ತು ಪುಣ್ಯದ ಹಿಡಿತದಿಂದ ಮುಕ್ತಿ ಪಡೆಯಲು ಪರಿಹಾರವೊಂದನ್ನು ಸೂಚಿಸಿರುವದು ಮತ್ತು ಪರಮಾವಧಿ ಸನ್ನಡತೆಯನ್ನು ಜೋಡಿಸುವ (ಸಂಮಿಲನಗೊಳಿಸುವ) ಮೂಲಕ, ಈ ಅತ್ಯಾಕರ್ಷಕವಾಗಿ ಅಧಿಪತ್ಯಕ್ಕೊಳಪಡುವ ಈ ಹಂತದಿಂದ ಹೊರ ಬರುವ ಪರಿಹಾರವೊಂದನ್ನು ನೀಡಿರುವದರಲ್ಲಿ ಆಶ್ಚರ್ಯವೇನೂ ಇಲ್ಲ.

ನಿಸ್ಸಂಶಯವಾಗಿಯೂ ಈ ವಿಷಯಗಳ ಯೋಜನೆಯು ಕೇವಲ ಪ್ರಾಚೀನ ಆಧ್ಯಾತ್ಮಿಕ, ಲೌಕಿಕದ ಆಶೆ–ಆಮಿಷ ಮತ್ತು ಬೆದರಿಕೆಗಳ ವ್ಯತ್ಯಾಸವಾಗಿರುತ್ತದೆ. ಸನ್ನಡತೆಗಾಗಿಯೇ ದೊರೆಯಲಿರುವ ಪರಮ ಸಂತೋಷದ ಸ್ವರ್ಗದ ಆಮಿಷವನ್ನು ಮತ್ತು ಕ್ರೂರಿಗಳಿಗೆ ಆ ನರಕದಲ್ಲಿನ ಶಾಶ್ವತ ದಹನದಲ್ಲಿ ಬೇಯುವ ಅಥವಾ ಪಾಶವೀಯ ಚಿತ್ರ ಹಿಂಸೆಗಳ ಶಿಕ್ಷೆಯ ಭಯವನ್ನು ಹೊಂದಿವೆ.

ಲೋಕದ ನಿಯತಿ(ಜಗತ್ತಿನ ಶಾಸನ)ವೆಂದರೆ ಪ್ರಮುಖವಾಗಿ ಅದೊಂದು ಉತ್ತಮ ಪ್ರತಿಫಲಗಳನ್ನು ಅಥವಾ ಶಿಕ್ಷೆಯನ್ನು ವಿಧಿಸುವ ಒಂದು ವ್ಯವಸ್ಥೆ ಎಂದು ಸಂಜ್ಞೇಯ(Cognate)ಗೊಳಿಸಲಾಗಿದ್ದು, ಇದು ಆ ಪರಮಾತ್ಮನು (Supreme being) ನ್ಯಾಯಾಧೀಶನಾಗಿ, "ಪಿತನಾಗಿ", ಮತ್ತು ಶಿಕ್ಷಕನಾಗಿ ಹೇಗೆ ಒಳ್ಳೆಯ ಮಕ್ಕಳಿಗೆ ಲಾಲಿ–ಪಾಪ್‌ಗಳನ್ನೂ ಕೊಡುತ್ತ, ಮತ್ತು ಶಿಕ್ಷಕನಾಗಿ ದುಷ್ಟ ಪ್ರವೃತ್ತಿಯ ಪೋಕರಿಗಳಿಗೆ ಛಡಿಯೇಟಿನ (caning) ಮೂಲಕ ಶಿಕ್ಷಿಸುತ್ತಾ ಇರುವದರ ಮೂಲಕ ಸಂಜ್ಞೇಯಗೊಳಿಸಲಾಗಿದೆ.

ಇದರ ಜೊತೆ–ಜೊತೆಗೇ, ಬರ್ಬರದ ಮತ್ತು ಕೆಲವೊಮ್ಮೆ ಅನಾಗರಿಕ ಅಥವಾ ಉಗ್ರವಾಗಿರುವ ಬಗೆಗೆ ವಿಚಾರಾರ್ಹವಲ್ಲದ ಮತ್ತು ಯಾವಾಗಲೂ ಸಾಮಾಜಿಕ ಅಪರಾಧಗಳಿಗೆ ಸಾಮಾಜಿಕವಾಗಿ ಅವಮಾನಗೊಳಿಸುವ ಮೂಲಕ ಶಿಕ್ಷೆ ವಿಧಿಸುವ ವ್ಯವಸ್ಥೆ ಹೊಂದಿರುತ್ತದೆ. ಹೀಗಾಗಿ ಮಾನವ ಸಮಾಜವು, ಈಗಲೂ ಸಹಿತ ಒಂದು ತೃಪ್ತಿದಾಯಕವಾದ ಸೂಕ್ತ ಪಥವನ್ನು ಕಂಡುಕೊಳ್ಳಲು ಅಸಮರ್ಥವಾಗಿದೆ. ಅದನ್ನು ಈಗಲೂ ಅರಸಬೇಕಾಗಿದೆ. ಮನುಷ್ಯನು ಉದ್ದೇಶಪೂರ್ವಕವಾಗಿಯೇ ಆಗ್ರಹ ಪಡಿಸುವ ಮೂಲಕವೇ ಸತತವಾಗಿ, ತನ್ನದೇ ಕಲ್ಪನೆಯ ರೂಪಣೆಗಳನ್ನು (images), ಶಿಲ್ಪಗಳನ್ನೂ ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಮತ್ತೆ ಮೇಲಾಗಿ ಇವೆಲ್ಲ ವಿಚಾರಗಳೂ ಶಿಶುವಿನ ಪ್ರತಿಬಿಂಬವಾಗಿ ಮತ್ತು ಅನಾಗರಿಕವಾಗಿ ಹಾಗೂ ಪಶುಭಾವದ (ನಮ್ಮಲ್ಲಿರುವ) ಪ್ರತಿಬಿಂಬಗಳೇ ಆಗಿದ್ದು, ನಾವೀಗಲೂ ಅವುಗಳನ್ನೇ ರೂಪಾಂತರಗೊಳಿಸಿಕೊಳ್ಳಲು ಹಾಗೂ ಅವುಗಳಿಂದ ಹೊರ ಬರಲು ವಿಫಲರಾಗಿದ್ದೇವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/265–66**

*

## ನವಜನ್ಮದ ನೈಜ ಅಡಿಪಾಯ

ಈ ನವಜನ್ಮದ ಸಿದ್ಧಾಂತದ ನೈಜ ಅಡಿಪಾಯ(ಆಧಾರ)ವೆಂದರೆ, ಅದು ಆತ್ಮದ ವಿಕಾಸವಾಗಿದೆ, ಅಥವಾ, ಜಡದ ಗವಸಿನಿಂದ ಪುಷ್ಪ ವಿಕಸನದ ತೆರದಿ ಅರಳಿಕೊಂಡು (efflorescence) ಮತ್ತು ತನ್ನನು ತಾನೇ ಅರಿತುಕೊಳ್ಳುವ ಆತ್ಮಸಾಕ್ಷಾತ್ಕಾರಗೊಳಿಸಿಕೊಳ್ಳುವ ಕ್ರಿಯೆಯಾಗಿದೆ..... ಹಾಗಾದರೆ ಈ ವಿಕಾಸದ ಗುರಿಯಾದರೂ ಏನು? ಇದು ಸಾಂಪ್ರದಾಯಕವೂ ಅಲ್ಲ ಅಥವಾ ಸದ್ಗುಣಶೀಲದಲ್ಲಿಯೂ ಆಸಕ್ತಿ ಇರದ ಸೂಕ್ಷ್ಮವಾದ ಒಳ್ಳೇತನದ ಚಿಕ್ಕ–ಚಿಕ್ಕ ಅಂಶಗಳಲ್ಲಿ (ಚಿಕ್ಕ–ಚಿಕ್ಕ ನಾಣ್ಯಗಳಂತೆ) ಅದು ಈ ಭೌತಿಕ ಜಗತ್ತಿಗೆ (ಲೌಕಿಕ ಜಗತ್ತಿಗೆ) ಅಂಶಾಂಶವಾಗಿ ದೊರೆತ ಪ್ರತಿಫಲ. ಆದರೆ ಇದು ದಿವ್ಯ ಜ್ಞಾನದವರೆಗೆ ಅವಿರತವಾದ ಪ್ರಗತಿ(ವಿಕಸನ)ವಾಗಿರುತ್ತದೆ, ದಿವ್ಯ ಶಕ್ತಿ, ದಿವ್ಯ ಪ್ರೇಮ ಮತ್ತು ಪರಿಶುದ್ಧತೆಯ ಪ್ರಗತಿಯಾಗಿರುತ್ತದೆ.

ಪ್ರೇಮಪೂರ್ವಕವಾಗಿ ಗೈದ ಕಾರ್ಯಗಳಿಂದ ಒಂದು ಖಚಿತ ಪ್ರತಿಫಲ ದೊರೆಯುವದು. ಸತತವಾಗಿಯೂ ಸಾಮರ್ಥ್ಯದಲ್ಲಿ ಪ್ರಗತಿ ಹೊಂದುವ ಮತ್ತು ಪ್ರೇಮದ ತೋಷವು ಭಾವೋತ್ಕರ್ಷದಲ್ಲಿರುವ ಆತ್ಮವು ಸರ್ವಸ್ವವನ್ನೂ ಆಲಂಗಿಸಿಕೊಳ್ಳುತ್ತದೆ. ಮತ್ತು ವೈಶ್ವಿಕ ಅನುರಾಗವು, ಸೂಕ್ತವಾದ ಜ್ಞಾನದಿಂದ ಕೈಕೊಂಡ ಕಾರ್ಯಗಳಿಂದಾಗಿ, ಅನಂತ ಪ್ರಕಾಶದಲ್ಲಿ ನಿತ್ಯ ನಿರಂತರವಾಗಿ ಪ್ರಗತಿ ಹೊಂದಲು ದೊರೆತ ಪ್ರತಿಫಲ ಇದಾಗಿದೆ.

ಈ ಸಂಗತಿಗಳು ಮಾತ್ರ ಸತ್ಯದ ಸೂಕ್ತವಾದ ಆಚರಣೆಗಳಾಗಿದ್ದು (ಪುಣ್ಯಾಚರಣೆ) (virtue) ಮತ್ತೆ ಈ ಇದು ಅಲ್ಲಿ ದೊರೆತ ಏಕಮೇವ ಪ್ರತಿಫಲವಾಗಿರುತ್ತದೆ. ಅದರಲ್ಲಿಯೂ ಈ ಪ್ರೇಮಪೂರ್ವಕವಾದ ಕರ್ತವ್ಯಗಳಿಂದೊದಗುವ ಪ್ರತಿಫಲವು, ತನ್ನ ಸಾಮರ್ಥ್ಯದಲ್ಲಿ ಸದಾ ಪ್ರಗತಿಯನ್ನು ಹೊಂದುತ್ತಲೇ ಜೊತೆಗೆ ಪರಮ ಸಂತೋಷದಾಯಕವಾದ ಸಮಾಧೀ ಸ್ಥಿತಿಯ ಹಂತದಲ್ಲಿ ಆತ್ಮದ ಇಡೀ ಸರ್ವಸ್ವವೂ ಮತ್ತು ವೈಶ್ವಿಕ ಭಾವನೆಯ ತೋಷದಲ್ಲಿ ಇರುತ್ತದೆ. ಈ ತೆರನಾದ ಸೂಕ್ತ ಜ್ಞಾನದಿಂದ ದೊರಕುವ ಪ್ರತಿಫಲವೆಂದರೆ, ಆ ಅನಂತತೆಯ ತಾಣವಾದ ದಿವ್ಯಜ್ಯೋತಿಯಯೆಡೆಗೆ ನಿತ್ಯ–ನಿರಂತರವಾಗಿ (perpetually) ಬೆಳೆಯುವದಾಗಿರುತ್ತದೆ; ಇದೆ ತೆರನಾದ ಮತ್ತೊಂದು ಸೂಕ್ತವಾದ ಶಕ್ತಿಯಾಗಿರುವ ಕ್ರಿಯೆಗಳು ಆ ದೈವೀ ಬಲವು ಹೆಚ್ಚು ಹೆಚ್ಚಾಗಿ ನೆಲೆ

ನಿಲ್ಲುವ, ಮತ್ತು ಈ ಪರಿಶುದ್ಧವಾದ ಕ್ರಿಯೆಗಳು ಅಹಂಕಾರದ ಭಾವದಿಂದ ಮುಕ್ತಗೊಳ್ಳುವ ಜೊತೆಗೆ ನಿಷ್ಕಲಂಕವಾದ ವ್ಯಾಪಕತ್ವಕ್ಕೆ (immaculate wideness) ಅಂದರೆ ಎಲ್ಲ ಸರ್ವ ವಸ್ತು–ವಿಷಯಗಳು ರೂಪಾಂತರಗೊಂಡು ಮತ್ತು ಆ ದಿವ್ಯ ಸಮತೆಯಲ್ಲಿ ಸಂಯೋಜಗೊಳ್ಳುವವೋ ಅಲ್ಲಿಯವರೆಗೆ ಬೆಳೆಯುವದಾಗಿರುತ್ತದೆ.

ಇನ್ನುಳಿದಂತೆ ದೊರೆಯುವ ಇತರೆ ಪ್ರತಿಫಲಗಳನ್ನು ಗಮನಿಸಿದರೆ, ಬಾಲ್ಯ ಸಹಜ ಅಜ್ಞಾನ ಮತ್ತು ಮೂರ್ಖತನದ ಹಂತದಲ್ಲಿ ಬಂಧಿಸಲ್ಪಟ್ಟು ಉಳಿದುಬಿಡುವ ಘಟನೆಯಾಗಿದೆ; ಹಾಗೂ ಇವೆಲ್ಲವೂ ಅಪಕ್ವತೆಯಿಂದ ಮತ್ತು ಅಪರಿಪೂರ್ಣತೆಯಿಂದ (unripeness and imperfection) ದೊರೆಯುವ ಪ್ರತಿಫಲಗಳಾಗಿವೆ. ಇಷ್ಟೆಲ್ಲಾ ಇದ್ದ ಮೇಲೆ ಈ ಯಾತನೆ ಮತ್ತು ಸಂತೋಷ, ದುರಾದೃಷ್ಟ ಮತ್ತು ಅದೃಷ್ಟಗಳು ಏಕೇ? ಇವೆಲ್ಲವೂ ಆತ್ಮವು ತರಬೇತಿ ಹೊಂದುತ್ತಿರುವ ಅವಧಿಯಲ್ಲಿ, ಸಹಾಯ ಮಾಡುವ, ಪರಿಕರಗಳಾಗಿ, ಮಾರ್ಗಗಳಾಗುವ, ಶಿಸ್ತನ್ನು ಕಲಿಸುವ, ಪರೀಕ್ಷೆಗಳನ್ನು ಒಡ್ಡುವ, ಅಗ್ನಿದಿವ್ಯಗಳಾಗಿದ್ದು (ordeal) – ಬಹುತೇಕವಾಗಿ (ಒಮ್ಮೊಮ್ಮೆ) ಈ ಉತ್ಕರ್ಷವೇ ಯಾತನೆಯ ಅಗ್ನಿಪರೀಕ್ಷೆಯನ್ನು ತರುತ್ತದೆ. ಆದಾಗ್ಯೂ ಈ ಪ್ರತಿಕೂಲ ಹಾಗೂ ಯಾತನೆಗಳೇ ಪಾಪಕಾರ್ಯಗಳಿಗೆ ಇರುವ ಶಿಕ್ಷೆಗಿಂತಲೂ ಉತ್ತಮವಾದ ಪ್ರತಿಫಲವಾಗಿದ್ದು ಇವು ಸದ್ಗುಣಕ್ಕೆ ದೊರೆಯುತ್ತವೆ. ಎಲ್ಲಿಯವರೆಗೂ ಆತ್ಮವು ಸತತ ಹೋರಾಟ ಮಾಡುತ್ತಲೇ ಪರಿಶುದ್ಧಗೊಳ್ಳುತ್ತಿರುವದೋ ಮತ್ತು ಸಾಕ್ಷಾತ್ಕಾರಗೊಳಿಸಿ–ಕೊಳ್ಳುವದಿಲ್ಲವೋ ಅಲ್ಲಿಯವರೆಗೂ ಇವು ಸಹಜವಾಗಿ ಕಾರ್ಯ ನಿರ್ವಹಿಸುತ್ತವೆ. ಇದನ್ನು ಕೇವಲ ಓರ್ವ ನ್ಯಾಯಾಧೀಶನ ಕಠೋರ ನ್ಯಾಯನಿರ್ಣಯದಂತಾಗಲೀ, ಸದಾ ಉಗ್ರತೆಯಲ್ಲಿಯೇ ವ್ಯಗ್ರವಾಗಿರುವ ಆಡಳಿತಗಾರನ ಕೋಪದಂತಾಗಲೀ, ಅಥವಾ ಈ ಆತ್ಮವು ದೇವರ ಸಂಗಡ ವ್ಯವಹರಿಸುತ್ತಿರುವ ಸಂದರ್ಭಗಳಲ್ಲಿನ ಬಹಳಷ್ಟು ಸಮಯ ಮೇಲ್ತೋರಿಕೆಯ (ಹುರುಳಿಲ್ಲದ) ಅಂಶಗಳಲ್ಲಿ ಈ ದುಷ್ಟತನದಿಂದ ಉದ್ಭವಿಸುವ ಫಲಿತಗಳನ್ನು ಯಾಂತ್ರಿಕವಾಗಿ ಹಿಮ್ಮೆಟ್ಟುವಂತೆ ಮಾಡುತ್ತದೆ. ಹಾಗೂ ಉತ್ಕ್ರಾಂತಿ ನಿಯಮಕ್ಕೆ ವಿರೋಧವಾಗಿರುವದಿಲ್ಲ. ಹಾಗಾದರೆ ಈ ಜಗತ್ತಿನಲ್ಲಿರುವ ಲೌಕಿಕದ ವೈಭವ, ಸಂಪತ್ತು, ಸಂತಾನ, ಕಲೆಯ ಮೂಲಕ ಮನೋರಂಜನೆ, ಸೌಂದರ್ಯ, ಶಕ್ತಿ–ಬಲಗಳೆಲ್ಲ ಏಕೇ? ಅವೆಲ್ಲವೂ

ಯಾವುದೇ ಅತ್ಮಗ್ಲಾನಿ ಇಲ್ಲದೇ, ಮತ್ತೆ ಈ ದಿವ್ಯ ತೋಷಗಳು ನಮ್ಮ ಭೌತಿಕ ಅಸ್ತಿತ್ವದ ಮೇಲೆ ಆ ದೇವನೇ ವರ್ಷಿಸಿದ್ದಲ್ಲಿ ಅದೇ ಸೂಕ್ತವಾಗಿರುತ್ತದೆ. ಆದರೆ ಇವೆಲ್ಲವೂ ಮೊದಲು ಇತರರಿಗೂ ಎನ್ನುವದು ಅದರಲ್ಲೂ ಸರ್ವರಿಗೂ ನಿರ್ಧರಿತವಾಗಿರಬೇಕು. ಇವೆಲ್ಲವೂ ನಮಗೆ ವಿಶ್ವ ನಿಬಂಧನೆಗಳ ಪ್ರಕಾರ ಎನ್ನುವದು ನಿರ್ಣಿತವಾಗಬೇಕು. ಈ ಮೂಲಕ ಪೂರ್ಣತೆಯನ್ನು ಸಮೀಪಕ್ಕೆ ತರುವ ಪಥವಾಗಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/267–68 – ಶ್ರೀ ಅರವಿಂದರು**

*

*ನಿತ್ಯ ಸ್ಥಾಯಿಯಿಹ ದೇವಜ್ವಾಲೆಯಲಿ ಚೈತನ್ಯವಿತ್ತು ಆಗ,*
*ಪರಮ ಆಶ್ಚರ್ಯ ರೂಪದಲಿ ತಾನು ಪ್ರಜ್ವಲಿತ ಭಾಗವಾಗ,*
*ತನ್ನ ಸೌಂದರ್ಯ ತನ್ನ ಪ್ರಭೆಯನ್ನು ತನ್ನಲ್ಲೆ ಕಂಡುಕೊಂಡು,*
*ಆ ಕಲಾಕಾರ, ನಮ್ಮ ನಶ್ವರದ ಬಡ–ಬದುಕಿನಲ್ಲು ಅಮರ.*

**Savitri, p. (ಸಾವಿತ್ರಿ ಪುಟ) 23 – ಶ್ರೀ ಅರವಿಂದರು**

*

**ನವಜನ್ಮ ಮತ್ತು ಪ್ರಗತಿ**

ಎಲ್ಲರಿಗೂ ಸಮ್ಮತಿಸುವ ಉದಾಹರಣೆಯೊಂದನ್ನು ಕೊಡುವದಾದಲ್ಲಿ, ಚೈತ್ಯ ಪುರುಷ (psychic being) ನು ಓರ್ವ ವ್ಯಕ್ತಿಯ (ಪುರುಷನ) ರೂಪದಲ್ಲಿದ್ದಾಗ, ಓರ್ವ ಲೇಖಕನಾಗಿ ಅವನ ಅನುಭವಗಳನ್ನು ಪುಸ್ತಕಗಳ ಮೂಲಕ ಮತ್ತು ಪ್ರವಚನಗಳ ಮೂಲಕ ರೂಪಾಂತರಗೊಳಿಸಿದ್ದಲ್ಲಿ ಅನುಭವವನ್ನು ಹೊಂದಿದ್ದಾನೆ ಎಂದುಕೊಳ್ಳಬಹುದು; ಈ ಮೂಲಕ ಅವನು, ಅವನ ಸತ್ತೆಯು (being) ಜೀವಿಸಿದ್ದ ಆ ನಿಗದಿತವಾದ ವಲಯದ ಹಾಗೂ ಆ ಅನುಭವಗಳನ್ನು ಅಭಿವ್ಯಕ್ತಗೊಳಿಸಿರುತ್ತಾನೆ. ಆದರೂ ಅಲ್ಲಿನ ಕೆಲವೊಂದು ವಲಯದ ಅನುಭವಗಳು ತಪ್ಪಿಸಿಕೊಂಡಿರುತ್ತವೆ. “ನಾನು ಬುದ್ಧಿಯೊಡನೆ ಬದುಕಿದ್ದೇನೆ, ಅದರಲ್ಲೂ ಜೀವನಕ್ಕೆ ಬೌದ್ಧಿಕ ಪ್ರತಿಕ್ರಿಯೆಯ ಮೂಲಕ ಬದುಕಿದ್ದೇನೆ, ಆದರೆ ಇದೀಗ ನಾನು ನನ್ನ ‘ಅನುಭವಗಳ ಭಾವನೆಗಳ ಸಂಗಡ ಬದುಕಲು’ ಇಚ್ಛಿಸುತ್ತೇನೆ ಎಂದು ಅವನು ಹೇಳುತ್ತಾನೆ. ಸಾಮಾನ್ಯವಾಗಿ ಈ ತೆರನಾದ,

ಬೌದ್ಧಿಕತೆಯ ತೀವ್ರ ಗತಿವಿಧಿಯ (over activity) ಕ್ರಿಯಾಶೀಲತೆಯು – ಅದೂ ಸಾಮಾನ್ಯ ಜೀವನದಲ್ಲಿ – ಸಂವೇದನೆಗಳ ಸಾಮರ್ಥ್ಯವನ್ನು ಕುಂಠಿತಗೊಳಿಸುತ್ತದೆ. ಆದ್ದರಿಂದ, ಮತ್ತೊಂದು ಆಯಾಮದ ಅನುಭವವನ್ನು ಪಡೆದುಕೊಳ್ಳಲು, ಅಭಿವೃದ್ಧಿ ಹೊಂದಲು, ಅವನು ತನ್ನ ಬೌದ್ಧಿಕ ಔನತ್ಯವನ್ನು ಪರಿತ್ಯಜಿಸುತ್ತಾನೆ; ಅವನು ಒಬ್ಬ ಪ್ರತಿಭಾಶಾಲಿಯಾಗಿ ಮುಂದುವರೆಯುವದಿಲ್ಲ; ಅವನೊಬ್ಬ ಪ್ರತಿಭಾವಂತ ಬರಹಗಾರನಾಗುವದಿಲ್ಲ, ಅವನೊಬ್ಬ ಸಾಮಾನ್ಯ ವ್ಯಕ್ತಿಯಾಗುತ್ತಾನೆ. ಆದರೆ ಅತ್ಯಪೂರ್ವವಾದ ಹೃದಯ ವೈಶಾಲ್ಯತೆಯನ್ನು ಹೊಂದಿರುತ್ತಾನೆ. ದಯಾಳುವೂ ಆಗಿರುತ್ತಾನೆ. ಬಹುತೇಕವಾಗಿ ಉದಾರಿಯೂ ಆಗಿರುತ್ತಾನೆ. ಅಂತಹ ವ್ಯಕ್ತಿಗೆ ನಾನು "ಮೂರ್ಖ" ಎಂದರೆ, ಅದು ಕೇವಲ ಹೋಲಿಕೆಯ ಮಾತಾಗುತ್ತದೆ. ಇಂತಹ ಘಟನೆಗಳು ಅಪರೂಪವೇನಲ್ಲ. ಉದಾಹರಣೆಗೆ, ಆ ಚೈತ್ಯ ಪುರುಷ (ಆಧ್ಯಾತ್ಮವು) ತನ್ನ ಮಿತಿಯ ಗರಿಷ್ಠ ಹಂತದ ಪ್ರಗತಿಯನ್ನು ಸಾಧಿಸಿದಾಗ, ಅದೂ ಅವನು ಹೊಂದಿದ್ದ "ಆಡಳಿತಾಧಿಕಾರಿಯಾಗಿ" ಎಲ್ಲ ಅನುಭವಗಳನ್ನು ಸಂತೋಷದಿಂದ ಅನುಭವಿಸಿದ ನಂತರದಲ್ಲಿ (ಸಾಮಾನ್ಯವಾಗಿ ರಾಜ ಅಥವಾ ಚಕ್ರವರ್ತಿಯ ಜೀವನದ ಜೀವನಗಳಲ್ಲಿ ಬರುವ ಅನುಭವಗಳು), ಇದೀಗ ಅಸ್ಪಷ್ಟ ಅಥವಾ (ಅಂಧಕಾರ ಕವಿದ) ಜೀವನದಲ್ಲಿ ಕಾರ್ಯ ನಿರ್ವಹಿಸಲು ಸಮರ್ಥನಾಗುವಲ್ಲಿ ಬಯಕೆಯನ್ನು ಹೊಂದಿದ್ದಾನೆ. ಸದಾ ಸರಕಾರದ ಆಡಂಬರದ ಮಧ್ಯದಲ್ಲಿಯೇ ಸಂಕೋಲೆಯಿಂದ ಬಂಧಿತನಾಗಿ ಇದ್ದರೆ, ಒಂದು ಸಾಮಾನ್ಯ ಮಧ್ಯಮ ವರ್ಗದ ಪರಂಪರಾವಾದಿ (Bourgeious) ಕುಟುಂಬವಾಗಿ, ಅದೂ ಬಹುತೇಕವಾಗಿ ಇಂತಹ ಚಿಕಿತ್ಸಕ ಸಂದರ್ಭಗಳಲ್ಲಿ, ಆ ರೀತಿಯ ಅಜ್ಞಾತ (Incognito) ವಾಗಿಯೇ ಕಾರ್ಯ ನಿರ್ವಹಿಸುವಲ್ಲಿ ಸಹಕಾರಿಯಾಗಿರುತ್ತದೆ. ಜೊತೆಗೆ ಸರಕಾರಿ (ಆಡಳಿತ) ವ್ಯವಸ್ಥೆಯು ನಿರೀಕ್ಷಿಸುತ್ತಿರುವ – ಆ ದೇಶದ ಆಡಳಿತದ ಮುಖ್ಯಸ್ಥನ ಆಶಯಗಳಿಗೆ ಬದ್ಧಿತನಾಗಿರುವಂತೆ ಒತ್ತಾಯಿಸಲ್ಪಡುವದರಿಂದ ದೂರವಿರಲು ಸಹಕಾರಿಯಾಗುತ್ತದೆ. ಈ ದೃಷ್ಟಿಕೋನದಿಂದ ಒಂದು ವೇಳೆ ಈ ವಿಷಯವನ್ನು ಗಮನಿಸಿದರೆ, ಆಗ ನೀನು ಹೇಳುವದು, "ಇದು ಹೇಗೆ ಸಾಧ್ಯ? ಏನಿದು ಅವನತಿ?" ಎಂದೇ ಹೇಳುತ್ತೀಯಾ. ಆದರೆ ಇದು ಅವನತಿ ಅಲ್ಲ. ಇದು ಸಮಸ್ಯೆಯನ್ನು ಮತ್ತೊಂದು ದಿಕ್ಕಿನಿಂದ ಸಂಪರ್ಕಿಸುತ್ತಿದೆ. ಅದೂ ಅಲ್ಲದೇ ಮತ್ತೊಂದು ದೃಷ್ಟಿಕೋನದಿಂದ ಗಮನಿಸುತ್ತದೆ. ಚೈತನ್ಯ ಪ್ರಜ್ಞೆಗಾಗಿ (ಅಂದರೆ

ನೈಜ ಪ್ರಜ್ಞೆಗಾಗಿ, ಅದೂ ದಿವ್ಯ ಚೇತನಕ್ಕಾಗಿ) ಜಯ ಮತ್ತು ಅಪಜಯ ಎರಡೂ ಒಂದೇ. ಇಲ್ಲಿ ಪ್ರಜ್ಞೆಯ ವಿಕಸನವು ಮೂರ್ಖವಾದ ಸಂಗತಿಯಾಗಿದೆ. ಜೊತೆಗೆ ಇಲ್ಲಿ ಮಾನವ ಜೀವಿಗೆ ಅನುಕೂಲವೆಂದು ಕಂಡು ಬರುವ ಕೆಲವು ಪರಿಸ್ಥಿತಿಗಳೇ ಬಹಳ ಅನಾನುಕೂಲಕರವಾಗಿ ಪ್ರಜ್ಞಾವಿಕಸನಕ್ಕೆ ಅಡೆ–ತಡೆಯಾಗಿ ಬರುವ ಸಂದರ್ಭಗಳಿರುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/267–68**

*

**ವಿಕಸನದ ನೈಸರ್ಗಿಕ ವಿಧಾನ**

*"ನವಜನ್ಮದಲ್ಲಿ ಯಾವುದೇ ಬಾಹ್ಯ ಜೀವಿಯು ಇರುವದಿಲ್ಲ" ಎನ್ನುವಂತೆ, ಅದು ಈಗಾಗಲೇ ತಂದೆ–ತಾಯಿಯರಿಂದ ಆಕಾರಗೊಂಡಿದ್ದು, ವಾತಾವರಣ ಹಾಗೂ ಸಂದರ್ಭಗಳೊಂದಿಗೆ ರೂಪು ತಾಳಿದ್ದು – ಅದು ಮಾನಸಿಕ, ಪ್ರಾಣಿಕ ಮತ್ತು ಭೌತಿಕ ರೂಪದಲ್ಲಿ – ಮತ್ತೆ ಜನಿಸುತ್ತದೆ; ದೇಹದಿಂದ ದೇಹಕ್ಕೆ ಮುಂದುವರೆಯುತ್ತ ಹೋಗುವದು ಕೇವಲ ಚೈತ್ಯಾತ್ಮ ಮಾತ್ರ.*

*ತರ್ಕಯುಕ್ತವಾಗಿ ಹೇಳುವದಾದಲ್ಲಿ, ಆಗ, ಮಾನಸಿಕ ಅಥವಾ ಪ್ರಾಣಿಕ ಅಂಶಗಳು ತಮ್ಮ ಗತಜನ್ಮದ ಸ್ಮರಣೆಯನ್ನು ಹೊಂದಿರುವದಿಲ್ಲ, ಅಥವಾ ಅದನ್ನು ತನ್ನಷ್ಟಕ್ಕೆ ಗುರುತಿಸಲು, ಆ ವ್ಯಕ್ತಿತ್ವದಲ್ಲಿ ಅಥವಾ ಆ ವ್ಯಕ್ತಿಯ ಆ ಜೀವನದ ವಿಧಾನವನ್ನು ಗುರುತಿಸಲು ಸಮರ್ಥವಾಗುವದಿಲ್ಲ. ಕೇವಲ ಚೈತ್ಯಾತ್ಮ (psychic being) ಮಾತ್ರ ಆ ಸ್ಮರಣೆಯನ್ನು ಹೊಂದಿರಲು ಸಾಧ್ಯ; ಈ ರೀತಿಯ ಪ್ರಜ್ಞೆಯ ಮೂಲಕವೇ ನಾವು ಈ ಜನ್ಮದ ಅವಧಿಯಲ್ಲಿಯೂ ನಿಖರವಾಗಿ ನಮ್ಮ ಹಿಂದಿನ ಜನ್ಮದ ಜೀವನದ ಬಗೆಗೆ ಅರಿತುಕೊಳ್ಳಬಹುದು. ಇದರ ಜೊತೆಜೊತೆಗೆ, ಇಲ್ಲಿ ಪ್ರಾಮುಖ್ಯವಾಗಿರುವ ಸಂಗತಿ ಎಂದರೆ – ಅದರಲ್ಲೂ ನಮ್ಮ ಲಕ್ಷ್ಯವನ್ನು ಕೇಂದ್ರೀಕರಿಸಬೇಕಾದ ವಿಷಯವೆಂದರೆ – ನಾವು ಈಗ ಏನಾಗಿದ್ದೇವೆ ಎನ್ನುವದಕ್ಕಿಂತ ಮುಂದೆ ಮುಂದೆ ಏನಾಗಬೇಕು ಎನ್ನುವದನ್ನು ಅರಿತುಕೊಳ್ಳಬೇಕಿದೆ.*

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/124**

*

*ಮನಸ್ಸು, ಪ್ರಾಣಿಕ ಅಥವಾ ಭೌತಿಕ ರೂಪಗಳು ಪುನಃ ಜನ್ಮ ತಾಳುತ್ತವೆ ಎಂದಲ್ಲ, ಆದರೆ ಚೈತ್ಯಾತ್ಮ ಮಾತ್ರವೇ ನವಜನ್ಮಕ್ಕೆ ಬರುತ್ತದೆ. ಹೀಗಿದ್ದಾಗ, ಆ ಅವಧಿಯಲ್ಲಿ ವಿಕಸನಗೊಂಡ ಮಾನಸಿಕ ಮತ್ತು ಪ್ರಾಣಿಕ ಅಂಶಗಳು ಮತ್ತೊಂದು ಜನ್ಮದಲ್ಲಿ ಅವುಗಳಿಗೆ ಸ್ಥಾನವಿಲ್ಲವೆಂದಾಯಿತೇ?*

ಇಂತಹ ಘಟನೆ ಘಟಿಸುವದು ಒಂದು ವೇಳೆ ಈ ಎಲ್ಲ ಅಂಗಗಳೂ ಆ ಚೈತನ್ಯದ ಸಾಮೀಪ್ಯದಲ್ಲಿಯೇ ವಿಕಸನ ಹೊಂದಿದ್ದರೆ ಮಾತ್ರ ಘಟಿಸುತ್ತದೆ. ಅಂದರೆ, ಎಲ್ಲ ಅಂಗಗಳೂ ಸಂಪೂರ್ಣ ಚೈತ್ಯಾತ್ಮದ ಪ್ರಭಾವದಲ್ಲಿಯೇ, ಯಶಸ್ವಿಯಾಗಿ ವಿಕಸನಗೊಳ್ಳುವ ಹಂತದಲ್ಲಿ ಇದ್ದಿದ್ದರೆ ಮಾತ್ರ ಇದು ಸಾಧ್ಯವಾಗುತ್ತದೆ. ಒಟ್ಟಿನಲ್ಲಿ ಈ ಚೈತ್ಯದ ಪ್ರಭಾವದಲ್ಲಿ ಮತ್ತು ಮುಂದುವರೆದುಕೊಂಡು ಹೋಗುವ ಚೈತ್ಯಾತ್ಮದಲ್ಲಿ ಇದ್ದಲ್ಲಿ ಮಾತ್ರ ಸಾಧ್ಯವಾಗುತ್ತದೆ. ಏಕೆಂದರೆ ಕೇವಲ ಚೈತ್ಯಾತ್ಮ ಮಾತ್ರವೇ ಏಕಾಂಗಿಯಾಗಿ ಮುಂದಿನ ಪ್ರಯಾಣ ಮಾಡಲು ಸಮರ್ಥವಾಗಿರುತ್ತದೆ.

ಆದರೆ ಈ ಚೈತ್ಯವು (ಆತ್ಮವು) ಓರ್ವನ ಜೀವನದ ಮತ್ತು ಪ್ರಜ್ಞೆಯ ಕೇಂದ್ರ ವಿಷಯವಾಗಿದೆ. ಮತ್ತು, ಸರ್ವ ಜೀವಾಂಶಗಳೂ ಇವಲಯದಲ್ಲಿಯೇ ಸಂರಚನೆಗೊಂಡಿದ್ದರೆ, – ವ್ಯವಸ್ಥಿತಗೊಂಡಿದ್ದರೆ, ಆಗ ಇಡೀ "ಜೀವವೇ" ಆ ಚೈತ್ಯಾತ್ಮದ ಪ್ರಭಾವದಲ್ಲಿ ಮುಂದೆ ಸಾಗುತ್ತದೆ. ಏಕೆಂದರೆ ಅಲ್ಲಿ ಅದು ಸುಸಂಗತವಾದ ಐಕ್ಯತೆಯಲ್ಲಿ ಇರುತ್ತದೆ. ಆಗ ಅದು ಮುಂದಿನ ಹಂತಕ್ಕೆ ಸಾಗುವದು. ಇದು ಅದಕ್ಕೆ ಅವಶ್ಯವೂ ಆಗಿರುತ್ತದೆ. ಆದಾಗ್ಯೂ ಸಹಿತ, ಒಂದು ವೇಳೆ ಆ ಭೌತಿಕ ದೇಹವೂ ಸಹಿತ ಮುಂದುವರೆಸಲ್ಪಟ್ಟರೆ – ಆಗ ಈ ಮೊದಲು ಇದ್ದ ದೇಹ ಮತ್ತು ಆತ್ಮದ ಸಾಮರ್ಥ್ಯವನ್ನೇ ಅವತರಣಗೊಳಿಸಿಕೊಂಡು ಚಲಿಸುತ್ತದೆ. ಏಕೆಂದರೆ ಆಗ ಅದು ವಿಘಟನೆಗೊಳ್ಳುವ ಅವಕಾಶವೇ ಇರುವದಿಲ್ಲ. ಆದರೆ ಇದು ಬಹುತೇಕವಾಗಿ ದುಸ್ಸಾಧ್ಯವಾದ ಸಂಗತಿಯಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/358–59**

*

**ಪ್ರಕೃತಿಯು ಬಳಸುವ ಪ್ರಗತಿಯ ಪ್ರಕ್ರಿಯೆಗಳು**

ಏನು ಹೇಳುತ್ತಿದ್ದೀಯಾ – ಮರಣ ಹೊಂದುವದು, ಮತ್ತೆ ಜನನ ತಾಳುವದು, ಮರಣ–ನವಜನ್ಮ – ಇದೇ ವ್ಯಕ್ತಿಯೋರ್ವನ ವಿಕಸನದ ಪ್ರಕ್ರಿಯೆಯಾಗಿದೆ ಎಂದು ಹೇಳುತ್ತೀಯಾ ನೀನು? ಆದಾಗ್ಯೂ ಈ ಜೀವನ ಮತ್ತು

ಸಾವಿನ ನಡುವೆ ವ್ಯಕ್ತಿಯ ಕೆಲವು ಅಂಶಗಳು ದೃಢವಾಗಿ ನಿಲ್ಲುವ ಅವಕಾಶಗಳಿವೆ ಎಂದು, ಅವನು ಸಂಪೂರ್ಣವಾಗಿ ಮೃತನಾಗಿದ್ದಾನೆ ಮತ್ತು (ಪಂಚಭೂತಗಳಲ್ಲಿ) ವಿಘಟಿತನಾಗಿದ್ದಾನೆ ಎಂದಾದ ಮೇಲೆಯೇ, ಮತ್ತೆ ನವಜನ್ಮ ಎಂದರೇನು? ಅಂದರೆ ಖಂಡಿತವಾಗಿಯೂ ಕೆಲವೊಂದು ಅಂಶಗಳು ದೃಢವಾಗಿ ಉಳಿದಿರುತ್ತವೆ. ಇಲ್ಲದಿದ್ದರೆ, ಅದೇ ವ್ಯಕ್ತಿಯ ಮುಂದುವರಿಕೆ ಸಾಧ್ಯವೇ ಆಗುವದಿಲ್ಲ. ಒಂದು ವೇಳೆ, ಏನೂ ಉಳಿದಿರದಿದ್ದರೆ, ಆಗ ಅಲ್ಲಿ ವಿಕಸನವಾಗುವದು ವ್ಯಕ್ತಿಯಲ್ಲ, ಅದು ಪ್ರಕೃತಿಯಾಗಿರುತ್ತದೆ. ಪ್ರಕೃತಿಯು ಈ ಜಡದ್ರವ್ಯವನ್ನು ಉಪಯೋಗಿಸಿಕೊಳ್ಳುತ್ತದೆ. ಈ ಜಡತ್ವದಿಂದಲೇ ರೂಪಗಳನ್ನು ಸೃಷ್ಟಿಸುತ್ತದೆ. – ನಾನು ಇದನ್ನು ಅತ್ಯಂತ ಸರಳೀಕರಿಸಿಯೇ ಹೇಳುತ್ತಿದ್ದೇನೆ. ಇಷ್ಟೆಲ್ಲ ಇದ್ದಾಗ್ಯೂ ಸಹಿತ ಅವಳು (ಪ್ರಕೃತಿ) ಸಾಂದ್ರತೆಯನ್ನು ಸಮಾಪನೆಗೊಳಿಸಿ ಮತ್ತೆ ಅವಳು (ಸಂಯೋಜಿತ) ಸಮಾಹಿತಗೊಳಿಸುವಳು. ಅವಳು ರೂಪವನ್ನು ಕೊಡುವಳು, ಆಗ ಈ ಆಕಾರವು ಪ್ರಗತಿ (ವಿಕಸನ) ವಾಗುತ್ತದೆ. ಅದರೆ ಇದೂ ಸಹಿತ ವಿಘಟನೆಗೊಳ್ಳುತ್ತದೆ (disintrigates). ಏಕೆಂದರೆ ಇದಕ್ಕೆ ವೈಯಕ್ತಿಕವಾದ ಯಾವುದೇ ತತ್ತ್ವ (ಮೂಲಧಾತು) ಇರುವದಿಲ್ಲ. ಹಾಗಾದರೆ ಇದೇಕೆ ಸ್ಥಿರವಾಗಿ ಮುಂದುವರೆಯುವದಿಲ್ಲ? ಏಕೆಂದರೆ ಪ್ರಕೃತಿಗೆ ಜಡತತ್ವ ಬೇಕು; ಬೇರೆ ಬೇರೆ ರೂಪಗಳನ್ನು ರೂಪಿಸಲು ಅವಶ್ಯವಿರುವ ಉಪಪದಾರ್ಥಗಳ ಅವಶ್ಯಕತೆ ಇರುತ್ತದೆ. ಹೀಗಾಗಿ ಪ್ರಕೃತಿಯು ಏನನ್ನು ರಚಿಸಿದ್ದಾಳೆಯೋ ಅದನ್ನೂ ವಿಘಟಿಸುತ್ತಾಳೆ. ಮತ್ತು, ಇದೆ ತೆರನಾದ ಕಾರ್ಯವನ್ನು ಮುಂದುವರೆಸುತ್ತಾಳೆ. ಅದು ಅವಿರತವಾಗಿಯೇ ವೈಯಕ್ತಿಕ (ವ್ಯಕ್ತಿಗತ) ವಿಕಸನವಾಗಿರದೇ ಸಮಗ್ರ ವಿಕಸನವಾಗಿರುತ್ತದೆ.

ಒಂದು ವೇಳೆ ನೀನು ಜೇಡಿಮಣ್ಣಿನಂತಹ ಮೃದುವಾದ (Plasticine) ವಸ್ತುವನ್ನು ಹೊಂದಿದ್ದರೆ, – ಅಂದರೆ ಈ ವಸ್ತುವನ್ನು ಮಾದರಿಗಳ ನಿರ್ಮಾಣದಲ್ಲಿ ಬಳಸುತ್ತಾರೆ – ಗೊತ್ತಿದೆ ಅಲ್ಲವೇ? ಗೊತ್ತಿದೆ ತಾನೆ? ಒಳ್ಳೆಯದು, ನೀನು ಅದರಿಂದ ಒಂದು ಆಕಾರವನ್ನು ನಿರ್ಮಿಸು. ಯಾವಾಗ ನೀನು ಅದಕ್ಕೊಂದು ಆಕಾರ ಕೊಡುವದನ್ನು ಪೂರ್ಣಗೊಳಿಸುತ್ತಿಯೋ, ಆಗ ಅದು ನಿನಗೆ ಮೆಚ್ಚುಗೆಯಾಗದೇ ಹೋಗಬಹುದು. ಆಗ ಅದನ್ನು ನೀನು ಮತ್ತೆ ಮುರಿದು, ಪುನಃ ಅದನ್ನು ಸೂಕ್ತಗೊಳಿಸಿ ಹೊಸದೊಂದು ರೂಪು ಕೊಡಲು ಪ್ರಯತ್ನಿಸುತ್ತೀಯಾ. ಈಗ ನೀನು ಈ ದಿಸೆಯಲ್ಲಿ ಕೊಂಚ ಪ್ರಗತಿ ಸಾಧಿಸಿದ್ದಲ್ಲಿ,

ಅದೂ ಸತತ ಪ್ರಯತ್ನದಿಂದ, ಅದನ್ನು ವ್ಯವಸ್ಥೀಕೃತಗೊಳಿಸುತ್ತೀಯ; ಕೊನೆಗೆ ನೀನೇ "ಇದು ಸರಿಯಾದ ಕಾರ್ಯವಲ್ಲ, ನಾನು ಇದನ್ನು ಸೂಕ್ತವಾದ ರೀತಿಯಲ್ಲಿಯೇ ಮಾಡಲು ಯತ್ನಿಸುತ್ತೇನೆ." ಎನ್ನುತ್ತಿಯಲ್ಲವೇ? ಆದರೆ ನೀನು ಮತ್ತೆ ಮಾಡಿದ ಆಕಾರವು ಮೊದಲಿಗಿಂತ ಹೆಚ್ಚು ಉತ್ತಮವೇ ಇದ್ದರೂ ಸಹಿತ, ಅದು ನೀನು ಆತ್ಮಗತವಾಗಿ ಬಯಸುತ್ತಿರುವ ಆಕಾರಕ್ಕೆ ಬಂದಿರುವದಿಲ್ಲ; ಆದ್ದರಿಂದ ಮತ್ತೆ ಮತ್ತೆ ಅದನ್ನು ಮುರಿದು, ಅದಕ್ಕೆ ಮತ್ತೆ ನೀರು ಹಾಕಿ, ಮೆದುಗೊಳಿಸಿ ಹದಕ್ಕೆ ತಂದು ಮತ್ತೆ ಮತ್ತೊಂದು ನವರೂಪವನ್ನು ಕೊಡಲು ಯತ್ನಿಸುತ್ತೀಯಾ. ನೀನು ಇದನ್ನು ಅವಿರತವಾಗಿ ಮುಂದುವರೆಸಿಕೊಂಡು ಹೋಗುತ್ತೀಯಾ. ಆದರೆ ಇಲ್ಲಿರುವ ಆ ಮೂಲವಸ್ತು ಮಾತ್ರ ಅದೇ – ಮೊದಲಿನದೇ ಆಗಿದೆ. ಆಯಾ ಆಕಾರಗಳಲ್ಲಿರುವ ಜೀವ ಮಾತ್ರ ಬೇರೆಯಾಗಿರುತ್ತದೆ. ಏಕೆಂದರೆ ನೀನು ಸಿದ್ಧಪಡಿಸಿದ ಪ್ರತಿಯೊಂದೂ ಆಕಾರಕ್ಕೂ ಅದರದೇ ಆದ ಅಸ್ತಿತ್ವವೊಂದು ಇದ್ದೇ ಇರುತ್ತದೆ. ಯಾವಾಗ ನೀನು ಅದು ಸೂಕ್ತವಲ್ಲವೆಂದು ಮುರಿಯುತ್ತೀಯೋ, ಆಗ ಅಲ್ಲಿ ಆ ಆಕಾರವೇನೂ ಉಳಿಯುವದಿಲ್ಲ. ನೀನು ಈಗ ಈ ಆಕಾರವನ್ನು ಪರಿಪೂರ್ಣಗೊಳಿಸಲು ಪ್ರಯತ್ನಿಸಬಹುದು ಅಥವಾ ಬೇರೆಯದೇ ಆಕಾರಗಳಿಗೂ ಪ್ರಯತ್ನಿಸಬಹುದು.

ಉದಾಹರಣೆಗೆ, ನೀನು ಒಂದು ನಾಯಿಯ ಆಕೃತಿ ಮಾಡಲು ಯತ್ನಿಸಿದರೆ ಅಥವಾ ಒಂದು ಕುದುರೆಯ ಆಕಾರವನ್ನು ಮಾಡಲು ಯತ್ನಿಸಿದರೆ, ಆಗ ನೀನು ನಿನ್ನ ಪ್ರಯತ್ನದಲ್ಲಿ ಸಫಲನಾಗದಿದ್ದರೆ, ಆಗ ನೀನು ಅದನ್ನು ಮುರಿದು, ಮತ್ತೆ ಅದೇ ವಸ್ತುವಿನಿಂದಲೇ ಮತ್ತೊಂದು ಪ್ರಯತ್ನ ಮಾಡಿ ಆಕೃತಿಗಳನ್ನು ಮಾಡಲು ಯತ್ನಿಸುತ್ತೀಯಾ. ಆಗ ನೀನು ಮೊದಲಿಗಿಂತ ಕೊಂಚ ಬೇರೆಯದೇ ಆದದ್ದನ್ನು ಯೊಚಿಸುತ್ತೀಯಲ್ಲವೇ. ಒಂದು ವೇಳೆ ನೀನು ಒಂದು ಮನೆಯನ್ನು ಕಟ್ಟಿ, ಆಮೇಲೆ ಆ ಮನೆ ನಿನಗೆ ಇಷ್ಟವಾಗದಿದ್ದರೆ, ಆಗ ಅದನ್ನು ನೀನು ಬದಲಿಸಲು ಯತ್ನಿಸುತ್ತೀಯಲ್ಲವೇ, ಮತ್ತೆ ಅದಕ್ಕೆ ಬೇರೆಯದೇ ಸ್ವರೂಪವನ್ನು ಕೊಡಲು ನಿನಗೆ ಸಾಧ್ಯವಾಗುತ್ತದೆ. ಆದರೆ ಈ ಮೊದಲು ಆ ಮನೆಯ ನೆನಪು ಒಂದು ಬಿಟ್ಟು ನಿನ್ನಲ್ಲಿ ಏನೂ ಉಳಿದಿರುವುದಿಲ್ಲ. ಅದೂ ಸಹಿತ ನೀನು ಅದನ್ನು ನೆನಪಿನಲ್ಲಿ ಇಟ್ಟುಕೊಳ್ಳಲು ಸಿದ್ಧನಿದ್ದರೆ ಮಾತ್ರ.

ಇದೇ ವಿಧಾನದಲ್ಲಿಯೇ ಪ್ರಕೃತಿಯೂ ಸಹಿತ, ಸಂಪೂರ್ಣವಾಗಿ ಸುಪ್ತಾವಸ್ಥೆಯಲ್ಲಿಯೇ ಮತ್ತು ನಿರಾಕಾರದ (Amorphous) ಜಡತಂತ್ರದಿಂದಲೇ

ಪ್ರಾರಂಭಗೊಳಿಸುತ್ತಾಳೆ. ಈ ಮೂಲಕ ಒಂದು ಆಕಾರದಿಂದ ಮತ್ತೊಂದು ಆಕಾರಕ್ಕೆ ಪ್ರಯತ್ನಿಸುತ್ತಿದ್ದಾಳೆ; ಮುಖ್ಯವಾಗಿ ನಾವು ಇಲ್ಲಿ ಕೇವಲ ಒಂದು ವಸ್ತುವಿಗೆ ಸಂಬಂಧಿಸಿದಂತೆ ಪ್ರಯತ್ನಿಸುತ್ತಿದ್ದರೆ, ಅದೂ ಒಂದೇ ಬಾರಿಗೆ ಒಂದೇ ವಸ್ತುವಿನಂತೆ ಪ್ರಯತ್ನಿಸುತ್ತಿದ್ದರೆ, ಅವಳು ಮಾತ್ರ ಹಾಗಿರದೇ, ಏಕಕಾಲಕ್ಕೆ ಲಕ್ಷಾಂತರ ಸಂಖ್ಯೆಯಲ್ಲಿ ಲಕ್ಷಾಂತರ ರೂಪಗಳನ್ನು ರೂಪುಗೊಳಿಸುತ್ತಿದ್ದಾಳೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/227–28**

*

**ಗತ ಜೀವನದ ಅನುಭವಗಳ ಉಪಯುಕ್ತತೆ**

*ಮಾತೆಯೇ, ಪ್ರತಿಯೊಂದು ಜನ್ಮದಲ್ಲೂ ದೇಹ, ಮನಸ್ಸು ಮತ್ತು ಪ್ರಾಣಗಳು ನೂತನವಾಗಿಯೇ ಇರುವವು. ಹೀಗಿದ್ದಾಗ ಗತಜನ್ಮದ ನೆನಪುಗಳು – ಅನುಭವಗಳು ಈಗ ಅವರಿಗೆ ಹೇಗೆ ಉಪಯುಕ್ತವಾಗುವವು? ಹಾಗಾದರೆ ಮತ್ತೆ ನಾವು ಅದೇ ಅನುಭವಗಳಲ್ಲಿ ಮುಂದುವರೆದುಕೊಂಡು ಹೋಗಬೇಕಾಗುತ್ತದೆಯೇ?*

ಇದೆಲ್ಲವೂ ಆಯಾ ವ್ಯಕ್ತಿಗಳನ್ನು ಅವಲಂಬಿಸಿಕೊಂಡಿರುತ್ತದೆ.

ಮನಸ್ಸಾಗಲೀ ಮತ್ತು ಪ್ರಾಣವಾಗಲಿ ಪ್ರಗತಿ ಹೊಂದಿ – ವಿಕಾಸವಾಗಿ–ಬೆಳವಣಿಗೆ ಹೊಂದಿ ಸಾಗುವದಿಲ್ಲ. – ಆದರೆ ಕೆಲವೊಂದು ಅತೀ ಅಪರೂಪದ ಹೊರತುಪಡಿಸಿ ಮತ್ತು ವಿಕಸನದ ತುರೀಯಾವಸ್ಥೆಯ ಹಂತದಲ್ಲಿರುವ ಕೆಲವು ಘಟನಗಳನ್ನು ಹೊರತುಪಡಿಸಿ – ಇಲ್ಲಿ ಬೆಳವಣಿಗೆ ಹಾಗೂ ವಿಕಸನ–ವಾಗುತ್ತಿರುವದು ಚೈತ್ಯವಾಗಿದೆ. ಹೀಗಾಗಿ, ಈ ಘಟನೆ ಸಂಭವಿಸುವದು; ಈ ಚೈತ್ಯಕ್ಕೆ ಕಾರ್ಯಶೀಲತೆಯ ಅವಧಿ ಮತ್ತು ವಿಶ್ರಾಂತಿಯ ಅವಧಿಯ ಹಂತಗಳಿವೆ; ಭೌತಿಕ ಜಗತ್ತಿನ ಜೀವನದಿಂದ ಲಭ್ಯವಾಗುವ ಅನುಭವಗಳಿಂದ ಪ್ರಗತಿಯ ಫಲಿತಾಂಶಗಳಲ್ಲಿ ವಿಕಾಸವಾಗುವ ಜೀವನವನ್ನು ಇದು ಹೊಂದಿದೆ. ಅದರಲ್ಲೂ ಭೌತಿಕ ಜೀವನದಲ್ಲಿ ತುಂಬ ಕ್ರಿಯಾಶೀಲತೆಯ ಸಂದರ್ಭದಲ್ಲಂತೂ, ಆ ದೇಹದ ಎಲ್ಲ ಅನುಭವಗಳೊಂದಿಗೆ ಮತ್ತು ಪ್ರಾಣ ಹಾಗೂ ಮನಸ್ಸಿನೊಡನೆ ದೊರೆಯುವ ಅನುಭವಗಳಿಂದ ಕೂಡಿರುತ್ತದೆ. ತದನಂತರದಲ್ಲಿ ಸಾಮಾನ್ಯವಾಗಿ ಈ ಚೈತ್ಯವು ಆತ್ಮಸಾತ್ಕರಣಕ್ಕೆ (ಪರಿಪಾಕಗೊಳ್ಳಲು) ಒಂದು ನಿಗದಿತ ವಿಶ್ರಾಂತಿಯ ಅವಸ್ಥೆಗೆ

ಹೋಗುತ್ತದೆ. ಈ ನಿಗದಿತ ತಾಣದಲ್ಲಿಯೇ ಅದು ಕ್ರಿಯಾಪ್ರವೃತ್ತವಾಗಿದ್ದ ಅಸ್ತಿತ್ವದ ಅವಧಿಯಲ್ಲಿ ಸಿದ್ಧಗೊಂಡಿದ್ದ (ಸಾಧಿತಗೊಂಡಿರುವ) ಪ್ರಗತಿಯ ಪರಿಪೂರ್ಣತೆಗೆ ಮತ್ತು ಯಾವಾಗ ಈ ಪರಿಪಾಕತ್ವವು ಪರಿಸಮಾಪ್ತಿಗೊಳ್ಳುವದೋ, ಯಾವಾಗ ಇದು ಬೆಳವಣಿಗೆಯನ್ನು ಅಂತರ್ಲೀನಗೊಳಿಸಿಕೊಳ್ಳುವದೋ, ಆಗ ಅದು ಈ ಭೂಮಿಯ ಮೇಲೆ ಕ್ರಿಯಾಪ್ರವೃತ್ತ ಜೀವನವನ್ನು ಸಿದ್ಧಪಡಿಸಿಕೊಳ್ಳುತ್ತದೆಯೋ ಆಗ ಇದು ಪುನಃ ಅವರತರಣಗೊಂಡು ಹೊಸತೊಂದು ದೇಹಕ್ಕೆ ನವಜನ್ಮ ತಾಳಿ ಬರುತ್ತದೆ. ಜೊತೆಜೊತೆಗೆ ಆ ಎಲ್ಲ ಬೆಳವಣಿಗೆಯ ಫಲಿತಾಂಶವನ್ನೂ ತಂದಿರುತ್ತದೆ. ಅದೂ ಮತ್ತೂ ಉನ್ನತೀಕರಣಗೊಂಡ ಸ್ಥಿತಿಯಲ್ಲಿ ಇರುತ್ತದೆ. ಆಗ ಇದು ತನಗೆ ಬೇಕಾದ ದೇಹವೊಂದನ್ನು ಆಯ್ಕೆ ಮಾಡಿಕೊಳ್ಳುವದು ಮತ್ತು ಅದಕ್ಕಾಗಿ ಸೂಕ್ತ ಜೀವನವನ್ನು, ಅಲ್ಲಿ ಒಂದಕ್ಕೊಂದು ಸಂಬಂಧಿಸಿದಂತೆ ಇರುವ ತನ್ನ ಅನುಭವಗಳನ್ನು ಪರಿಪೂರ್ಣಗೊಳಿಸುವ ಸಲುವಾಗಿ ವಾಸಿಸಲು ಬಯಸುತ್ತದೆ. ಕೆಲವು ವಿಕಸನದ ಪ್ರಗತಿಯಲ್ಲಿನ ಕೆಲವು ಅಪರೂಪದ ಪ್ರಕರಣಗಳಲ್ಲಿ ಈ ಚೈತ್ಯವು ಆ ದೇಹವನ್ನು ತ್ಯಜಿಸುವ ಮುನ್ನ, ತಾನು ಪುನರಾವತಾರದಲ್ಲಿ ಯಾವ ಜೀವನ ವಿಧಾನವನ್ನು ಹೊಂದುಬೇಕು ಎನ್ನುವದನ್ನು ನಿರ್ಣಯಿಸುವದು.

ಯಾವಾಗ ಇದು ಪರಿಪೂರ್ಣವಾಗಿ ರೂಪುಗೊಳ್ಳುವದೋ ಮತ್ತು ಪೂರ್ವಭಾವಿಯಾಗಿಯೇ ಸೂಕ್ಷ್ಮ ಪ್ರಜ್ಞೆಯನ್ನು ಹೊಂದಿರುವದೋ, ಆಗ ಇದು ದೇಹದ ಆಕಾರಕ್ಕಾಗಿ, ರೂಪಕ್ಕಾಗಿ ತಾನೇ ನಿರ್ಣಯದ ಪರಮಾಧಿಕಾರವನ್ನು ಹೊಂದಿರುತ್ತದೆ. ಮತ್ತೆ ಸಾಮಾನ್ಯವಾಗಿ ಆಂತರಿಕ ಪ್ರಭಾವವಾಗದೇ ಅದು ಧಾತುಗಳನ್ನು ಮತ್ತು ಉಪಧಾತುಗಳನ್ನು ಹೊಸ ಅನುಭವವನ್ನು ಹೊಂದುವ ಸಲುವಾಗಿ ತನ್ನ ದೇಹದ ರಚನೆಯ ಸಲುವಾಗಿ ಆಯ್ಕೆ ಮಾಡಿಕೊಳ್ಳುತ್ತದೆ. ಆದರೆ ಬಹುತೇಕವಾಗಿ ಇದು ವಿಕಸನದ ಉನ್ನತ ಹಂತದಲ್ಲಿ ಇರುತ್ತದೆ.

ತದನಂತರದಲ್ಲಿ, ಯಾವಾಗ ಇದು ಸಂಪೂರ್ಣ ಸಾಕಾರಗೊಳ್ಳುತ್ತದೆಯೋ ಮತ್ತು ಭೂಮಿಗೆ ಸೇವೆಯ ಉದ್ದೇಶದಿಂದ ಸಾಮಾಜಿಕ ಸಹಾಯದಿಂದ ಮತ್ತು ಅದರಲ್ಲಿ ಭಾಗವಹಿಸುವದರ ಮೂಲಕ ದಿವ್ಯ ಕಾರ್ಯಕ್ಕೆ ತೊಡಗಿಕೊಳ್ಳುವ ಸಲುವಾಗಿ ರೂಪವನ್ನು ಪಡೆದುಕೊಳ್ಳುವದೋ, ಆಗ ಅದು ತಾನು ಇಚ್ಛಿಸಿದ ದೇಹದ ಸ್ವರೂಪವನ್ನೇ ಹೊಂದಲು ಸಾಧ್ಯವಾಗುತ್ತದೆ. ಆಗ ಹಿಂದಿನ ಜನ್ಮದ ಕೆಲವು ಮಾನಸಿಕ, ಪ್ರಾಣಿಕ ಮತ್ತು ಮೂಲ ತತ್ತ್ವಗಳನ್ನು (ಧಾತುಗಳನ್ನು) ತೆಗೆದುಕೊಂಡು ಬರಲು ಸಶಕ್ತವಾಗಿರುತ್ತದೆ. ಇದು ಎಲ್ಲವೂ ಹಿಂದಿನ ಜನ್ಮಗಳ

ಪ್ರಾಣಿಕ ಬಲದಿಂದಲೇ ಸುಸಂಬದ್ಧಗೊಳಿಸಲ್ಪಟ್ಟು ಗರ್ಭೀಕರಿಸಲ್ಪಟ್ಟಿರುತ್ತದೆ, ಅಂತರ್ನಿಹಿತಗೊಳಿಸಲಾಗಿರುತ್ತದೆ. ಅವು ಈಗಲೂ ಸಂರಕ್ಷಿಸಲ್ಪಡುತ್ತವೆ. ಹಾಗೆಯೇ ಸಂದರ್ಭಾನುಸಾರವಾಗಿ, ಸರ್ವೇ ಸಾಧಾರಣ ಪ್ರಗತಿಯಲ್ಲಿಯೂ ಭಾಗಿಯಾಗಿರುತ್ತದೆ. ಆದರೆ ಇವೆಲ್ಲವೂ ಕೇವಲ ಕೇವಲ ವಿಕಸನದ ಅತೀ ಉನ್ನತದ ಹಂತದಲ್ಲಿ ಮಾತ್ರವೇ ಘಟಿಸುತ್ತದೆ.

ಯಾವಾಗ ಚೈತ್ಯವು ಸಂಪೂರ್ಣವಾಗಿ ಪ್ರಗತಿಯಾಗುವದೋ ಮತ್ತು ಸೂಕ್ಷ್ಮ ಪ್ರಜ್ಞೆಯನ್ನು ಹೊಂದುವದೋ, ಯಾವಾಗ ಇದು ಆ ದಿವ್ಯ –ಕೃತು ಸಂಕಲ್ಪ(ಡಿವೈನ್ ವಿಲ್)ದ ಪ್ರಜ್ಞೆಯುಪಕರಣವಾಗುವದೋ, ಆಗ ಇದು ಪ್ರಾಣ ಮತ್ತು ಮನಸ್ಸನ್ನು ಎಷ್ಟರಮಟ್ಟಿಗೆ ಸಂಘಟಿತಗೊಳಿಸುತ್ತದೆ ಎಂದರೆ, ಇವೂ ಸಹಿತ ಒಂದು ನೈಸರ್ಗಿಕ ಸೌಷಮ್ಯವನ್ನು ರೂಪಿಸಲು ಮತ್ತು ಸಂರಕ್ಷಿಸಲು ಅನುಕೂಲವಾಗುವಂತೆ ಮಾಡಲು ಭಾಗವಹಿಸುತ್ತದೆ. ಅಂದರೆ ದೇಹದ ಸಂಗಡವೇ ವಿಘಟನೆ ಹೊಂದದೇ ಕನಿಷ್ಠ ಪಕ್ಷ ಮನೋಮಯ ಮತ್ತು ಪ್ರಾಣಮಯ ಜೀವದ ಕೆಲವು ಭಾಗಗಳು (ಅಂಶಗಳು) ತಮ್ಮ ಅಂಶವನ್ನು ಮುಂದೆಯೂ ಒಯ್ಯಲು ಉಳಿಸಿಕೊಳ್ಳುವಂತೆ ಒಂದು ಪರಮೋಚ್ಚ ನೆಲೆಯ ಪ್ರಗತಿಯ ಹಂತ ತಲುಪಲು ಅವಕಾಶ ಒದಗಿಸಿಕೊಡುತ್ತದೆ.

ಉದಾಹರಣೆಗೆ, ಕೆಲವೊಂದು ಭಾಗಗಳು – ಮಾನಸಿಕ ಮತ್ತು ಪ್ರಾಣಿಕ – ಮಾನವನ ಚಟುವಟಿಕೆಗಳಲ್ಲಿ ನಿಗದಿತವಾಗಿ ಪ್ರಗತಿ ಹೊಂದಿದ್ದಲ್ಲಿ, ಆಗ ಈ ಮನೋಮಯ ಮತ್ತು ಪ್ರಾಣಮಯ ತತ್ವಗಳು ಆಗಲೂ "ಅವುಗಳ ಮೂಲ ಸ್ವರೂಪದಲ್ಲಿಯೇ" ತಮ್ಮನ್ನು ಉಳಿಸಿಕೊಳ್ಳುವ ಸಮರ್ಥವಾಗಿರುತ್ತವೆ. ಏಕೆಂದರೆ ಅಲ್ಲಿ ಅದು ಪರಿಪೂರ್ಣವಾಗಿ ಸಂಘಟಿತಗೊಳ್ಳಲ್ಪಡುತ್ತದೆ. – ಉದಾಹರಣೆಗೆ ಅಗಾಧ ಪ್ರತಿಭಾಶಾಲಿ ವ್ಯಕ್ತಿಗಳಲ್ಲಿ, ಯಾರು ತಮ್ಮ ವಿಚಾರಗಳನ್ನು ವಿಕಸನಗೊಳಿಸಿಕೊಂಡಿದ್ದಾರೋ, ಇದೇ ಸಂರಚನೆಯನ್ನು ಕಾಯ್ದುಕೊಂಡು, ಅದು ಸುಸಂಘಟಿತವಾಗಿ ವ್ಯವಸ್ಥೀಕೃತಗೊಂಡ ಮೆದುಳಿನಲ್ಲಿ(ಚಿಂತನಗಳಲ್ಲಿ)ದ್ದು, ಅದಕ್ಕೆ ಅದರದೇ ಆದ ನಿಗದಿತ ಜೀವಮಾನವಿದ್ದು ಮತ್ತು ಮತ್ತೊಂದು ಜೀವನ(ಜನ್ಮ)ದೊರೆತು, ಅಲ್ಲಿಯೂ ಈ ಎಲ್ಲ ಪರಿಪಕ್ವತೆಯಿಂದ ಭಾಗವಹಿಸಲು ಶಕ್ತವಾಗುವ ಹಾಗೆ, ಬದಲಾವಣೆ ಇಲ್ಲದ ಹಾಗೆ ರಕ್ಷಿಸಿಕೊಂಡಿರುತ್ತದೆ.

ಕಲಾಕಾರರಲ್ಲಿ, ಸಂಗೀತಗಾರರಲ್ಲಿ ಯಾರೋ ತಮ್ಮ ಅಭಿವ್ಯಕ್ತಿಗಾಗಿ ತಮ್ಮ ಕೈಯನ್ನು ಪ್ರಜ್ಞಾಪೂರ್ವಕವಾಗಿ ಬಳಸಿಕೊಂಡಿರುತ್ತಾರೋ, ಆಗ ಅವರ

ಪ್ರಾಣಮಯ ಮತ್ತು ಮನೋಮಯ ತತ್ವಗಳು ಅವರ ರಂಗಗಳಲ್ಲಿಯೇ ಸಂರಕ್ಷಿಸಲ್ಪಡುತ್ತವೆ. ಜೊತೆಗೆ ಕೈಗಳು ಯಾವಾಗಲೂ ಪ್ರಜ್ಞಾಪೂರ್ವಕವಾದ ಸ್ಥಿತಿಯನ್ನೇ ಹೊಂದಿರುತ್ತವೆ. ಅವರು ಆತ್ಮೀಯ ಸಂಬಂಧದ ಮೂಲಕ ಮತ್ತು ಜೀವಂತ ವ್ಯಕ್ತಿಗಳ ಮೂಲಕವೂ ತಮ್ಮನ್ನು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತಾರೆ. ಇದು ಇದೇ ಪಥದಲ್ಲಿಯೇ ಮುಂದುವರೆಯುತ್ತದೆ.

ಇಲ್ಲವಾದಲ್ಲಿ, ಅಂದರೆ, ಜನಸಾಮಾನ್ಯರಲ್ಲಿ ಈ ಚೈತ್ಯಾತ್ಮವು ಪೂರ್ಣವಾಗಿ ವಿಕಾಸಗೊಂಡಿರುವದಿಲ್ಲ ಮತ್ತು ಸುಸಂಘಟಿತವಾಗಿರುವದಿಲ್ಲ. ಯಾವಾಗ ಈ ಚೈತ್ಯಾತ್ಮವು ದೇಹವನ್ನು ತೊರೆಯುವದೋ ಆಗಲೂ ಕೆಲವು ಸಮಯ ಈ ಮನೋಮಯ ಮತ್ತು ಪ್ರಾಣಮಯ ರೂಪಗಳು ವ್ಯಕ್ತಿಯ ಸಾವಿನ ನಂತರದಲ್ಲೂ ನಿಗದಿತ ಅವಧಿಯವರೆಗೆ ಉಳಿದಿರುತ್ತವೆ. ಆದರೆ ಇದು ಸಾರ್ಥಯವಾಗುವದು ಆ ವ್ಯಕ್ತಿಯ ಸಾವು ಪ್ರಶಾಂತತೆಯಲ್ಲಿ (ಯಾವುದೇ ವೇದನೆ ಇಲ್ಲದೇ [ಅನಾಯಾಸೇನ ಮರಣಂ]) ಮತ್ತು ಅದನ್ನು ಸಂತೋಷದಿಂದಲೇ ಏಕಾಗ್ರಚಿತ್ತವಾಗಿ ಸ್ವೀಕರಿಸುವಂತಿದ್ದಲ್ಲಿ ಮಾತ್ರ ಸಾಧ್ಯವಾಗಬಹುದು. ಆದರೆ ಒಂದು ವೇಳೆ ಓರ್ವ ವ್ಯಕ್ತಿಯು ಇದ್ದಕ್ಕಿದ್ದಂತೆಯೇ ರಾಗೋನ್ಮಾದದ ಹಂತದಲ್ಲಾಗಲೀ, ಹಲವಾರು ಮಮಕಾರಗಳಿಂದಾಗಲೀ ಮರಣ ಹೊಂದಿದ್ದರೆ, ಇಂತಹ ಸಂದರ್ಭಗಳಲ್ಲಿ ಆ ಆತ್ಮದ (ಪ್ರಾಣದ) ಹಲವು ಭಾಗಗಳು ಚೆದುರಿ ಹೋಗಿರುತ್ತವೆ. ಅಲ್ಲದೇ ಅಲ್ಪಕಾಲೀನವಾಗಲೀ ಅತವಾ ದೀರ್ಘಕಾಲದ್ದೇ ಆಗಿದ್ದರೂ, ಅವುಗಳಿಗಾಗಿ ನಿರ್ಮಿತಿಗೊಂಡಿರುವ ವಲಯದಲ್ಲಿಯೇ ಈ ವಿಘಟಿತ ಅಂಶಗಳು ಉಳಿದು, ನಂತರ ಕರಗಿ ಹೋಗುವವು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/268–69**

*

**ಉತ್ಕ್ರಾಂತಿ ಹಾಗೂ ನವಜನ್ಮದ ಅಗತ್ಯ**

– ಅನುವಾದ: ಡಾ॥ ಉದಯರವಿ ಶಾಸ್ತ್ರೀ

*ಈಗ ಇಲ್ಲಿ ಇರುವವರು ಮುಂದಿನ ಜನ್ಮದಲ್ಲಿಯೂ ಸಹ ಇಲ್ಲೋ ಅಥವಾ ಆಶ್ರಮದಲ್ಲೋ ಇದ್ದೇ ಇರುತ್ತಾರೆಂಬುದು ಖಚಿತವೇ? ಅಥವಾ ಅವರು ಇತರ ಅನುಭವಗಳಿಗಾಗಿ ಬೇರೆಲ್ಲೋ ಹೋಗುತ್ತಾರಾ?*

ಇದು, ಅವರು ಸಾಯುವಾಗಿನ ಪರಿಸ್ಥಿತಿ, ಸಾಯಬೇಕಾದರೆ ಅವರ ಕೊನೆಯ ಬಯಕೆ ಏನಾಗಿತ್ತು ಎಂಬುದು, ಹಾಗೂ ಅವರ ಚೈತ್ಯದ ನಿಯಂತ್ರಣ ಮೇಲೆ ಅವಲಂಬಿತವಾಗಿರುತ್ತದೆ. ಇದು ಯಾಂತ್ರಿಕವಾಗಿಯೋ ಅಥವಾ ಯಾರಿಂದಲೋ ನಿರ್ದೇಶಿತವಾಗಿಯೋ ಆಗುವುದಲ್ಲ. ಪ್ರತಿಯೊಬ್ಬರಿಗೂ ಇದು ಭಿನ್ನವಾಗಿರುತ್ತದೆ.

ಸಾವು ಸಂಭವಿಸಿದ ನಂತರದ ನಮ್ಮ ಹಣೆಬರಹವನ್ನು ನಿರ್ಧರಿಸುವಲ್ಲಿ ನಮ್ಮ ಪ್ರಜ್ಞಾಸ್ಥಿತಿಯ ಕೊನೆಯ ಹಂತವು ತುಂಬಾ ಪ್ರಮುಖ ಪಾತ್ರ ವಹಿಸುತ್ತದೆ ಎಂದು ನಾನು ನಿಮಗೆ ಈಗಾಗಲೇ ಅನೇಕ ಬಾರಿ ಹೇಳಿದ್ದೇನೆ. ಅಂದರೆ, ಸಾಯುವ ಸಂದರ್ಭದಲ್ಲಿ ವ್ಯಕ್ತಿಯೊಬ್ಬನಿಗೆ ತನ್ನ ಕೆಲಸವನ್ನು ಮುಂದುವರೆಸಲು ಹಿಂತಿರುಗಬೇಕು ಎಂಬ ಆಸೆ ಉತ್ಕಟವಾಗಿದ್ದರೆ ಆ ಆಸೆ ಪೂರೈಸಲು ಅನುಕೂಲವಾಗುವಂತೆ ಪರಿಸ್ಥಿತಿ ರೂಪುಗೊಳ್ಳುತ್ತದೆ. ಆದರೆ ನೋಡಿ, ಸತ್ತ ನಂತರ ಏನು ಬೇಕಾದರೂ ಆಗಬಹುದು. ತಮ್ಮ ಪಾರಭೌತಿಕ ಸ್ಥಿತಿಗೆ ಹಿಂತಿರುಗುವ ಜನರೂ ಇದ್ದಾರೆ. ನೋಡಿ, ನಮ್ಮ ಬಹಿರಂಗ ಕಾಯ ರಕ್ಷಿತವಾಗಿರುವುದು ತೀರಾ ಅಪರೂಪ ಎಂದು ನಾನು ಹೇಳಿದ್ದೇನೆ. ಹೀಗಾಗಿ ಸದಾಕಾಲ ಉಳಿಯುವ ನಮ್ಮ ಅಂತರಂಗದ ಅತೀಂದ್ರಿಯ ಪ್ರಜ್ಞೆಯ ಬಗ್ಗೆ ಮಾತ್ರ ಮಾತನಾಡೋಣ. ತಾವು ಅರ್ಜಿಸಿದ ಅನುಭವವನ್ನು ಸಮೀಕರಿಸಿ ತಮ್ಮನ್ನು ನವಜನ್ಮಕ್ಕೆ ಸಿದ್ಧಗೊಳಿಸಲು ಅತೀಂದ್ರಿಯವೇ ತಮ್ಮ ಬಳಿಗೆ ಬರುವಂತಹ ಜನರೂ ಇದ್ದಾರೆ. ಹೀಗಾಗಲು ಶತಶತಮಾನಗಳೇ ಬೇಕಾಗಬಹುದು, ಅದು ಆ ವ್ಯಕ್ತಿಯ ಮೇಲೆ ಅವಲಂಬಿಸುತ್ತದೆ.

ವ್ಯಕ್ತಿಯ ಚೈತ್ಯಾತ್ಮವು ಹೆಚ್ಚುಹೆಚ್ಚು ವಿಕಸನವಾದಂತೆ, ಸಂಪೂರ್ಣ ಪರಿಪಕ್ವತೆಯನ್ನು ಸಮೀಪಿಸುತ್ತಾ ನವಜನ್ಮಗಳ ನಡುವಿನ ಸಮಯ ದೀರ್ಘವಾಗುತ್ತಾ ಹೋಗುತ್ತದೆ. ಎಷ್ಟೋ ಜೀವಿಗಳು ಒಂದೆರಡು ಸಾವಿರ ವರ್ಷಗಳ ನಂತರ ನವಜನ್ಮ ಪಡೆಯುತ್ತವೆ.

ರಚನೆಯ ಪ್ರಾರಂಭಿಕ ಹಂತಗಳಲ್ಲಿ ಇದ್ದರೆ, ಸಾವು ಮತ್ತು ನವಜನ್ಮಗಳ ನಡುವಿನ ಅಂತರ ಕಡಿಮೆಯಾಗುತ್ತದೆ. ಕೆಲವೊಮ್ಮೆ ಮನುಷ್ಯನು ಪ್ರಾಣಿಯ ಹಂತಕ್ಕೆ ಸಮೀಪವಾಗಿದ್ದರೆ, ಮುಂದಿನ ಪೀಳಿಗೆಯಲ್ಲೇ, ತಮ್ಮ ಮಗನ ಮಗನಾಗಿ ನವಜನ್ಮ ಪಡೆಯುವುದು ಅಪರೂಪವಲ್ಲ. ಆದರೆ ಹೀಗೆ ಆಗುವುದು ಉತ್ಕ್ರಾಂತಿಯ ತೀರಾ ಪ್ರಾರಂಭಿಕ ಹಂತದಲ್ಲಿ ಮಾತ್ರ. ಅವರ ಚೈತ್ಯಾತ್ಮವು ಇನ್ನೂ ಜಾಗೃತವಾಗಿರದ ಸಂದರ್ಭದಲ್ಲಿ – ಪ್ರಾರಂಭಿಕ ಹಂತದಲ್ಲಿ ಮಾತ್ರ.

ಚೈತ್ಯಾತ್ಮವು ವಿಕಸನವಾಗುತ್ತಿದ್ದಂತೆ, ಆಗಲೇ ಹೇಳಿದಂತೆ, ನವಜನ್ಮಗಳ ನಡುವಿನ ಅಂತರ ಹೆಚ್ಚುತ್ತಾ ಹೋಗುತ್ತದೆ. ಚೈತ್ಯಾತ್ಮವು ಸಂಪೂರ್ಣವಾಗಿ ಬೆಳೆದ ಮೇಲೆ, ಹೆಚ್ಚಿನ ಅಭಿವೃದ್ಧಿಗಾಗಿ ಭೂಮಿಗೆ ನವಜನ್ಮದ ರೀತಿಯಲ್ಲಿ ಬರುವ ಅಗತ್ಯವಿಲ್ಲದೆ ಹೋದಾಗ, ಅದು ಸಂಪೂರ್ಣ ಸ್ವತಂತ್ರವಾದಾಗ, ಅದಕ್ಕೆ ಆಯ್ಕೆ ಮಾಡಿಕೊಳ್ಳುವ ಅವಕಾಶವಿರುತ್ತದೆ. ನವಜನ್ಮವೇ ಇರದೆ ಸಂಪೂರ್ಣ ಚೈತ್ಯದ ಸ್ಥಿತಿಯಲ್ಲಿ ಇದ್ದುಕೊಂಡು ಭೂಮಿಗೆ ಬಾರದೆಯೇ ಇರುವ ಸ್ಥಿತಿ, ಅಥವಾ, ಎಲ್ಲಿ ಬೇಕೋ, ಯಾವಾಗ ಬೇಕೋ ಹೇಗೆ ಬೇಕೋ ಆ ರೀತಿ ನವಜನ್ಮ ಪಡೆಯುವ ಪ್ರಜ್ಞಾಪೂರ್ವಕ ಆಯ್ಕೆ ಮಾಡಿಕೊಳ್ಳಬಹುದು. ಮತ್ತೆ ಕೆಲವೊಮ್ಮೆ ವಿಶ್ವ ಚೇತನದೊಂದಿಗೆ ಐಕ್ಯವಾಗುವ ಚೈತ್ಯಾತ್ಮಗಳೂ ಇವೆ. ಕೆಲವು ಚೈತ್ಯಾತ್ಮಗಳು ಅಧಿಮಾನಸ(ಓವರ್ ಮೈಂಡ್)ಗಳ ಒಡಗೂಡಿ ಭೂ ವಾತಾವರಣದಲ್ಲೇ ಯಾವಾಗಲೂ ಇದ್ದು, ಸತತವಾಗಿ ನವಜನ್ಮಗಳನ್ನು ಪಡೆಯುತ್ತ ಕೆಲಸ ಮಾಡುತ್ತವೆ. ಅಂದರೆ, ಚಿನ್ಮನವು (ಚೈತನ್ಯ ಮನ) ಸಂಪೂರ್ಣ ವಿಕಸನವಾದ ನಂತರ, ಪೂರ್ತಿ ಸ್ವತಂತ್ರವಾದ ಮೇಲೆ ಅದಕ್ಕೆ ಇಷ್ಟ ಬಂದಂತೆ ಏನು ಬೇಕಾದರೂ ಮಾಡಬಹುದು. ಅದು ಏನನ್ನು ಆಯ್ಕೆ ಮಾಡಿಕೊಳ್ಳುತ್ತದೆ ಎಂಬುದರ ಮೇಲೆ ಅವಲಂಬಿಸುತ್ತದೆ. ಹೀಗಾಗಿ ಅದು ಹೀಗೆ, ಅಥವಾ ಅದು ಹಾಗೆ ಎಂದು ಹೇಳಲು ಸಾಧ್ಯವಿಲ್ಲ. ದೇಹಕ್ಕೆ ಸಾವು ಉಂಟಾಗುವ ವೇಳೆಯಲ್ಲಿ ಅದು ಮುಂದೆ ಎಲ್ಲಿ ನವಜನ್ಮ ಪಡೆಯುತ್ತದೆ ಎಂದೂ ಹೇಳಬಹುದು (ಹೀಗೆ ಆಗಿರುವ ಉದಾಹರಣೆಗಳು ಇವೆ) ಅದು ಏನು ಮಾಡಲು ನಿರ್ಧರಿಸಿದೆ ಎಂದೂ ಹೇಳಬಹುದು. ಆದರೆ ಇಂತಹ ಅಪರೂಪದ ಸ್ಥಿತಿಗೆ ಬರುವುದಕ್ಕೆ ಮುಂಚೆ, ಮಾನಸಿಕ, ಪರಮೋಚ್ಚ ಹಾಗೂ ಭೌತಿಕ ಪ್ರಜ್ಞೆಗಳು ಚೈತ್ಯದ ಪ್ರಜ್ಞೆಯೊಂದಿಗೆ ಸೇರಬೇಕಿದೆ. ಹೀಗಾಗಿ ಆ ಕ್ಷಣದಲ್ಲಿ, ಅಂದರೆ ಸಾವಿನ ಸಂದರ್ಭದಲ್ಲಿ, ನಮ್ಮ ಭೌತಿಕ ದೇಹವನ್ನು ತೊರೆಯುವ ಸಮಯದಲ್ಲಿ ಅದು ಒಂದು ಭರವಸೆಯನ್ನು, ಅಥವಾ ಆಕಾಂಕ್ಷೆಯನ್ನು ಅಥವಾ ಸಂಕಲ್ಪವನ್ನು ರೂಪಿಸುತ್ತದೆ. ಹಾಗೂ ಇದು ಭವಿಷ್ಯದ ಜೀವನವನ್ನು ನಿರ್ಧರಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/85–87**

*

## ನವಜನ್ಮ ಹಾಗೂ ಆತ್ಮ ವಿಕಸನ

ನವಜನ್ಮದ ಬಗ್ಗೆ ಜನಜನಿತವಾಗಿರುವ ಮೂಢ ನಂಬಿಕೆಯನ್ನು ಮೊದಲು ನೀವು ದೂರವಿಡಬೇಕು. ಸಾಧಾರಣ ನಂಬಿಕೆ ಏನೆಂದರೆ ಟೈಟಸ್ ಬಾಲ್ಬಸ್ ಮತ್ತೆ ಜಾನ್ ಸ್ಮಿತ್ ಆಗಿ ಹುಟ್ಟಿಬಂದ. ಒಂದೇ ವ್ಯಕ್ತಿತ್ವ, ಗುಣ ಹಾಗೂ ಸಾಧನೆಗಳನ್ನು ಹೊಂದಿರುವ ಈತ ಅವನ ಹಿಂದಿನ ಜನ್ಮದಲ್ಲಿ ಟೋಗ್ ಧರಿಸಿ ಲ್ಯಾಟಿನ್ ಮಾತನಾಡುತ್ತಿದ್ದವನು ಈಗ ಕೋಟು ಪ್ಯಾಂಟು ತೊಟ್ಟು ಕಾಕ್ನೀ ಇಂಗ್ಲಿಷ್ ಮಾತನಾಡುತ್ತಿದ್ದಾನೆ. ಆದರೆ ಇದು ಸತ್ಯವಲ್ಲ. ವಿಶ್ವದ ಮೊದಲಿನಿಂದಲೂ ಕೊನೆಯ ತನಕ ಸೃಷ್ಟಿಸಿದ ಪಾತ್ರವನ್ನೇ ಪದೇ ಪದೇ ಪುನರಾವರ್ತನೆ ಮಾಡುವುದರಿಂದ ಭೂಮಿಗೆ ಏನು ಪ್ರಯೋಜನವಾಗುತ್ತದೆ.? ಆತ್ಮವು ಒಂದು ದೇಹವನ್ನು ಧರಿಸಿ ಈ ಭೂಮಿಗೆ ಬರುವುದು ಅದು ಅನುಭವ ಪಡೆಯುವುದಕ್ಕೋಸ್ಕರ, ಬೆಳವಣಿಗೆ, ವಿಕಸನಕ್ಕಾಗಿ. ಅದು ದೈವೀಕ ಸ್ಥಿತಿಯನ್ನು ತಲುಪುವವರೆಗೂ ಇದು ಮುಂದುವರೆಯುತ್ತದೆ. ನವಜನ್ಮ ಪಡೆಯುವುದು ಪ್ರಧಾನ ಜೀವಿ(ಬೀಯಿಂಗ್)ಯೇ ಹೊರತು ಬಾಹ್ಯ ಶರೀರವಲ್ಲ. ಬಾಹ್ಯ ಶರೀರವನ್ನು ಕೇವಲ ಆ ಜನ್ಮದ ಅನುಭವಗಳನ್ನು ಪಡೆಯಲು ಸೃಷ್ಟಿಸಿರುವ ಒಂದು ಆಕೃತಿಯಷ್ಟೇ.

ಮತ್ತೊಂದು ಜನ್ಮದಲ್ಲಿ ಅದು ಬೇರೆಯೊಂದು ಸಾಮರ್ಥ್ಯದ, ಬೇರೊಂದು ಜೀವನ ಮತ್ತು ವೃತ್ತಿಗೆ ಅವಶ್ಯವಾದ ಬಾಹ್ಯ ಶರೀರವನ್ನು ಸೃಷ್ಟಿಸಿಕೊಳ್ಳುತ್ತದೆ. ಅಕಸ್ಮಾತ್ ವರ್ಜಿಲ್ ಮತ್ತೆ ಹುಟ್ಟಿ ಬಂದರೆ, ಆತ ಇನ್ನೂ ಒಂದು ಎರಡು ಜನ್ಮಗಳಲ್ಲಿ ಕವಿಯಾಗಿಯೇ ಮುಂದುವರೆಯಬಹುದು, ಆದರೆ ಆತ ಮಹಾ ಕಾವ್ಯವನ್ನು ಬರೆಯಲಾರ. ಆ ಜನ್ಮದಲ್ಲಿ ರೋಮ್‌ನಲ್ಲಿ ಆತ ಬರೆಯಲು ಇಚ್ಛಿಸಿದ್ದ ಆದರೆ ಬರೆಯಲು ಯಶಸ್ವಿಯಾಗದೆ ಹೋದ ಸುಂದರ ಕವನಗಳನ್ನು ರಚಿಸುವ ಸಾಧ್ಯತೆ ಇದೆ. ಹಾಗೂ ಅದರ ಮುಂದಿನ ಜನ್ಮಗಳಲ್ಲಿ ಆತ ಕವಿಯೇ ಆಗದೆ, ತತ್ವಜ್ಞಾನಿಯೋ, ಯೋಗಿಯೋ ಆಗಿ, ಪರಮ ಸತ್ಯದ ಅನ್ವೇಷಣೆಯಲ್ಲಿ ತೊಡಗುತ್ತಾನೆ – ಇದೂ ಸಹ ತನ್ನ ಆ ಜನ್ಮದ ಸಾಕಾರಗೊಳ್ಳದ ಪ್ರಜ್ಞೆ, ವರ್ಜಿಲ್ ಕವಿಯಾಗುವ ಮೊದಲಿನ ಜನ್ಮದಲ್ಲಿ ಬಹುಶಃ ಒಬ್ಬ ಯೋಧನಾಗಿಯೋ ರಾಜನಾಗಿಯೋ ಇದ್ದು ಏನಿಯಾಸ್ ಅಥವಾ ಅಗಸ್ಟಸ್ ರೀತಿಯ ಸಾಹಸಗಳನ್ನು ಮಾಡಿದ್ದಿರಬಹುದು. ಹೀಗೆ, ಜನ್ಮದ ಹಿಂದಿನ ಅಥವಾ ಮುಂದಿನ

ಹಂತಗಳಲ್ಲಿ, ಪ್ರಧಾನ ಜೀವಿಯು ಹೊಸ ವ್ಯಕ್ತಿತ್ವ, ಪಾತ್ರವನ್ನು ರೂಢಿಸಿಕೊಂಡು, ಭೂಲೋಕದ ಎಲ್ಲ ಅನುಭವಗಳನ್ನೂ ಹಾದು ಹೋಗುತ್ತದೆ.

ವಿಕಸನವಾಗುತ್ತಿರುವ ಜೀವಿ ಹೀಗೆ ಇನ್ನಷ್ಟು, ಮತ್ತಷ್ಟು ಉತ್ಕ್ರಾಂತಿ ಹೊಂದಿ ಶ್ರೀಮಂತವೂ ಸಂಕೀರ್ಣವೂ ಆದಂತೆ ಅದರ ವ್ಯಕ್ತಿತ್ವಗಳನ್ನು ಕ್ರೋಢೀಕರಿಸುತ್ತದೆ. ಕೆಲವೊಮ್ಮೆ ಇವು ಸಕ್ರಿಯ ಧಾತುಗಳಿಗೆ ಪೂರಕವಾಗಿ ನಿಂತು, ವ್ಯಕ್ತಿಯ ಗುಣ–ಲಕ್ಷಣಗಳನ್ನು, ಸಾಮರ್ಥ್ಯಗಳನ್ನು ಅಲ್ಲಲ್ಲಿ ಹೊರಚೆಲ್ಲಲು ನೆರವಾಗುತ್ತವೆ – ಅಥವಾ ಅವು ಮುಂಚೂಣಿಯಲ್ಲಿ ನಿಂತು ಬಹುಮುಖ ವ್ಯಕ್ತಿತ್ವಗಳನ್ನು, ಬಹುರೂಪಿ ವಿಶ್ವ ಸಾಮರ್ಥ್ಯಗಳನ್ನು ತೋರಿಸಬಹುದು. ಆದರೆ ಹಿಂದಿನ ಜನ್ಮಗಳ ವ್ಯಕ್ತಿತ್ವ, ಸಾಮರ್ಥ್ಯಗಳು ಈ ಜನ್ಮದಲ್ಲಿಯೂ ಮತ್ತೆ ಕಂಡುಬಂದರೆ, ಅದು ಹಳೆಯ ಶಕ್ತಿ ಸಾಮರ್ಥ್ಯಗಳ ಪುನರಾವರ್ತನೆ ಆಗಿರುವುದಿಲ್ಲ, ಬದಲಿಗೆ, ಅದೇ ಗುಣಗಳನ್ನು ಹೊಸ ರೂಪ – ಆಕಾರಗಳಾಗಿ ಸಾಮರಸ್ಯದಿಂದ ಸಮೀಕರಿಸಿದ ಪರಿಷ್ಕೃತ ಜೀವಿಯಾಗುತ್ತದೆ. ಹೀಗಾಗಿ ಯೋಧನಾಗಿ, ಕವಿಯಾಗಿ ಇದ್ದ ವರ್ಜಿಲನ್ನು ಆತನ ನವಜನ್ಮದಲ್ಲಿ ನಿರೀಕ್ಷಿಸಬಾರದು – ಕೆಲವು ಬಹಿರಂಗ ಲಕ್ಷಣಗಳು ಮರುಕಳಿಸಬಹುದು, ಆದರೆ ಸಾಕಷ್ಟು ಬದಲಾಗಿ, ಹೊಸದಾಗಿ ಎರಕಹೊಯ್ದ ಮಿಶ್ರಲೋಹವಾಗಿರುತ್ತದೆ.

ಈ ಮೊದಲು ಮಾಡದಂತಹ ಕೆಲಸಗಳನ್ನು ಸಾಧಿಸಲು ಶಕ್ತಿಗಳನ್ನು ಹೊಸ ದಿಕ್ಕಿನತ್ತ ನಿರ್ದೇಶಿಸುತ್ತದೆ. ಇನ್ನೊಂದು ವಿಷಯ. ನವಜನ್ಮದಲ್ಲಿ ಅತಿ ಪ್ರಮುಖವಾದದ್ದು ವ್ಯಕ್ತಿತ್ವ, ಅಥವಾ ಗುಣವಲ್ಲ – ತಾನೂ ಉತ್ಕ್ರಾಂತವಾಗುತ್ತಾ, ಹಿಂದೆ ನಿಂತು ಅದು ಪ್ರಕೃತಿಯ ವಿಕಸನವನ್ನೂ ಉತ್ತೇಜಿಸುವ ಅತೀಂದ್ರಿಯ ಗುಣವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/543–44**

*

**ಅತ್ಯಾವಶ್ಯಕ ಅನುಭವಗಳು ಮಾತ್ರ ಮುಂದಿನ ಜನ್ಮಕ್ಕೆ ಸಾಗುತ್ತವೆ**

ಮಾನಸಿಕ ಹಾಗೂ ಜೈವಿಕ ಅಂಶಗಳನ್ನೂ ಸಹ ತೊರೆದು, ಆತ್ಮವು ದೇಹವನ್ನು ತ್ಯಜಿಸಿ ವಿಶ್ರಾಂತಿಯ ತಾಣಕ್ಕೆ ಹೊರಟಾಗ, ಅದು ತನ್ನೊಂದಿಗೆ ಕೊಂಡೊಯ್ಯುವುದು ಅದರ ಅನುಭವಗಳನ್ನು, ಅದು ಕೊಂಡೊಯ್ಯುವುದು

ಭೌತಿಕ ಘಟನೆಗಳನ್ನಲ್ಲ, ಮನೋ ಮಂದಿರಗಳನ್ನಲ್ಲ, ಮಹತ್ವದ ಚಲನವಲನಗಳನ್ನಲ್ಲ, ಸಾಮರ್ಥ್ಯ, ಗುಣಗಳನ್ನಲ್ಲ, ಅದು ಈ ಎಲ್ಲದರಿಂದ ಸಂಕಲಿತವಾದ ಅನುಭವಗಳನ್ನು. ಇದನ್ನು ದೈವೀಕ ಅಂಶ ಎಂದು ಕರೆಯಬಹುದು. ಇದೊಂದಕ್ಕಾಗಿಯೇ ಉಳಿದೆಲ್ಲವೂ ಅಸ್ತಿತ್ವದಲ್ಲಿ ಇದ್ದದ್ದು. ಅದು ಶಾಶ್ವತವಾಗಿ ಸೇರಿಕೊಳ್ಳುತ್ತದೆ. ಇದೇ ನಮ್ಮನ್ನು ದೈವೀಕದತ್ತ ನಡೆಸಲು ನೆರವಾಗುವುದು. ಹೀಗಾಗಿಯೇ ನಮಗೆ ಪೂರ್ವಜನ್ಮದ ಬಹಿರಂಗ ಸಂದರ್ಭ ಮತ್ತು ಘಟನೆಗಳ ಸ್ಮರಣೆ ಇರುವುದಿಲ್ಲ. – ನಮ್ಮಲ್ಲಿ ಅಖಂಡ ಸಾತತ್ಯದತ್ತ ದೃಢವಾದ ಬೆಳವಣಿಗೆ ಇದ್ದಲ್ಲಿ ಮಾತ್ರ ಈ ನೆನಪು ನಮಗೆ ಬರಬಲ್ಲದು. ಜೀವಧಾರಕ, ಸೂಕ್ಷ್ಮ ಭೌತಿಕವೂ ಒಳಗೊಂಡಂತೆ, ಎಲ್ಲವೂ ಬೀಜರೂಪದ ಸ್ಮರಣೆಯಾಗಿರುತ್ತದೆ. ಸಾಧಾರಣವಾಗಿ ಅದು ಹೊರಬರುವುದಿಲ್ಲ. ಯೋಧನೊಬ್ಬನ ಹೃದಯ ವೈಶಾಲ್ಯತೆಯಲ್ಲಿ ಅಡಗಿರುವ ದೈವೀಕ ಅಂಶವೇನು? ಅವನ ನಿಷ್ಠೆ, ಉದಾತ್ತತೆ, ಅಪಾರ ಧೈರ್ಯ, ಕವಿಯೊಬ್ಬನ ಸೌಹಾರ್ದ ಮನೋಭಾವ ಮತ್ತು ಅಪಾರ ಜೀವ ಶಕ್ತಿಯ ಹಿಂದಿರುವ ದೈವೀಕ ಅಂಶವೇನು? ಜೀವನವನ್ನು ದೈವೀಕದ/ಆಧ್ಯಾತ್ಮಿಕದ ಕಡೆಗೆ ತಿರುಗಿಸಿದರೆ, ಆ ಅಂಶವು ಒಂದು ಹೊಸ ವ್ಯಕ್ತಿತ್ವದ ಸಾಮರಸ್ಯದಲ್ಲಿ ಉಳಿದು, ಹೊಸ ಅಭಿವ್ಯಕ್ತಿಯನ್ನು ನೀಡಿ, ದೈವೀಕವನ್ನು ಸಾಧಿಸಲು ಮಾಡಬೇಕಿರುವ ಕೈಂಕರ್ಯ ಅಥವಾ ಜ್ಞಾನೋದಯಕ್ಕೆ ಬೇಕಾಗುವ ಶಕ್ತಿಯಾಗುತ್ತದೆ.


**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/544 – ಶ್ರೀ ಅರವಿಂದರು**

*

ದಿವ್ಯತ್ವಕ್ಕಿರುವ ಅತಿ ಸಹಜ ಮನುಜ – ಭಾವದೀ ಭಾಗದಲ್ಲಿ
ಆತ್ಮ ಭವ್ಯದಮರತ್ವವನ್ನು ಕಾಲದಲಿ ಅವಳು ಇರಿಸಿ,
ಜ್ಯೋತಿಯಿಂದಲೇ ಜ್ಯೋತಿ – ಚಿಜ್ಜ್ಯೋತಿ ಕಾಂತೊಯೊಳು ಎತ್ತಿಹಿಡಿದು
ಶಕ್ತಿಯಿಂದಲೇ ಶಕ್ತಿ – ಶಕ್ತ ಮೂಲದಡೆ ಅತ್ಯಾಪ್ತಗೊಳಿಸಲೆಂದು
ಸ್ವರ್ಗೀಯ ಮೇರುದೌನತ್ಯ ಚಿರದಿ ತಾನಲ್ಲಿ ನೆಲೆಸಲೆಂದು
ಸರ್ವೇಶನಾಗಿ ಅಧಿರೂಢಗೊಂಡು ವೈರಾಜ್ಯದೊಡೆಯನಾಗಿ

**Savitri, p. (ಸಾವಿತ್ರಿ ಪುಟ) 527 – ಶ್ರೀ ಅರವಿಂದರು**

*



ಅದಿತಿ ರೂಪಗಳ ಆದ್ಯತೆಯ ತೆರದಿ ಸ್ಥಾಪಿಸಿದ ಸ್ಥಪತಿಯಿವನು,
ಅಪರಿಚಿತವಿದ್ದ ಆ ಮೂಲವಾಸಿ, ದರ್ಶಿಸಲು ಬಂದು ತಾನು,
ತನ್ನ ಸ್ವಂತಿಕೆಯ ಮಾಯೆಗಳಿಗೆಲ್ಲ ದೀಕ್ಷಿತನು ಗವಸನಿರಿಸೆ,
ವಿಶ್ವ ಚಿಂತನವ ದೇವಕಣದಲ್ಲಿ ಹುದುಗಿಸುತ ಆಗಲವನು //15//*

**Savitri, p. (ಸಾವಿತ್ರಿ ಪುಟ) 23** **– ಶ್ರೀ ಅರವಿಂದರು**

**(ಪದ್ಯಾನುವಾದ: ಪುಟ್ಟು ಕುಲಕರ್ಣಿ)**

*

# ನವಜನ್ಮದ ಪ್ರಕ್ರಿಯೆ

– ಅನುವಾದ: ಡಾ॥ ಬಿ.ಆರ್. ಭೀಡ

## ನವಜನ್ಮದ ನಿಯಮಗಳು

ನವಜನ್ಮಕ್ಕೆ ಸಂಬಂಧಿಸಿದಂತೆ ಎಲ್ಲ ಪ್ರಕರಣಗಳಲ್ಲೂ ಒಂದೇ ನಿಯಮ ಸರಿಹೋಗುವುದೆಂದು ಹೇಳಲಾಗದು ಎಂಬುದನ್ನು ಮೊದಲು ಒಪ್ಪಿಕೊಳ್ಳಲೇಬೇಕಾಗುತ್ತದೆ. ಕೆಲವರು ತಕ್ಷಣ ಮರುಜನ್ಮ ತಾಳಿಬಿಡುತ್ತಾರೆ. ಇದು ಹೆಚ್ಚಾಗಿ ತಂದೆತಾಯಿಯರಿಂದ ಸಂಭವಿಸುವುದುಂಟು, ಮಕ್ಕಳು ಅವರನ್ನು ಬಿಟ್ಟಿಲಾರದಷ್ಟು ಅತಿಯಾಗಿ ಹಚ್ಚಿಕೊಂಡಿದ್ದರೆ ಇವರ ಒಂದು ಭಾಗ ಅವರದೆಯೊಳಗೆ ಹೋಗಿ ಸೇರಿಬಿಡುತ್ತದೆ. ಇನ್ನು ಕೆಲವರು ಮರುಜನ್ಮ ತಾಳಲು ನೂರಾರು, ಸಾವಿರಾರು ವರ್ಷ ತೆಗೆದುಕೊಳ್ಳುವುದೂ ಉಂಟು. ಅವಶ್ಯಕವಾದ ಸಂಗತಿಗಳೆಲ್ಲ ಪಕ್ವವಾಗಿ, ತಮಗೆ ಯೋಗ್ಯವಾದ ವಾತಾವರಣ ನಿರ್ಮಾಣವಾಗುವವರೆಗೆ ಕೆಲವರು ಕಾಯುತ್ತಾರೆ. ವ್ಯಕ್ತಿಯು ಯೌಗಿಕವಾಗಿ ಪ್ರಜ್ಞಾಯುಕ್ತನಾಗಿದ್ದರಂತೂ ತನ್ನ ಮುಂದಿನ ಜನ್ಮದ ಶರೀರವನ್ನು ಸ್ವತಃ ತಾನೇ ಸಿದ್ಧಪಡಿಸಿಕೊಳ್ಳಬಲ್ಲ; ಶರೀರವು ಜನ್ಮ ತಾಳುವ ಮೊದಲು ಅದನ್ನು ರೂಪಿಸುತ್ತಾನೆ, ಸಿದ್ಧಪಡಿಸುತ್ತಾನೆ, ಒಂದರ್ಥದಲ್ಲಿ ತನ್ನ ಶರೀರದ ನಿರ್ಮಾತೃ ತಾನೇ ಆಗಿರುತ್ತಾನೆ. ನೂತನ ಶಿಶುವಿಗೆ ತಂದೆತಾಯಿಗಳು ಕೇವಲ ಆನುಷಂಗಿಕ ಉಪಕರಣ ಅಥವಾ ಮಾಧ್ಯಮವಾಗಿರುತ್ತಾರೆ.

ನವಜನ್ಮದ ಬಗೆಗೆ ಇರುವ ತಪ್ಪು ಕಲ್ಪನೆಯೊಂದನ್ನು ನಾನಿಲ್ಲಿ ಪ್ರಾಸಂಗಿಕವಾಗಿ ಹೇಳಲೇಬೇಕು. ಅನೇಕ ಜನರು ತಾವು ಇಡಿಯಾಗಿ ಮರುಜನ್ಮ ತಾಳುವುದಾಗಿ ಭಾವಿಸಿದ್ದಾರೆ, ಇದು ಶುದ್ಧ ತಪ್ಪು. ಸತ್ತೆಯ ಕೆಲವಂಶ ಬೇರೆಯವರಲ್ಲಿ ಸೇರಿಕೊಂಡಿರಬಹುದು, ಹೊಸ ಸತ್ತೆಯ ಮೂಲಕ ಅವರು ಕೆಲಸ ಮಾಡುವುದು ನಿಜವಾಗಿರಲೂಬಹುದು, ಆದರೂ ಸಹ ಅವರ ಸಂಪೂರ್ಣ ಸತ್ತೆ ಮರು ಜನ್ಮ ತಾಳಿದೆ ಎಂದು ಹೇಳಲು ಬರುವುದಿಲ್ಲ. ಏಕೆಂದರೆ ಯಾವುದನ್ನು ತಮ್ಮ ಆತ್ಮ ಎಂದು ಅವರು ತಿಳಿದುಕೊಂಡಿದ್ದಾರೋ ಅದು ಅವರ ಸಂಪೂರ್ಣ ವ್ಯಕ್ತಿಗತ ಸತ್ತೆಯಾಗಿ ಇನ್ನೂ ಬೆಳೆದಿರುವುದಿಲ್ಲ. ಅವರ ಬಾಹ್ಯ ವ್ಯಕ್ತಿತ್ವವೆಂದರೆ ಬಾಹ್ಯ ವ್ಯಕ್ತಿತ್ವದ ಆಕಾರ ಮತ್ತು ಹೆಸರುಗಳಿಂದ ಗುರುತಿಸಲ್ಪಡುವ

ವ್ಯಕ್ತಿತ್ವ ಮಾತ್ರ ಆಗಿರುತ್ತದೆ. ಆದ್ದರಿಂದ ‘A’ ವ್ಯಕ್ತಿಯು ‘B’ಯಾಗಿ ಮರುಜನ್ಮ ತಾಳಿದ್ದಾನೆ ಎಂದು ಹೇಳುವುದು ತಪ್ಪಾಗುತ್ತದೆ. Aನ ವ್ಯಕ್ತಿತ್ವವು Bನ ವ್ಯಕ್ತಿತ್ವಕ್ಕಿಂತ ಮೂಲತಃ ತೀರ ಭಿನ್ನವಾಗಿರುವುದರಿಂದ ಅವನೇ Bಆಗಿ ಮರುಜನ್ಮ ತಾಳಿದ್ದಾನೆ ಎಂದು ಹೇಳಲು ಬರುವುದಿಲ್ಲ. ನಿರ್ದಿಷ್ಟವಾದ ಪ್ರಜ್ಞಾ ಸೂತ್ರವೊಂದು A ಹಾಗೂ B ಇಬ್ಬರನ್ನು ತನ್ನ ಪ್ರಕಟಣೆಗಾಗಿ ಬಳಸುತ್ತದೆ ಎಂದು ಹೇಳಿದರೆ ಮಾತ್ರ ಸರಿಯಾಗುವುದು. ಏಕೆಂದರೆ ಒಂದೇ ರೀತಿಯಾಗಿ ಉಳಿಯಬಲ್ಲದು ಅಂತರಾತ್ಮ ಮಾತ್ರ, ಅದು ಸರ್ವಥಾ ಬಾಹ್ಯ ವ್ಯಕ್ತಿತ್ವ ಅಲ್ಲ. ಅದು ಆಂತರ್ಯದಲ್ಲಿ ಇರುವಂಥದು, ಅದು ಹೊರಗಿನ ಆಕಾರವಾಗಲಿ ನಾಮ ರೂಪವಾಗಲಿ ಅಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/145**

*

**ಹಳೆಯ ವ್ಯಕ್ತಿತ್ವದ ಅಂಶವೇನಾದರೂ ಉಳಿಯುತ್ತದೆಯೇ?**

ಸಾಮಾನ್ಯವಾಗಿ ಎಲ್ಲರೂ ತಮ್ಮ ತಮ್ಮ ಭೌತಿಕ ಶರೀರದ ಜೊತೆ ಅತಿಯಾಗಿ ಗುರುತಿಸಿಕೊಂಡಿರುವುದರಿಂದ ಅದು ವಿಘಟನೆ ಹೊಂದಿದ ತಕ್ಷಣ ಅವರದು ಎನ್ನಬಹುದಾದ ಯಾವ ಅಂಶವೂ ಉಳಿಯುವುದಿಲ್ಲ – ಏನೂ ಅಂದರೆ ಏನೇನೂ ಉಳಿಯುವುದಿಲ್ಲ ಅಂತಲ್ಲ, ಅವರ ಪ್ರಾಣಿಕ ಹಾಗೂ ಮಾನಸಿಕ ಅಂಶ (ದ್ರವ್ಯ) ಯಾವಾಗಲೂ ಉಳಿದೇ ಇರುತ್ತದೆ, ಆದರೆ ಅದು ಭೌತಿಕ ವ್ಯಕ್ತಿತ್ವಕ್ಕಿಂತ ಬಹಳ ಭಿನ್ನವಾಗಿರುತ್ತದೆ. ಏನು ಉಳಿದಿರುವುದೋ ಅದು ಬಾಹ್ಯ ವ್ಯಕ್ತಿತ್ವದ ಸ್ಪಷ್ಟರೂಪ ತಳೆದಿರುವುದಿಲ್ಲ, ಏಕೆಂದರೆ ಬಾಹ್ಯ ವ್ಯಕ್ತಿತ್ವವು ಕೇವಲ ಬಯಕೆಗಳ, ಸಹಜ ಪ್ರವೃತ್ತಿಗಳ ಗೊಂದಲಮಯ ಸಮೂಹವಾಗಿ ಉಳಿದಿರುತ್ತದೆ, ಅದು ತಾತ್ಕಾಲಿಕ ಜೈವಿಕ ಮಿಶ್ರಣದಂತಿದ್ದು ಅದರಲ್ಲಿ ಕೇವಲ ಸುಸಂಬದ್ಧ ಹಾಗೂ ಪರಸ್ಪರ ಸಹಾನುವರ್ತಿ ಶಾರೀರಿಕ ಕ್ರಿಯೆಗಳ ಸಮಾವೇಶ ಇರುತ್ತದೆ. ಯಾವಾಗ ಅವೆಲ್ಲ ತಮ್ಮ ಕಾರ್ಯವನ್ನು ಸ್ಥಗಿತಗೊಳಿಸುತ್ತವೆಯೋ ಆಗ ಸಹಜವಾಗಿ ಅವುಗಳ ನಡುವಿನ ಮಿಥ್ಯಾ–ಏಕತೆ ಕೂಡ ಭಗ್ನವಾಗಿ ಬಿಡುತ್ತದೆ. ವ್ಯಕ್ತಿತ್ವದ ಇತರ ಎಲ್ಲ ಭಾಗಗಳ ಮೇಲೆ ನಿರ್ದಿಷ್ಟ ಮಾನಸಿಕ ವ್ಯವಸ್ಥೆ ಅಥವಾ ಶಿಸ್ತು ತರಲು ಸಾಧ್ಯವಾದರೆ, ಎಲ್ಲವನ್ನೂ ಒಂದು ಸಾಮಾನ್ಯ ಮಾನಸಿಕ ಆದರ್ಶದಡಿಯಲ್ಲಿ ತರಲು ಸಾಧ್ಯವಾದರೆ, ಆಗ ಮಾತ್ರ ನಿಜವಾದ ಒಂದು ರೀತಿಯ ವೈಯಕ್ತಿಕತೆ

ನಿರ್ಮಾಣವಾಗುವುದು, ಅದು ತನ್ನ ಭೌತಿಕ ಅಸ್ತಿತ್ವದ ನೆನಪನ್ನುಳಿಸಿಕೊಂಡು, ಅದರಿಂದಾಗಿ ನಾಶವಾಗದೇ ಪ್ರಜ್ಞಾಯುಕ್ತವಾಗಿ ಉಳಿಯಲು ಸಾಧ್ಯವಾಗುವುದು. ಕಲಾವಿದರು, ತತ್ವಜ್ಞಾನಿಗಳು ಹಾಗೂ ಇತರ ಕೆಲ ವಿಕಾಸವನ್ನು ಹೊಂದಿದ ವ್ಯಕ್ತಿಗಳು, ಅಂದರೆ ಯಾರು ತಮ್ಮ ಪ್ರಾಣಿಕ ಸತ್ತೆಯನ್ನು ಸುಸಂಘಟಿತಗೊಳಿಸಿ ಪ್ರತ್ಯೇಕತೆಯನ್ನು ಸಾಧಿಸಿದ್ದಾರೋ ಹಾಗೂ ಒಂದಷ್ಟು ಮಟ್ಟಿಗೆ ಪರಿವರ್ತನೆಯನ್ನು ಮಾಡಿದ್ದಾರೋ ಅಂಥವರು ಸಂಪೂರ್ಣ ನಾಶವಾಗದೇ ಉಳಿದುಕೊಳ್ಳುತ್ತಾರೆ ಎಂದು ಹೇಳಬಹುದು. ಏಕಂದರೆ ಅಂಥವರು ಮಾತ್ರ ತಮ್ಮ ಬಾಹ್ಯ ಪ್ರಜ್ಞೆಯಲ್ಲಿ ಅಂತರಾತ್ಮನ ಒಂದಷ್ಟು ಛಾಯೆಯನ್ನು ಪ್ರತಿಷ್ಠಾಪಿಸಿರುತ್ತಾರೆ, ಅದು ಸ್ವಭಾವತಃ ಅವಿನಾಶಿಯಾಗಿರುವುದರಿಂದ, ಹಾಗೂ ಅದರ ಮಹೋದ್ದೇಶವೇ ದೈವೀ ಸಂಕಲ್ಪದ ಸುತ್ತಲೇ ವ್ಯಕ್ತಿಯ ವ್ಯಕ್ತಿತ್ವವನ್ನು ಹೆಚ್ಚು ಹೆಚ್ಚಾಗಿ ರಚಿಸುತ್ತ ಹೋಗುವುದಾಗಿರುವುದರಿಂದ ಅದು ಸಾಧ್ಯವಾಗುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/146**

*

**ನವಜನ್ಮ ಮತ್ತು ಅಂತರಾತ್ಮನ ಬೆಳವಣಿಗೆಯ ಪ್ರಮಾಣ**

ಯಾರು ಯಾವ ವರ್ಗಕ್ಕೆ ಸಂಬಂಧಿಸಿದ್ದಾರೆ ಹಾಗೂ ಅವರ ಅಂತರಾತ್ಮನ ಬೆಳವಣಿಗೆ ಎಷ್ಟರ ಮಟ್ಟಿಗೆ ಆಗಿದೆ ಎಂಬುದರ ಮೇಲೆ ಎಲ್ಲವೂ ಅವಲಂಬಿಸಿದೆ. ಅಂತರಾತ್ಮನ ಬೆಳವಣಿಗೆಯಾಗಿದ್ದು ತುಸು ಪಕ್ವತೆಯ ಸಮೀಪ ಬಂದಿದ್ದರೆ, ನಾನು ಒಂದು ದಿನ ಹಿಂದೆ ನಿಮಗೆ ಹೇಳಿದ್ದೇನಲ್ಲ, ಅಂಥ ಸಾಯುವ ಮೊದಲು ಮಾಡಿಕೊಳ್ಳಬಹುದಾದ ಆಯ್ಕೆ ಸಾಧ್ಯವಾಗುವುದು, ಅದು ವಾಸ್ತವಿಕ. ಮತ್ತು ಈ ರೀತಿಯ ಆಯ್ಕೆ ಅಂದರೆ ಎಲ್ಲವೂ ಸಾಧ್ಯ ಅಂತ ಅರ್ಥ. ಆದರೆ ಬಹಳಷ್ಟು ಪ್ರಕರಣಗಳಲ್ಲಿ ಮರುಜನ್ಮವು ಸಾಮಾನ್ಯವಾಗಿ ಯಾಂತ್ರಿಕವಾಗಿ ಆಗಿಬಿಡುತ್ತದೆ. ಅಂತರಾತ್ಮನ ಸಂಕಲ್ಪ ಬೆಳೆದಿರುವುದಿಲ್ಲ ಮತ್ತು ಅದು ಆಯ್ಕೆ ಮಾಡಿಕೊಳ್ಳುವುದೂ ಇಲ್ಲ. ಅಂತೆಯೇ ಇಲ್ಲಿ ಯಾವ ನಿಯಮಗಳೂ ಇಲ್ಲ. ಕೇವಲ ಸಂದರ್ಭಗಳ ಮೇಲೆಯೇ ಎಲ್ಲವೂ ಅವಲಂಬಿಸಿರುತ್ತದೆ ಮತ್ತು ವಿಶೇಷವಾಗಿ ಅಂತರಾತ್ಮವು ಯಾವ ರೂಪಣೆಯ ದಾರಿಯನ್ನು ಅನುಸರಿಸುವುದೋ ಅದರ ಮೇಲೆ ಅವಲಂಬಿಸಿರುತ್ತದೆ. ಇದೆಲ್ಲವೂ ಅಂತರಾತ್ಮದ ಮೂಲ ಯಾವುದು ಎನ್ನುವುದರ

ಮೇಲೆ ಅವಲಂಬಿಸಿರುತ್ತದೆ. ಆದ್ದರಿಂದ ಎಲ್ಲವನ್ನೂ ನಿಶ್ಚಿತವಾಗಿ ಹೇಳಲು ಬರುವುದಿಲ್ಲ. ಹೆಣ್ಣು ಅಥವಾ ಗಂಡು ಎನ್ನುವ ಲಿಂಗಕ್ಕೆ ಸಂಬಂಧಿಸಿ ಹೇಳುವುದಾದರೆ, ಅದು ಬಹುಕಾಲ ಆಗಾಗ ಬದಲಾಗುತ್ತಿರುತ್ತದೆ. ಪ್ರಜ್ಞೆಯು ಚೆನ್ನಾಗಿ ಬೆಳೆದು, ಪ್ರಜ್ಞೆಯ ಹಾಗೂ ಮಾಡಬೇಕಾದ ಕಾರ್ಯಗಳಲ್ಲಿ ಒಂದು ತೆರನಾದ ಏಕತೆ ಬಂದಾಗ ಮಾತ್ರ ಬೇರೆಯದನ್ನು ಬಿಟ್ಟು ನಿರ್ದಿಷ್ಟವಾದ ಲಿಂಗವನ್ನು ಅದು ಆಯ್ದುಕೊಳ್ಳಬಹುದು. ಆದರೆ ಈ ರೀತಿ ಆಯ್ಕೆ ಮಾಡಿಕೊಳ್ಳುವ ಮೊದಲು, ಎಷ್ಟೋ ಅಗಣಿತ ಜನ್ಮಜನ್ಮಾಂತರಗಳಲ್ಲಿ ನೀವು ನಿಸ್ಸಂದೇಹವಾಗಿ ಬೇರೆ ಬೇರೆ ಲಿಂಗದಲ್ಲಿ ಜನ್ಮ ತಾಳಿರುತ್ತೀರಿ. ಅಂತೆಯೇ, ಕೆಲ ಸ್ತ್ರೀಯರು ಗಂಡಸಿನಂಥ ಸ್ವಭಾವ ಹೊಂದಿರುವುದನ್ನು, ಗಂಡಸರು ಹೆಣ್ಣು ಸ್ವಭಾವ ಹೊಂದಿರುವುದನ್ನು ನೀವು ನೋಡುತ್ತೀರಿ. ಅಥವಾ ತಮ್ಮ ವಿರುದ್ಧ ಲಿಂಗದ ಗುಣ ನಡುವಳಿಕೆ ಹೊಂದಿರುವವರನ್ನು ನೀವು ಕಾಣುತ್ತೀರಿ. ಆದರೆ ಆ ರೀತಿ "ಆಯ್ಕೆ" ಮಾಡುವ ಸಮಯದಲ್ಲಿ ವ್ಯಕ್ತಿಯು ಸೃಷ್ಟಿಕರ್ತೃವಿನ ಪ್ರಜ್ಞೆಗೆ ಅಥವಾ ನಿಶ್ಚಲ ಸಾಕ್ಷಿ ಭಾವಕ್ಕೆ ಒಳಪಡಲು ನಿರ್ಧರಿಸುವ ಸಾಧ್ಯತೆಯೂ ಇದೆ. ಅದೆಲ್ಲ ಮೂಲತಃ ಅದರ ಸಂರಚನೆಯ ಮೇಲೆ ಅವಲಂಬಿಸಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/183-84**

*

**ಆತ್ಮವು ದೇಹ ಧರಿಸುವ ವಿಧಾನ ಮತ್ತು ಸಮಯ**

ಅನೇಕ ವ್ಯಕ್ತಿಗಳ ವಿಕಾಸ ಹೊಂದಿದ ಆತ್ಮಗಳು ದೇಹಧಾರಣ ಮಾಡುವ ವಿಧಾನವನ್ನು ನಾನು ಅಸಂಖ್ಯಾತ ಬಾರಿ ನೋಡಿದ್ದೇನೆ ಎಂದು ಹೇಳಬಹುದು, ಅವುಗಳಲ್ಲಿ ಕೆಲವು ಜನ್ಮ ತಾಳಲು ಸಿದ್ಧತೆ ನಡೆಸಿದಂಥವುಗಳು ಮತ್ತು ಕೆಲವು ಅದಾಗಲೇ ಜನ್ಮ ತಾಳಿರುವಂಥವುಗಳು. ನಾನು ಈಗಾಗಲೇ ಹೇಳಿದಂತೆ ಎಲ್ಲ ಪ್ರಕರಣಗಳೂ ಒಂದೇ ರೀತಿ ಇರುವುದಿಲ್ಲ, ಬೇರೆ ಬೇರೆ ಆಗಿರುತ್ತವೆ. ಅದು ಭೌತಿಕಕ್ಕಿಂತ ಹೆಚ್ಚಾಗಿ ಮಾನಸಿಕ ಸ್ಥಿತಿಯ ಮೇಲೂ ಅವಲಂಬಿಸಿರುತ್ತದೆ. ದೇಹ ಧರಿಸಲು ಬಯಸುವ ಆತ್ಮಗಳ ಬೆಳವಣಿಗೆಯ ಹಂತದ ಮೇಲೂ ಅದು ನಿರ್ಭರವಾಗುತ್ತದೆ. – ಇಲ್ಲಿ "ಆತ್ಮ" ಅಂದರೆ ಅಂತರಾತ್ಮ ಎಂದೇ ಅಭಿಪ್ರೇತವಾಗುತ್ತದೆ – ಅದು ಬೆಳವಣಿಗೆಯ ಹಂತ, ದೇಹ ಧರಿಸುವ ಸಮಯ

ಸಂದರ್ಭ, ಪೂರೈಸಬೇಕಾಗಿರುವ ಅದರ ಕಾರ್ಯ ಇದೆಲ್ಲದರ ಮೇಲೆ ನಿರ್ಭರವಾಗಿರುತ್ತದೆ. ಅದರಿಂದಾಗಿ ಅನೇಕ ವ್ಯತ್ಯಾಸಗಳಾಗುತ್ತವೆ. ತಂದೆತಾಯಿಗಳ ಪ್ರಜ್ಞೆಯ ಸ್ಥಿತಿಯ ಮೇಲೂ ಅದು ಬಹಳಷ್ಟು ಅವಲಂಬಿತವಾಗಿರುತ್ತದೆ, ಮಗು ಬೇಕೆಂಬ ಹಂಬಲದಿಂದ, ಪ್ರಜ್ಞಾಯುಕ್ತವಾದ ಅಭೀಪ್ಸೆಯಿಂದ, ಅದೃಶ್ಯವಾದ ದಿವ್ಯ ಲೋಕಕ್ಕೆ ಮೊರೆ ಇಡುವುದರ ಮೂಲಕ ಹಾಗೂ ಆಧ್ಯಾತ್ಮಿಕ ಉತ್ಸಾಹದಿಂದ ಗರ್ಭ ಧರಿಸುವುದಕ್ಕೂ, ಏನೋ ಆಕಸ್ಮಿಕವಾಗಿ, ಬೇಕೆಂಬ ಬಯಕೆ ಇಲ್ಲದಿರುವುದಕ್ಕೂ ಬಹಳ ವ್ಯತ್ಯಾಸವಿದೆ, ಅಜಗಜಾಂತರ ವ್ಯತ್ಯಾಸವಿದೆ. ಈ ರೀತಿ ಬೇಡವಾಗಿರುವಾಗ ಆತ್ಮದ ದೇಹ ಧರಿಸುವ ಕ್ರಿಯೆ ನಡೆಯುವುದಿಲ್ಲವೆಂದೇನೂ ನಾನು ಹೇಳುವುದಿಲ್ಲ, ಆದರೆ ಆ ಕ್ರಿಯೆ ಗರ್ಭಧಾರಣೆಯ ಸಮಯಕ್ಕಿಂತ ಹೆಚ್ಚಾಗಿ ಅದರ ನಂತರ ನಡೆಯುತ್ತದೆ.

ಮಗುವಿನ ವ್ಯಕ್ತಿತ್ವದ ರಚನೆಯ ದೃಷ್ಟಿಯಿಂದ ಇಂಥ ಕ್ರಿಯೆ ತುಂಬ ವ್ಯತ್ಯಾಸವನ್ನುಂಟು ಮಾಡುತ್ತದೆ.

ಗರ್ಭಧಾರಣೆಯ ಸಮಯದಲ್ಲಿಯೇ ಆತ್ಮದ ದೇಹಧಾರಣಾ ಕ್ರಿಯೆಯೂ ನಡೆದು ಬಿಟ್ಟರೆ ಹುಟ್ಟಲಿರುವ ಮಗುವಿನ ಸಂಪೂರ್ಣ ರಚನೆಯನ್ನು ಆ ದೇಹ ಧರಿಸುವ ಆತ್ಮದ ಪ್ರಜ್ಞೆಯೇ ನೋಡಿಕೊಳ್ಳುತ್ತದೆ, ನಿರ್ದೇಶಿಸುತ್ತದೆ. ಮೂಲ ವಸ್ತುಗಳ ಆಯ್ಕೆ, ಎಲ್ಲ ದ್ರವ್ಯದ ತಿರುಳಿನ ಆಕರ್ಷಣೆ ಶಕ್ತಿಗಳ ಅಯ್ಕೆ ಹಾಗೂ ಸಂಪೂರ್ಣವಾಗಿ ಏಕೀಭವಿಸಿರುವ ದ್ರವ್ಯದ ಮೂಲ ಸತ್ವದ ಆಯ್ಕೆ ಹೀಗೆ ಎಲ್ಲವನ್ನೂ ಅದೇ ನಿಭಾಯಿಸುತ್ತದೆ. ಅದಾಗಲೇ ಆಯ್ಕೆ ನಡೆದು ಹೋಗಿರುತ್ತದೆ ಮತ್ತು ಇದು ಸಹಜವಾಗಿ ಶರೀರದ ರಚನೆಯ ಕ್ರಿಯೆಯಲ್ಲಿ ಸಂಪೂರ್ಣ ಬೇರೆಯದೇ ಆದ ವಿಶೇಷ ಪರಿಸ್ಥಿತಿಗಳನ್ನು ಸೃಷ್ಟಿಸುತ್ತದೆ. ಮಗುವಿನ ಶರೀರವು ಅದಾಗಲೇ ಚೆನ್ನಾಗಿ ಬೆಳದಿರಬಹುದು, ವಿಕಾಸ ಹೊಂದಿರಬಹುದು, ಹುಟ್ಟುವ ಮೊದಲೇ ಚೆನ್ನಾಗಿ ಸಾಮರಸ್ಯವನ್ನು ಕಂಡುಕೊಂಡಿರಬಹುದು. ಇದು ತೀರ ಅಪರೂಪ, ಅತ್ಯಂತ ಅಪರೂಪ ಎಂಬುದನ್ನು ಕೂಡ ನಾನು ಹೇಳಲೇಬೇಕು. ಆದರೂ ಹಾಗಾಗುವುದು ಅಸಂಭವವೇನಲ್ಲ.

ಅನೇಕ ಸಲ, ಹುಟ್ಟುವ ಸಮಯದಲ್ಲಿ ಅಂದರೆ ಅದು ತಾಯಿಯ ಗರ್ಭದಿಂದ ಸ್ವತಂತ್ರವಾಗಿ ಹೊರಬರುವ ಗಳಿಗೆಯಲ್ಲಿ, ಅಳುತ್ತ ತನ್ನ ಪುಪ್ಪುಸಗಳನ್ನು

ಹಿಗ್ಗಿಸಿಕೊಳ್ಳುವ ಸಂದರ್ಭದಲ್ಲಿ ಪ್ರಾಣವು ಈ ರೀತಿ ಮಾಡುವ ಕರೆಯು ಆತ್ಮದ ಅವತರಣವನ್ನು ಸುಲಭಗೊಳಿಸುವುದು ಹಾಗೂ ಸಫಲಗೊಳಿಸುವುದು.

ಕೆಲವು ಸಲ ದಿನಗಳು, ತಿಂಗಳುಗಳು ಉರುಳಿ ಹೋಗುತ್ತವೆ. ಸಿದ್ಧತೆಯು ತುಂಬ ನಿಧಾನವಾಗಿರುತ್ತದೆ, ಅದ್ದರಿಂದ ಪ್ರವೇಶವು ಹಂತಹಂತವಾಗಿ ಅತಿ ಸೂಕ್ಷ್ಮವಾಗಿ ಹಾಗೂ ಅಕಲ್ಪಿತವಾದ ರೀತಿಯಲ್ಲಿ ಆಗುತ್ತ ಹೋಗುವುದು.

ಇನ್ನೂ ಕೆಲಸಲ, ಕ್ರಿಯೆ ಇನ್ನೂ ವಿಳಂಬವಾಗುವುದು. ಮಗು ತುಸು ಪ್ರಜ್ಞೆಯನ್ನು ಬೆಳಸಿಕೊಂಡು, ಮೇಲಿನ ಅಥವಾ ತೀರ ಉನ್ನತವಾದ ಯಾವುದೋ ಒಂದು ಪ್ರಭಾವ ತನ್ನ ಮೇಲೆ ಒತ್ತಡ ಹೇರುತ್ತಿದೆ ಎಂದು ಭಾವಿಸತೊಡಗಿದಾಗ, ಅತಿ ಸೂಕ್ಷ್ಮವಾದ ರೀತಿಯಲ್ಲಿ, ಆದರೆ ಆ ಸಂಬಂಧ ತೀರ ವಾಸ್ತವಿಕವೆಂದು ತಿಳಿದುಕೊಂಡಾಗ ಕೂಡ ಹೀಗೆ ಆಗುವುದುಂಟು. ಮಗುವಿಗೆ ಮೇಲಿನ ಪ್ರಭಾವದ ಭಾಸವಾಗುವುದರ ಜೊತೆಗೆ ಅದರ ಜೊತೆ ಸಂಪರ್ಕ ಬೆಳಸಿಕೊಳ್ಳಬೇಕೆಂದೂ ಅನಿಸತೊಡಗುವುದು. ಆ ಪ್ರಭಾವ ಏನು, ಅದು ಯಾವುದು ಒಂದೂ ತಿಳಿಯದು. ಆದರೂ ಅದರ ಅನುಭವ ಮಾತ್ರ ಮಗುವಿಗೆ ಆಗುವುದು. ಈ ಅಭೀಪ್ಸೆಯೇ ಅಂತರಾತ್ಮಿಕ ಸತ್ತೆಯನ್ನು ಆಕರ್ಷಿಸುವುದು ಮತ್ತು ಆ ಮಗುವಿನಲ್ಲಿ ಅದು ಇಳಿದು ಬರುವಂತೆ ಮಾಡುವುದು. ನಾನಿಲ್ಲಿ ನಿಮಗೆ ಅತಿ ಸಾಮಾನ್ಯ ನಿದರ್ಶನಗಳನ್ನು ಕೊಟ್ಟಿದ್ದೇನೆ. ಇನ್ನೂ ಬೇಕಾದಷ್ಟಿವೆ. ಇದು ಬೇರೆ ಬೇರೆ ಹೀಗೆ ಅಸಂಖ್ಯಾತ ವಿಭಿನ್ನ ರೀತಿಯಲ್ಲಿಯೂ ಸಂಭವಿಸಬಹುದು. ನಾನಿಲ್ಲಿ ನಿಮಗೆ ವಿವರಿಸಿದವುಗಳು ಅನೇಕ ಬಾರಿ ನೋಡಿದ ಸಾಮಾನ್ಯ ಪ್ರಕರಣಗಳು. ದೇಹಧಾರಣ ಮಾಡಲು ಬಯಸುವ ಆತ್ಮವು ಸಾಮಾನ್ಯವಾಗಿ ಹಿರಿದಾದ ಮನಸ್ಸಿನ ಕ್ಷೇತ್ರದಲ್ಲಿ, ಭೂಮಿಗೆ ತೀರ ಸಮೀಪದಲ್ಲಿ, ತನ್ನ ಮುಂದಿನ ಮನೆ ಅಥವಾ ಶರೀರವನ್ನು ಆಯ್ಕೆ ಮಾಡಿಕೊಂಡು, ಕೆಲಕಾಲ ತಂಗಿರುತ್ತದೆ. ಅಥವಾ ಇನ್ನೂ ಆಳಕ್ಕೆ, ಪ್ರಾಣಿಕದಲ್ಲಿ ಇಳಿಯಬಹುದು, ಅಲ್ಲಿಂದ ಇನ್ನೂ ನೇರವಾಗಿ ಕಾರ್ಯ ಮಾಡಬಹುದು ಅಥವಾ ಸೂಕ್ಷ್ಮ ಭೌತಿಕವನ್ನು ಪ್ರವೇಶಿಸಬಹುದು, ಅಲ್ಲಿಂದ ತನ್ನ ಮುಂದಿನ ಶರೀರದ ಬೆಳವಣಿಗೆಯನ್ನು ಇನ್ನೂ ಸಮೀಪದಿಂದ ನಿಭಾಯಿಸಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/334-35**

*

## ಅಂತರಾತ್ಮದ ಸಾನ್ನಿಧ್ಯವು ಮುಂದಿನ ಜನ್ಮದ ಪರಿಸ್ಥಿತಿಗಳನ್ನು ಆಯ್ದುಕೊಳ್ಳಬಲ್ಲದು

ಒಂದು ದೈವೀ ಕಿಡಿಯ ಉದಾಹರಣೆ ತೆಗೆದುಕೊಳ್ಳೋಣ, ಅದು ಆಕರ್ಷಣೆಯ ಮೂಲಕ, ಆಪ್ತತೆಯ ಮೂಲಕ, ಹಾಗೂ ಆಯ್ದುಕೊಳ್ಳುವ ಮೂಲಕ ತನ್ನ ಸುತ್ತ ಅಂತರಾತ್ಮಿಕ ಪ್ರಜ್ಞೆಯನ್ನು ಏಕತ್ರಿತಗೊಳಿಸತೊಡಗುತ್ತದೆ. (ಈ ಕ್ರಿಯೆ ಪ್ರಾಣಿಗಳಲ್ಲಿ ಈಗಾಗಲೇ ತುಂಬ ಕಣ್ಣಿಗೆ ಕಾಣುವ ರೀತಿಯಲ್ಲಿ ಸ್ಪಷ್ಟವಾಗಿ ನಡೆಯುತ್ತದೆ, ನೀವೇ ತುಂಬ ವಿಶಿಷ್ಟ ಜೀವಿಗಳೆಂದು ತಿಳಿಯಬೇಡಿ, ನೀವೆಷ್ಟೇ ಅಂತರಾತ್ಮನನ್ನು ಹೊಂದಿದ್ದೀರಿ, ಸೃಷ್ಟಿಯ ಯಾವ ಜೀವಿಯಲ್ಲೂ ಅದಿಲ್ಲ ಎಂದು ತಿಳಿಯಬೇಡಿ, ಅದು ಭೌತಿಕದಲ್ಲಿ ಆರಂಭವಾಗಿ, ಸಸ್ಯಗಳಲ್ಲಿ ತುಸು ಹೆಚ್ಚಿಗೆ ಬೆಳೆಯುತ್ತದೆ. ಮತ್ತು ಪ್ರಾಣಿಗಳಲ್ಲಿ ಅಂತರಾತ್ಮಿಕದ ಇರುವಿಕೆಯ ಹೊಳಪು ಮೊದಲಬಾರಿಗೆ ಕಾಣಿಸುತ್ತದೆ.) ಆನಂತರ ಈ ಅಂತರಾತ್ಮಿಕ ಸತ್ತೆಯು ಸಾಕಷ್ಟು ಬೆಳೆದು ಸ್ವತಂತ್ರ ವೈಯಕ್ತಿಕ ಪ್ರಜ್ಞೆಯನ್ನು ಮತ್ತು ವೈಯಕ್ತಿಕ ಸಂಕಲ್ಪವನ್ನು ಹೊಂದುವ ಹಂತಕ್ಕೆ ಬೆಳೆಯುತ್ತದೆ. ಆಮೇಲೆ ಅನೇಕ ಜನ್ಮಗಳ ನಂತರ ಅದು ಹೆಚ್ಚೂ ಕಡಿಮೆ ವೈಯಕ್ತಿಕವಾಗಿ ರೂಪಗೊಳ್ಳುತ್ತದೆ, ತನ್ನ ಇರುವಿಕೆಯ ಬಗ್ಗೆ ಅದು ಪ್ರಜ್ಞಾಯುಕ್ತವಾಗುತ್ತದೆ, ತನ್ನ ಬೆಳವಣಿಗೆಗಾಗಿ ತಾನು ಆಯ್ದುಕೊಂಡ ಚಲನೆ, ಪರಿಸರಗಳ ಬಗ್ಗೆ ತಿಳುವಳಿಕೆ ಮೂಡುತ್ತದೆ. ಒಂದು ಹಂತದ ಪರಿವೀಕ್ಷಣೆಯ ಮಟ್ಟದಲ್ಲಿ ಅದು ಸಾಮಾನ್ಯವಾಗಿ ತಾನು ಮುಗಿಸಲಿರುವ ಜೀವನದ ಕೊನೆಯ ಗಳಿಗೆಯಲ್ಲಿ ತನ್ನ ಮುಂದಿನ ಜೀವನ ಹೇಗಿರಬೇಕೆಂಬುದನ್ನು ನಿರ್ಧರಿಸುತ್ತದೆ. ಇಲ್ಲೊಂದು ಮಹತ್ವದ ವಿಷಯವನ್ನು ನಾನು ನಿಮಗೆ ಹೇಳಲೇಬೇಕು. ಅಂತರಾತ್ಮಿಕ ಸತ್ತೆಯು ತನ್ನ ಭೂಮಿಯ ಮೇಲಿನ ಭೌತಿಕ ಜೀವನದಲ್ಲಿ ಮಾತ್ರ ಪ್ರಗತಿ ಸಾಧಿಸಿಬಲ್ಲದು ಹಾಗೂ ತನ್ನನ್ನು ರೂಪಿಸಿಕೊಳ್ಳಬಲ್ಲದು. ಅದು ಶರೀರವನ್ನು ಬಿಟ್ಟ ತಕ್ಷಣ, ಅದು ವಿಶ್ರಾಂತಿಗೆ ತೆರಳುತ್ತದೆ, ಈ ಅವಧಿಯು ಅದರ ಆಯ್ಕೆ ಮತ್ತು ಬೆಳವಣಿಗೆಯ ಮಟ್ಟದ ಅನುಗುಣವಾಗಿ ತುಸು ಅಧಿಕವಾಗಿಯೇ ಇರುತ್ತದೆ. ಎಲ್ಲವನ್ನೂ ಜೀರ್ಣಿಸಿಕೊಳ್ಳಲು, ತಟಸ್ಥ ಪ್ರಗತಿಯನ್ನು ಸಾಧಿಸಲು, ಒಂದು ವಿಧವಾಗಿ ತಟಸ್ಥ ಬೆಳವಣಿಗೆ ಸಾಧಿಸಲು ಅಂದರೆ ಅದೇ ಅಂತರಾತ್ಮಿಕ ಸತ್ತೆಯೇ ಮುಂದಿನ ಜನ್ಮದ ಅನುಭವಗಳಿಗಾಗಿ ಮುಂದುವರಿಯಲು ಹಾಗೂ ಹೆಚ್ಚು ಕ್ರಿಯಾಶೀಲ ಪ್ರಗತಿ ಸಾಧಿಸಲೆಂದು ಈ ವಿಶ್ರಾಂತಿಯ ಅವಧಿ ದೀರ್ಘವಾಗಿಯೇ ಇರುತ್ತದೆ. ಆದರೆ ಒಂದು ಜನ್ಮ ಮುಗಿಸಿದ ನಂತರ (ತಾನೇನು ಸಾಧಿಸಬೇಕೆಂದು

ಅದು ಮಾಡಿತ್ತೋ ಅದು ಪೂರ್ತಿಯಾದಾಗ ಮಾತ್ರ ಅದರ ಮುಕ್ತಾಯವಾಗುವುದು) ತಾನೆಲ್ಲಿ ಹುಟ್ಟಬೇಕು, ತಾನು ಹುಟ್ಟಬೇಕಾದ ಸ್ಥಳ ಎಲ್ಲಿ, ತನ್ನ ಮುಂದಿನ ಜನ್ಮದ ಪರಿಸರ ಹೇಗಿರಬೇಕು, ಮತ್ತು ಯಾವ ರೀತಿಯ ಜೀವನ ಇರಬೇಕು ಎಂಬುದನ್ನೆಲ್ಲ ಅದು ಆಯ್ದುಕೊಳ್ಳುವುದು. ತಾನು ಸಾಧಿಸಬೇಕೆಂದಿರುವ ಪ್ರಗತಿ ಯಾವುದರ ಮೂಲಕ ಆಗುವುದೋ ಅಥವಾ ಅನುಭವಗಳನ್ನು ಪಡೆಯಲು ತೀರ ಕರಾರುವಕ್ಕಾದ ಯೋಜನೆಯನ್ನು ಹಾಕಿಕೊಂಡೇ ಅದು ಮರುಜನ್ಮ ತಾಳುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/143-44**

*

**ಸ್ತ್ರೀ ಅಥವಾ ಪುರುಷ**

> *ನವಜನ್ಮ ತೆಗೆದುಕೊಳ್ಳುವಾಗ ಮಹಿಳೆ ಪುರುಷನಾಗಿಯೂ, ಪುರುಷ ಮಹಿಳೆಯಾಗಿಯೂ ಹುಟ್ಟಬಹುದೇ ಎಂದು ನನಗೆ X ಎನ್ನುವ ಓರ್ವ ವ್ಯಕ್ತಿ ಕೇಳಿದ. ತನ್ನಲ್ಲಿರುವ ಕೆಲವೊಂದು ಸ್ತ್ರೀ ಲಕ್ಷಣಗಳನ್ನು ಈ ಮೂಲಕ ಗುರುತಿಸಬಹುದೆಂದು ಆತ ತಿಳಿದಿದ್ದ. ನಾನು ಕೂಡ ಅಂತರಾತ್ಮನಲ್ಲೇನಾದರೂ ಈ ರೀತಿ ಲಿಂಗಭೇದವಿರುತ್ತದೆಯೇ ಎಂಬುದನ್ನು ತಿಳಿಯಬಯಸುತ್ತೇನೆ.*

ಲಿಂಗಭೇದ(ಅಂತರಾತ್ಮನಲ್ಲಿದೆಯಾದರೂ)ವೆಂಬುದು ಕರಾರುವಕ್ಕಾಗಿ ಇರುವು–ದಿಲ್ಲವಾದರೂ ಸ್ತ್ರಿ ಮತ್ತು ಪುರುಷ ಎಂದು ಗುರುತಿಸಬಹುದಾದ ತತ್ವಗಳಿರುತ್ತವೆ. ಇದು ನಿಜವಾಗಿ ಕಠಿಣವಾದ ಪ್ರಶ್ನೆ (ಪುರುಷ ಸ್ತ್ರೀಯಾಗಿ ಜನಿಸಬಹುದೇ ಅಥವಾ ಸ್ತ್ರೀ ಪುರುಷನಾಗಿ ಮರುಜನ್ಮ ತಾಳಬಹುದೇ ಎಂಬುದು). ಈ ದೇಹಧಾರಣವೆನ್ನುವ ಕ್ರಿಯೆ ಇದೆಯಲ್ಲ ಅದು ಒಂದು ನಿಶ್ಚಿತವಾದ ಪಂಕ್ತಿಯನ್ನು ಅನುಸರಿಸುತ್ತದೆ, ನನ್ನ ಅನುಭವಕ್ಕೆ ಹಾಗೂ ಸಾಮಾನ್ಯ ಅನುಭವಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಸಾಮಾನ್ಯವಾಗಿ ಒಂದೇ ಪಂಕ್ತಿಯನ್ನು ಅನುಸರಿಸುವುದು ಹೆಚ್ಚು. ಆದರೆ ಹಾಗೆಂದು ಲಿಂಗ ಬದಲಾವಣೆ ಸಾಧ್ಯವೇ ಇಲ್ಲವೆಂದು ತಳ್ಳಿಹಾಕಲಾಗದು. ಕೆಲವೊಬ್ಬರು ಈ ರೀತಿ ಬದಲಾವಣೆ ಮಾಡಿಕೊಳ್ಳುತ್ತಾರೆ ಕೂಡ. ಪುರುಷನೊಬ್ಬನಲ್ಲಿ ಸ್ತ್ರೀ ಸಹಜ ಲಕ್ಷಣ ಕಂಡುಬಂದರೆ

ಆತನ ಹಿಂದಿನ ಜನ್ಮ ಸ್ತ್ರೀಯದ್ದಾಗಿರಬಹುದೆಂದು ಖಚಿತವಾಗಿ ಹೇಳಲು ಬರುವುದಿಲ್ಲ. ಕ್ರಿಯಾತ್ಮಕ ಶಕ್ತಿಗಳ ಸಾಮಾನ್ಯ ಕಾರ್ಯ ಹಾಗೂ ರಚನೆಗಳ ಮೂಲಕ ಕೂಡ ಹಾಗೆ ಆಗುವ ಸಂಭವವಿದೆ. ಅಷ್ಟೇ ಅಲ್ಲ ಸ್ತ್ರೀಪುರುಷರಿಬ್ಬರಲ್ಲೂ ಕೆಲ ಸಾಮಾನ್ಯ ಲಕ್ಷಣಗಳೂ ಇವೆ. ಅಲ್ಲದೇ ಮಾನಸಿಕ ವ್ಯಕ್ತಿತ್ವದ ಒಂದಂಶ ತನ್ನಲ್ಲದೇ ಇದ್ದರೂ ಬೇರೆಯವರ ಜನನದಲ್ಲಿ ಭಾಗವಹಿಸಲೂಬಹುದು. ಆಗ ಅಂಥವನು ಹಿಂದಿನ ವ್ಯಕ್ತಿಯನ್ನು ಕುರಿತು "ನಾನು ಅದೇ ಅಲ್ಲ, ಆದರೆ ನನ್ನ ಮಾನಸಿಕ ವ್ಯಕ್ತಿತ್ವದ ಒಂದಂಶ ಅವನಲ್ಲಿದ್ದಿತು" ಎಂದು ಹೇಳಬಹುದು. ಪುನರ್ಜನ್ಮವೊಂದು ತೀರ ಸಂಕೀರ್ಣವಾದ ಸಂಗತಿ, ಸಾಮಾನ್ಯವಾಗಿ ಅತಿ ಜನಪ್ರಿಯವಾದ ನಂಬಿಕೆಯಂತೆ ಅದು ಅಷ್ಟು ಸುಲಭವಾಗಿ, ಯಾಂತ್ರಿಕವಾಗಿ ನಡೆಯುವಂಥ ಸಂಗತಿ ಅಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/548-49**

*

**ಸಾವಿನ ಹಂತದಲ್ಲಿರುವ ಮನುಷ್ಯನ ಕೊನೆಯ ಆಸೆ**

ಸಾಯಲಿರುವ ಮನುಷ್ಯನ ಕೊನೆಯ ಆಸೆ ಸಾಮಾನ್ಯವಾಗಿ ಬಾಹ್ಯ ಸ್ತರಕ್ಕೆ ಸಂಬಂಧಪಟ್ಟಿರುತ್ತದೆ. ಅದು ಅಂತರಾತ್ಮದ ನಿರ್ಧಾರವಾಗಿರಬಹುದು, ಅದರಿಂದ ಮುಂದಿನ ಭವಿಷ್ಯವನ್ನು ರೂಪಿಸಲು ಸಹಾಯವಾಗಲೂಬಹುದು ಆದರೆ ಅದು ಅಂತರಾತ್ಮನ ಆಯ್ಕೆಯನ್ನು ನಿರ್ಧರಿಸುವುದಿಲ್ಲ. ಅದು ಮುಚ್ಚಿದ ಪರದೆಯ ಹಿಂದೆ ರಹಸ್ಯವಾಗಿ ಇರುತ್ತದೆ. ಬಾಹ್ಯ ಪ್ರಜ್ಞೆಯ ಕ್ರಿಯೆಯು ಆಂತರಿಕ ವಿಧಾನವನ್ನು ನಿರ್ಣಯಿಸಲಾರದು. ಬದಲಾಗಿ, ಎಷ್ಟೋ ಸಲ ಅಂತರಂಗದ ಕ್ರಿಯೆಯ ಅಂಶಗಳೇ ಬಾಹ್ಯದಲ್ಲಿ ಪ್ರಕಟವಾಗುವುದುಂಟು. ಉದಾ: ಕೆಲವರು ತಾವು ಹಿಂದಿನ ಜನ್ಮದಲ್ಲಿ ಕೊನೆಯ ಸಾವಿನ ಗಳಿಗೆಯಲ್ಲಿರುವಾಗ ಅನುಭವಿಸಿದುದನ್ನು ಒಂದು ಮಿಂಚಿನಂತೆ ಅಥವಾ ಅದರ ಸ್ಥೂಲ ದೃಶ್ಯವನ್ನು ಕಾಣುತ್ತಾರೆ, ಅದು ಅವರ ಅಂತರಾತ್ಮವು ಹಿಂದಿನ ಜನ್ಮದಿಂದ ಬಿಡುಗಡೆ ಹೊಂದುವುದನ್ನು ಹಿಂತಿರುಗಿ ನೋಡುವುದರ ಪರಿಣಾಮ.

*

## ನಿಷ್ಠುರವಾದ ಯಂತ್ರವಲ್ಲ

ಸಾವಿನ ಸಮಯದಲ್ಲಿ ಅಂತರಾತ್ಮನ ಆಯ್ಕೆಯು ಮುಂದಿನ ಜನ್ಮದ ವ್ಯಕ್ತಿತ್ವವನ್ನು ರಚಿಸುವುದಿಲ್ಲ, ಅದನ್ನು ನಿಗದಿಪಡಿಸುತ್ತದೆ. ಅದು ಅಂತರಾತ್ಮಿಕ ಜಗತ್ತನ್ನು ಪ್ರವೇಶಿಸಿದ ಮೇಲೆ ತನ್ನ ಅನುಭವಗಳನ್ನೆಲ್ಲ ಜೀರ್ಣಿಸಿಕೊಳ್ಳಲು ಆರಂಭಿಸುತ್ತದೆ, ಆ ಜೀರ್ಣಿಸುಕೊಳ್ಳುವಿಕೆಯಿಂದ ಮೊದಲೇ ನಿಗದಿಪಡಿಸಿ–ದ್ದಕ್ಕನುಗುಣವಾಗಿ ಮುಂದಿನ ಜನ್ಮದ ಅಂತರಾತ್ಮಿಕ ವ್ಯಕ್ತಿತ್ವ ನಿರ್ಮಾಣವಾಗುತ್ತದೆ. ಅನುಭವಗಳನ್ನೆಲ್ಲ ಜೀರ್ಣಿಸಿಕೊಳ್ಳುವ ಕ್ರಿಯೆ ಪೂರ್ಣವಾಗಿ ಮುಗಿದ ಮೇಲೆ ಅದು ಹೊಸ ಜನ್ಮಕ್ಕೆ ಸಿದ್ಧವಾಗುತ್ತದೆ. ಆದರೆ ಅಷ್ಟಾಗಿ ಬೆಳದಿರದ ಸತ್ತೆಗಳು ತಮ್ಮಷ್ಟಕ್ಕೆ ತಾವೇ ಎಲ್ಲವನ್ನೂ ತಯಾರು ಮಾಡಿಕೊಳ್ಳುವುದಿಲ್ಲ, ಉನ್ನತ ಲೋಕದ ಸತ್ತೆಗಳು, ಶಕ್ತಿಗಳು ಆ ಕೆಲಸವನ್ನು ಆ ನಿರ್ದಿಷ್ಟ ಸತ್ತೆಗಾಗಿ ಮಾಡುತ್ತವೆ. ಅಷ್ಟೇ ಅಲ್ಲ, ಅದು ಜನ್ಮ ತಳೆಯಲು ಬಂದಾಗ ಈ ಭೌತಿಕ ಜಗದ ಶಕ್ತಿಗಳು ಅದರ ಸಿದ್ಧತೆಯ ಕೆಲಸಕ್ಕೆ ಅಡ್ಡಿಬರುವುದಿಲ್ಲ ಎಂಬ ಬಗ್ಗೆ ಖಚಿತತೆ ಇಲ್ಲ. ಅದರ ಹೊಸ ಉಪಕರಣವು ಅದರ ಉದ್ದೇಶಕ್ಕಾಗಿ ಅವಶ್ಯವಿರುವಷ್ಟು ಸಶಕ್ತವಾಗಿರಲಿಕ್ಕಿಲ್ಲ ಏಕೆಂದರೆ ಅಲ್ಲಿ ಅದರದೇ ಆದ ಸ್ವಂತ ಹಾಗೂ ವಿಶ್ವ ಶಕ್ತಿಗಳ ನಡುವೆ ಪರಸ್ಪರ ಕಾರ್ಯಾನುಸಂಧಾನ ನಡೆಯುತ್ತದೆ. ಅದರಿಂದ ಕೆಲ ಸಲ ನಿರಾಶೆಯಾಗಬಹುದು, ಮಾರ್ಗ ಬದಲಾವಣೆ ಸಂಭವಿಸಬಹುದು, ಅಥವಾ ಅರ್ಧಮರ್ಧ ಕೆಲಸ ಆಗಲೂಬಹುದು. ಅನೇಕ ಸಂಗತಿಗಳು ಘಟಿಸಬಹುದು. ಅದೆಲ್ಲ ತೀರ ನಿಷ್ಠುರವಾದ ಹೀಗೆಯೇ ಆಗಬೇಕೆನ್ನುವ ಯಂತ್ರದಂತಲ್ಲ. ಅನೇಕ ಸಂಕೀರ್ಣ ಶಕ್ತಿಗಳ ಪರಸ್ಪರ ಅನುಸಂಧಾನ ಅದು. ಒಟ್ಟಿನಲ್ಲಿ, ಬೆಳವಣಿಗೆ ಹೊಂದಿರುವ ಅಂತರಾತ್ಮಿಕ ಸತ್ತೆಯು ಈ ಮಧ್ಯಂತರದ ಕಾಲದಲ್ಲಿ ಹೆಚ್ಚು ಪ್ರಜ್ಞಾಯುಕ್ತವಾಗಿದ್ದು ತನ್ನನ್ನು ತಾನೇ ಹೆಚ್ಚಾಗಿ ರೂಪಿಸಿಕೊಳ್ಳುತ್ತದೆ ಎಂದು ಹೇಳಬಹುದು. ಸಮಯದ ಬಗ್ಗೆ ಹೇಳುವುದಾದರೆ ಅದು ಬೆಳವಣಿಗೆ ಹಾಗೂ ಸತ್ತೆಯ ನಿರ್ದಿಷ್ಟ ಲಯದ ಮೇಲೆ ಅವಲಂಬಿಸಿರುತ್ತದೆ. ಕೆಲವರು ತಕ್ಷಣವೇ ಮರುಜನ್ಮ ಪಡೆಯುತ್ತಾರೆ, ಕೆಲವರಿಗೆ ಹೆಚ್ಚು ಸಮಯ ಬೇಕಾಗಬಹುದು, ಕೆಲವರಿಗೆ ಶತಮಾನಗಳು ಬೇಕಾಗಬಹುದು. ಆದರೆ ಇಲ್ಲಿ ಕೂಡ ಅಂತರಾತ್ಮಿಕ ಸತ್ತೆಯು ಒಮ್ಮೆ ಸಾಕಷ್ಟು ಬೆಳವಣಿಗೆ ಹೊಂದಿತೆಂದರೆ, ಅದು ತನ್ನದೇ ಆದ ಲಯವನ್ನು ಹಾಗೂ ಮಧ್ಯಂತರ ಅವಧಿಯನ್ನು ನಿರ್ಧರಿಸಬಲ್ಲದು.

*

**ಕರ್ಮದ ಸಾಮಾನ್ಯ ಸಿದ್ಧಾಂತಗಳು**

ಸಾಮಾನ್ಯ ನಿಯಮಗಳೇನಿವೆಯಲ್ಲ ಅವು ತೀರ ಯಾಂತ್ರಿಕವಾಗಿದೆ. ಪಾಪ ಮತ್ತು ಪುಣ್ಯ ಹಾಗೂ ಮುಂದಿನ ಜನ್ಮದಲ್ಲಿ ಅವು ಫಲ ಕೊಡುತ್ತವೆ ಎಂಬ ಪರಿಕಲ್ಪನೆ ಕೂಡ ಅಷ್ಟೇ. ಹಿಂದಿನ ಜನ್ಮದಲ್ಲಿ ಪ್ರಯೋಜಿಸಿದ ಶಕ್ತಿಗಳು ಪರಿಣಾಮ ಬೀರುತ್ತವೆ ಎಂಬುದೇನೋ ನಿಜ, ಅದು ನಿಶ್ಚಿತ, ಆದರೆ ಶೈಶವೀಯ ರೀತಿಯ ಅಂದರೆ ಸಣ್ಣ ಮಕ್ಕಳ ನಿಯಮದಂತೆ ಅಲ್ಲ. ಒಳ್ಳೆಯ ವ್ಯಕ್ತಿಯೊಬ್ಬನು ಈ ಜನ್ಮದಲ್ಲಿ ಕಷ್ಟಪಡುತ್ತಿದ್ದರೆ, ಸಂಪ್ರದಾಯ ವಾದಿಗಳ ಪ್ರಕಾರ ಅದು ಅವನು ಹಿಂದಿನ ಜನ್ಮದಲ್ಲಿ ದುಷ್ಟನಾಗಿದ್ದಕ್ಕೆ ಸಾಕ್ಷಿ ಎಂದು ಭಾವಿಸಲಾಗುವುದು, ಅದೇ ರೀತಿ ಈಗ ದುಷ್ಟನಾಗಿರುವ ವ್ಯಕ್ತಿ ಸುಖವಾಗಿ ಅಭಿವೃದ್ಧಿ ಹೊಂದುತ್ತಲಿದ್ದರೆ ಹಿಂದಿನ ಜನ್ಮದಲ್ಲಿ ಅವನು ಒಳ್ಳೆಯವನಾಗಿರಬೇಕು, ಒಳ್ಳೆಯ ಕರ್ಮಗಳನ್ನು, ಪುಣ್ಯವನ್ನು ಮಾಡಿರಬೇಕು, ಅಂತಲೇ ಈ ಜನ್ಮದಲ್ಲಿ ಅವನು ಅವುಗಳ ಸಮೃದ್ಧ ಫಲವನ್ನನುಭವಿಸುತ್ತಿದ್ದಾನೆ ಎಂದೂ ಹೇಳಲಾಗುವುದು. ಆದರೆ ಇದು ಅಷ್ಟು ಸರಳವಾದ ಸತ್ಯವಲ್ಲ. ಈ ಜಗತ್ತಿನಲ್ಲಿ ಹುಟ್ಟುವುದರ ಮುಖ್ಯ ಉದ್ದೇಶವೇ ಅನುಭವಗಳ ಮೂಲಕ ಬೆಳೆಯಬೇಕೆಂಬುದಾಗಿರುವುದರಿಂದ ಹಿಂದೆ ಮಾಡಿದ ಕರ್ಮಗಳಿಗೆ ಏನೇ ಪ್ರತಿಫಲ ಬರಲಿ, ಅದು ವ್ಯಕ್ತಿಯು ಹೆಚ್ಚು ಕಲಿಯಲಿ ಹಾಗೂ ಬೆಳೆಯಲಿ ಎಂಬ ಆಶಯವಿರುತ್ತದೆಯೇ ಹೊರತು, ತರಗತಿಯಲ್ಲಿ ಒಳ್ಳೆಯ ಹುಡುಗರಿಗೆ ಚಾಕೋಲೇಟುಗಳನ್ನು ಕೊಡುವುದು ಹಾಗೂ ಕೆಟ್ಟವರಿಗೆ ಛಡಿ ಏಟಿನ ಶಿಕ್ಷೆ ನೀಡುವಷ್ಟು ಸರಳವಾಗಿರುವುದಿಲ್ಲ. ಒಳ್ಳೆಯವರಿಗೆ, ಒಳ್ಳೆಯ ಕೆಲಸಗಳಿಗೆ ಹಾಗೂ ಕೆಟ್ಟ ಕೆಲಸಗಳಿಗೆ ಅದೃಷ್ಟ ಅಥವಾ ಭಾಗ್ಯ ಹಾಗೂ ದುರಾದೃಷ್ಟ ಅಥವಾ ದೌರ್ಭಾಗ್ಯಗಳೇ ದೊರೆಯಬೇಕೆಂದಿಲ್ಲ. ಆದರೆ ಸೌಭಾಗ್ಯವು ಎಲ್ಲ ದುಃಖಗಳಿಗೆ ದೂರಾಗಿರುವ ಹಿರಿದಾದ ಪ್ರಕೃತಿಗೆ ಕರೆದೊಯ್ಯುವುದು ಹಾಗೂ ಕೆಟ್ಟದ್ದು ನಮ್ಮನ್ನು ಇನ್ನೂ ಕೆಳಗಿನ ಸ್ತರಕ್ಕೆ, ಸದಾ ದುಃಖ ಹಾಗೂ ದುಷ್ಟತನದ ನಿಮ್ನ ಪ್ರಕೃತಿಗೆ ಕರೆದೊಯ್ಯುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/532-33**

*

---

*ಅಂತರಾತ್ಮಿಕ ಸತ್ತೆಯು ಸಾವಿನ ಸಮಯದಲ್ಲಿ ತಾನು ಮುಂದಿನ ಜನ್ಮದಲ್ಲಿ ಏನು ಮಾಡಬೇಕೆಂಬುದನ್ನು ಆಯ್ದುಕೊಳ್ಳುತ್ತದೆ ಮತ್ತು ಅದಕ್ಕೆ ತಕ್ಕಂತೆ ಹೊಸ ವ್ಯಕ್ತಿತ್ವದ*

*ಪರಿಸರ ಹಾಗೂ ಗುಣಧರ್ಮಗಳನ್ನು ನಿರ್ಧರಿಸುತ್ತದೆ. ಜೀವನವೆಂಬುದು ವಿಕಾಸದ ಮೂಲಕ ಬೆಳೆಯುವುದಾಗಿದೆ. ಅನುಭವದ ಮೂಲಕ ಅಜ್ಞಾನದಲ್ಲಿ ಬೆಳೆದು ಹಿರಿದಾದ ಬೆಳಕಿನೆಡೆಗೆ ಹೋಗಲು ಸಿದ್ಧನಾಗುವವರೆಗೆ ಬೆಳೆಯುವುದೇ ಆಗಿದೆ.*

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/532 – ಶ್ರೀ ಅರವಿಂದರು**

*

**ಅಂತರಾತ್ಮಿಕ ಸ್ತರದಲ್ಲಿ ಸಮೀಕರಣ**

ಆತ್ಮವು ಶರೀರವನ್ನು ತ್ಯಜಿಸಿದ ನಂತರ ಅನೇಕ ಸ್ತರಗಳಲ್ಲಿ ಪ್ರಯಾಣ ಮಾಡುತ್ತ ಕೊನೆಗೆ ಅಂತರಾತ್ಮಿಕ ಸತ್ತೆಯು ತನ್ನ ತಾತ್ಕಾಲಿಕ ಕೋಶಗಳನ್ನೆಲ್ಲ ನಿಧಾನವಾಗಿ ಕಳಚಿಕೊಳ್ಳುತ್ತ ಅಂತರಾತ್ಮಿಕ ಸ್ತರವನ್ನು ತಲುಪುತ್ತದೆ. ಅಲ್ಲಿ ಅದು ನಿದ್ರೆಯಂಥ ವಿಶ್ರಾಂತಿಗೆ ಜಾರುತ್ತದೆ. ಪುನಃ ದೇಹಧಾರಣ ಮಾಡಲು ಸಿದ್ಧವಾಗುವವರೆಗೆ ಅಲ್ಲಿ ತಂಗುತ್ತದೆ. ಕೊಟ್ಟಕೊನೆಗೆ ಅದು ತನ್ನ ಜೊತೆಗೆ ಯಾವ ಮಾನವೀಯ ಅನುಭವದ ಅಂಶವನ್ನುಳಿಸಿಕೊಳ್ಳುತ್ತದೆಂದರೆ, ತನ್ನ ಜೀವನದಲ್ಲಿ ತಾನೇನೆಲ್ಲ ಅನುಭವ ಪಡೆದಿದೆಯೋ ಅದರ ಸಾರಭಾಗ, ಅದರಲ್ಲಿ ತನ್ನ ಮುಂದಿನ ಬೆಳವಣಿಗೆಗೆ ಉಪಯುಕ್ತವಾಗುವುದೋ ಅಷ್ಟನ್ನು ಮಾತ್ರ. ಇದು ಸಾಮಾನ್ಯ ನಿಯಮ, ಆದರೆ ಇದು ಅಪವಾದದಂಥ ಪ್ರಕರಣಗಳಲ್ಲಿ ಅನ್ವಯಿಸುವುದಿಲ್ಲ. ಅಥವಾ ಸಾಮಾನ್ಯ ಮನುಷ್ಯನ ಮಟ್ಟಕ್ಕಿಂತ ತುಂಬ ಉನ್ನತ ಮಟ್ಟಕ್ಕೆ ಬೆಳದಿರುವ ಹಾಗೂ ಉನ್ನತ ಪ್ರಜ್ಞೆಯನ್ನು ಸಿದ್ಧಿಸಿಕೊಂಡಿರುವ ಆತ್ಮಗಳಿಗೆ ಅನ್ವಯಿಸುವುದಿಲ್ಲ. ಕೆಳಗಿನ ಹಂತದ ಆಕಾರಗಳನ್ನು (ಮುಂದಿನ ಜನ್ಮದಲ್ಲಿ) ಅಂದರೆ ಪಶುಯೋನಿ ಮುಂತಾದವುಗಳನ್ನು ಆತ್ಮವು ಅಂದರೆ ಅಂತರಾತ್ಮವು ತೆಗೆದುಕೊಳ್ಳುವುದಿಲ್ಲ. ಅದಾಗಲೇ ಪ್ರಕಟವಾಗಿರುವ ಸಾಮಾನ್ಯವಾಗಿ ಪ್ರಾಣಿಕದ ಕೆಲಭಾಗ ಅದನ್ನು ತೆಗೆದುಕೊಳ್ಳುತ್ತದೆ. ತನ್ನ ಬಯಕೆ, ಮೋಹ ಅಥವಾ ನಿರ್ದಿಷ್ಟ ಅನುಭವದ ಅವಶ್ಯಕತೆಗಾಗಿ ಆ ರೂಪ ತಾಳುತ್ತದೆ. ಇದು ಸಾಮಾನ್ಯ ಮಾನವನ ಜೊತೆಗೂ ಮೇಲಿಂದ ಮೇಲೆ ಸಂಭವಿಸುತ್ತದೆ.

*

**ಹೊಸ ಜೀವನದ ಸಿದ್ಧತೆ**

ದೇಹವನ್ನು ಬಿಟ್ಟ ನಂತರ, ಬೇರೆ ಬೇರೆ ಸ್ತರಗಳಲ್ಲಿ ನಿರ್ದಿಷ್ಟ ಅನುಭವಗಳನ್ನು ಪಡೆದ ನಂತರ, ತನ್ನ ಮಾನಸಿಕ ಹಾಗೂ ಪ್ರಾಣಿಕ ವ್ಯಕ್ತಿತ್ವವನ್ನು ಕಳಚಿಕೊಂಡು–ಬಿಡುತ್ತದೆ, ಅಲ್ಲಿಂದ ಭೂತಕಾಲದ ಸಾರವನ್ನು ಸಮೀಕರಣಗೊಳಿಸಲು ಹಾಗೂ ಹೊಸ ಜೀವನದ ಸಿದ್ಧತೆ ನಡೆಸಲು ಕೆಲಕಾಲ ವಿಶ್ರಾಂತಿ ತೆಗೆದುಕೊಳ್ಳುತ್ತದೆ. ಈ ಸಿದ್ಧತೆಯೇ ಹೊಸ ಜನ್ಮದ ಪರಿಸ್ಥಿತಿ, ಸನ್ನಿವೇಶಗಳನ್ನು ನಿರ್ಧರಿಸುತ್ತದೆ, ಮತ್ತು ಹೊಸದಾದ ವ್ಯಕ್ತಿತ್ವವನ್ನು ಸಂರಚಿಸುವಲ್ಲಿ ಹಾಗೂ ಅದಕ್ಕಾಗಿ ಸಂಘಟಿಸಬೇಕಾದ ಅವಶ್ಯಕ ಘಟಕಗಳ ಆಯ್ಕೆಯಲ್ಲಿ ಮಾರ್ಗದರ್ಶನ ಮಾಡುತ್ತದೆ.

ಈ ಜಗತ್ತಿನಿಂದ ನಿರ್ಗಮಿಸಿದ ಆತ್ಮವು ಹಿಂದಿನ ಜನ್ಮಗಳ ಅನುಭವದ ನೆನಪನ್ನು ಕೇವಲ ಸಾರರೂಪದಲ್ಲಿ ಮಾತ್ರ ಉಳಿಸಿಕೊಳ್ಳುತ್ತದೆಯೇ ಹೊರತು ಮೂಲ ಆಕಾರ ಹಾಗೂ ವಿವರಗಳ ಸಹಿತ ಅಲ್ಲ. ಆತ್ಮವು ಹಿಂದಿನ ವ್ಯಕ್ತಿತ್ವವನ್ನು ಅಥವಾ ಹಿಂದಿನ ವ್ಯಕ್ತಿತ್ವಗಳನ್ನು ಈಗಿನ ಪ್ರಕಟಣೆಯ ಭಾಗವಾಗಿ ತೆಗೆದುಕೊಂಡು ಬಂದಾಗ ಮಾತ್ರ ಹಿಂದಿನ ಜನ್ಮದ ವಿವರಗಳ ನೆನಪನ್ನು ಉಳಿಸಿಕೊಳ್ಳಬಲ್ಲದು. ಅನ್ಯಥಾ, ಯೋಗ ದೃಷ್ಟಿಯಿಂದ ಮಾತ್ರ ಅಂಥ ನೆನಪು ಬರಲು ಸಾಧ್ಯವಿದೆ. ಕೆಲಸಲ ಮಾತ್ರ ಹಿನ್ನಡೆ ಎನ್ನುವಂಥ ಚಲನೆಗಳು ಕಂಡು ಬರಬಹುದು (ಆತ್ಮದ ವಿಕಾಸದ ಪಥದಲ್ಲಿ), ಆದರೆ ಅವು ಕೇವಲ ಅಂಕುಡೊಂಕು ಅಥವಾ ವಕ್ರರೇಖಾ ಚಲನೆಗಳೇ ಹೊರತು, ನಿಜವಾದ ಹಿನ್ನಡೆಯಲ್ಲ, ಅವಪತನವಲ್ಲ. ಚೆನ್ನಾಗಿ ಮುಂದುವರಿಯಲು ಅಷ್ಟಾಗಿ ಸಿದ್ಧತೆ ಮಾಡಿಕೊಂಡಿಲ್ಲದಿರುವಾಗ ಕೂಡ ಈ ರೀತಿ ಹಿನ್ನಡೆಯಂಥ ಚಲನೆ ತೋರಿಬರುವುದು. ಆತ್ಮವು ಪುನಃ ಪ್ರಾಣಿ–ಪಶು ಸ್ಥಿತಿಗೆ ಮರಳಿ ಹೋಗುವುದಿಲ್ಲ. ಆದರೆ ಪ್ರಾಣಿಕ ವ್ಯಕ್ತಿತ್ವದ ಕೆಲಭಾಗ ಅದರಿಂದ ಕಳಚಿಕೊಂಡು, ಅಲ್ಲಿ ತನ್ನ ಪ್ರಾಣಿಕ ಪ್ರವೃತ್ತಿಯನ್ನು ಸರಿಪಡಿಸಿಕೊಳ್ಳುವ ಕೆಲಸ ಮಾಡುತ್ತದೆ. ಲೋಭಿಯಾದ ವ್ಯಕ್ತಿ ಹಾವಾಗಿ ಹುಟ್ಟುತ್ತಾನೆ ಎಂಬ ನಂಬಿಕೆ ಬಹಳ ಜನರಲ್ಲಿದೆ, ಆದರೆ ಅದರಲ್ಲಿ ಹುರುಳಿಲ್ಲ. ಇವೆಲ್ಲ ಕೇವಲ ಜನಪ್ರಿಯ ರಂಜಕ ಅಂಥ ಶ್ರದ್ಧೆಗಳಷ್ಟೇ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/533-34**

*

## ವಿಶೇಷ ಸಾಮರ್ಥ್ಯಗಳ ಹಾಗೂ ವ್ಯವಸ್ಥಿತ ಘಟಕಗಳು ಮರುಜನ್ಮ ತಾಳುವುದು

*ಈ ಸತ್ತೆಗಳು ತಮ್ಮನ್ನು ಪ್ರಕಟಿಸಿಕೊಳ್ಳಲು ಬಯಸಿದಾಗ ಮರುಜನ್ಮದಲ್ಲಿ ಕೂಡ ಅದೇ ಇಚ್ಛೆ ಮುಂದುವರಿಯಬೇಕೆಂದು ಬಯಸುತ್ತವೆ ಏನು?*

ಇಲ್ಲ. ಒಂದೇ ಅಲ್ಲ. ಸಂಪೂರ್ಣ ಸತ್ತೆಯೇ ಮರುಜನ್ಮ ತಾಳುವುದಿಲ್ಲ. ಭೂಮಿಯ ವಾತಾವರಣದಲ್ಲಿ ಯಾವ ವಿಶೇಷ ಭಾಗ ಅಥವಾ ಘಟಕವು ಉಳಿಯುತ್ತದೆಯೋ, ಭೂಮಿಯ ವಾತಾವರಣವನ್ನು ಬಿಟ್ಟು ಸಂಪೂರ್ಣವಾಗಿ ತೆರಳುವುದಿಲ್ಲವೋ, ತಾನು ಮತ್ತೆ ಭೂಮಿಯ ಮೇಲೆ ಪ್ರಕಟವಾಗಬೇಕೆಂಬ ಇಚ್ಛೆಯಿಂದ ಇಲ್ಲೇ ಉಳಿದುಬಿಡುತ್ತದೆಯೋ ಅದು ಮರುಜನ್ಮ ತಾಳುತ್ತದೆ. ಅಂತರಾತ್ಮಿಕ ಸತ್ತೆಯು ಮರಳಿ ಅಂತರಾತ್ಮಿಕ ಸ್ತರಕ್ಕೆ ಅವಶ್ಯವಾಗಿ ಹೋಗುತ್ತದೆ ಮತ್ತು ಅದೇ ಪುನಃ ಶರೀರಧಾರಣ ಮಾಡಿ ಬರುತ್ತದೆ. ನಾನು ಮೊದಲು ಒಂದು ಸಲ ನಿಮಗೆ ಹೇಳಿದಂತೆ, ಭೌತಿಕ ಶರೀರವನ್ನು ಬಿಡುವ ಮೊದಲು ಅಂತರಾತ್ಮಿಕ ಸತ್ತೆಯು ತನ್ನ ಮುಂದಿನ ಜನ್ಮ ಹೇಗಿರಬೇಕು, ತಾನು ಜನ್ಮ ತಾಳುವ ಪರಿಸರ ಹೇಗಿರಬೇಕು, ತನ್ನ ಉದ್ಯೋಗ ಏನಿರಬೇಕು ಎಂಬುದನ್ನೆಲ್ಲ ಸಾಮಾನ್ಯವಾಗಿ ನಿರ್ಧರಿಸುತ್ತದೆ. ಏಕೆಂದರೆ ಅನುಭವ ತೆಗೆದುಕೊಳ್ಳಲು ಅದಕ್ಕೆ ನಿರ್ದಿಷ್ಟವಾದ ಕ್ಷೇತ್ರ ಬೇಕೇಬೇಕು. ಅಂತೆಯೇ ದೊಡ್ಡ ದೊಡ್ಡ ಸಾಹಿತಿಗಳು, ದೊಡ್ಡ ಸಂಗೀತಕಾರರು ಮುಂದಿನ ಜನ್ಮದಲ್ಲಿ ಹುಚ್ಚರಾಗಿ, ದುರ್ಬಲ ಮನಸ್ಸಿನವರಾಗಿ ಹುಟ್ಟುವುದುಂಟು. ನಿಮಗನಿಸಬಹುದು "ಏನು? ಹೀಗಾಗಲು ಸಾಧ್ಯವಿಲ್ಲ!" ಸಾಮಾನ್ಯವಾಗಿ ಯಾವಾಗಲೂ ಹೀಗೆಯೇ ಆಗುವುದಿಲ್ಲ, ಆದರೆ ಹಾಗಾಗುವ ಸಾಧ್ಯತೆ ಇದೆ. ಆದರೆ ಒಂದು ಪ್ರಕರಣದಲ್ಲಿ ಹೀಗೆ ಸಂಪೂರ್ಣ ವಿರುದ್ಧ ಸ್ಥಿತಿ ಸಂಭವಿಸಿದೆ ಕೂಡ; ಅವನೊಬ್ಬ ವಯೋಲಿನ್ ವಾದಕ, ಆ ಶತಮಾನದ ಅತಿ ಅದ್ಭುತ ಸಂಗೀತಕಾರ. (ಶ್ರೀಮಾತೆ ನೆನಪಿಸಿಕೊಳ್ಳಲು ಯತ್ನಿಸುತ್ತಾರೆ) ಸ್ವಲ್ಪ ತಾಳಿ, ನನಗೆ ಆತನ ಹೆಸರು ಗೊತ್ತಿದೆ ಆದರೆ ನೆನಪಾಗುತ್ತಿಲ್ಲ. ನೆನಪಿಗೇನೋ ಬಂದಂತಾಯಿತು. ಆದರೆ ಸ್ಪಷ್ಟವಾಗಿ ಹೇಳುವಷ್ಟು ನೆನಪಾಗಲೊಲ್ಲದು ಹ್ಞಾ 1... Ysaye ಸಾಯಿ 1 ಆತನೊಬ್ಬ ಬೆಲ್ಜಿಯನ್ ವಯೋಲಿನ್ ವಾದಕ, ನಿಜವಾಗಿ ಅವನೊಬ್ಬ ಅದ್ಭುತ ವಯೋಲಿನ್ ವಾದಕ ಅವನಲ್ಲಿ ಬೀಥೋವೆನ್‌ನ ಆತ್ಮ ಇಳಿದು ಬಂದಿತ್ತು. ಅವನ ಸಂಪೂರ್ಣ ಅಂತರಾತ್ಮಿಕ ಸತ್ತೆಯೇ ಯಾಸೀನಲ್ಲಿ ಇಳಿದು ಬಂದಿತ್ತು ಅಂತಲ್ಲ, ಆದರೆ ಅವನ ಸಂಗೀತದ ಶಕ್ತಿ ಮಾತ್ರ ನಿಶ್ಚಿತವಾಗಿ

ಇಳಿದು ಬಂದಿತ್ತು. ಅವನ ಹೋಲಿಕೆ ಕೂಡ ಇತ್ತು, ಬಿಥೋವನ್ ತಲೆಯ ಹಾಗೆಯೇ ಇತ್ತು. ನಾನು ಅವನನ್ನು ನೋಡಿದ್ದೇನೆ, ಅವನ ಸಂಗೀತ ಕೇಳಿದ್ದೇನೆ. (ನನಗೆ ಅವನ ಬಗ್ಗೆ ಗೊತ್ತಿರಲಿಲ್ಲ, ಏನೂ ಗೊತ್ತಿರಲಿಲ್ಲ, ಅದೊಂದು ಸಂಗೀತ ಸಮಾವೇಶ ಪ್ಯಾರಿಸ್‌ನಲ್ಲಿ, ಅವರೆಲ್ಲ ಸೇರಿ D ಮೇಜರ್‌ನಲ್ಲಿ ಕಾರ್ಯಕ್ರಮ ನೀಡುತ್ತಿದ್ದರು) ಅವನು ವೇದಿಕೆಯ ಮೇಲೆ ಬರುವುದನ್ನು ನೊಡುತ್ತಲೇ ನಾನು ಉದ್ಗರಿಸಿದೆ "ವಿಚಿತ್ರ. ಈ ವ್ಯಕ್ತಿ ಬಿಥೋವನ್‌ನಂತೆಯೇ ಕಾಣಿಸುತ್ತಾನಲ್ಲ! ಅವನು ಬಿಥೋವನ್‌ನಂತೆಯೇ ಇದ್ದಾನೆ" ಆಮೇಲೆ ಕಾರ್ಯಕ್ರಮ ಆರಂಭವಾಯಿತು, ಅವನು ಸ್ವರ ನುಡಿಸಿದ, ಮೂರು ನಾಲ್ಕು ಸ್ವರ ಅಷ್ಟೇ... ಎಲ್ಲವೂ ಬದಲಾವಣೆಯಾಯಿತು, ಇಡೀ ವಾತಾವರಣವೇ ಬಯಲಾಗಿ ಹೋಯಿತು. ಎಲ್ಲವೂ ಅದ್ಭುತವಾಗಿ ತೋರತೊಡಗಿತು. ಮೂರು ಸ್ವರ ಪ್ರಸ್ತಾರ, ಎಷ್ಟು ಶಕ್ತಿಶಾಲಿಯಾಗಿತ್ತೆಂದರೆ, ಎಷ್ಟು ವೈಭವಪೂರ್ಣ ಮತ್ತು ಅದ್ಭುತವಾಗಿತ್ತೆಂದರೆ, ಎಲ್ಲವೂ ಸ್ತಬ್ಧವಾಗಿತ್ತು, ಎಲ್ಲರೂ ಕೇಳುತ್ತಿದ್ದರು, ಅವನು ಮೊದಲಿನಿಂದ ಕೊನೆಯವರೆಗೆ ಅತಿ ಅನನ್ಯವಾದ ರೀತಿಯಲ್ಲಿ, ಒಂದು ವಿಧವಾದ ತಿಳುವಳಿಕೆಯೊಂದಿಗೆ ಸಂಗೀತ ನುಡಿಸಿದ. ಅಷ್ಟು ಸುಂದರವಾಗಿ ನುಡಿಸುವವನನ್ನು ನಾನು ಇದುವರೆಗೂ ಕಂಡಿಲ್ಲ. ನನಗಾಗ ತಿಳಿಯಿತು ಬಿಥೊವನ್‌ನ ಸಂಗೀತ ಪ್ರತಿಭೆ ಈ ವ್ಯಕ್ತಿಯಲ್ಲಿ ಸೇರಿಕೊಂಡಿತ್ತೆಂದು. ಬಿಥೋವೆನ್‌ನ ಅಂತರಾತ್ಮವು ಯಾವ ಶರೀರದಲ್ಲಿ ಜನ್ಮ ತಾಳಿತ್ತೋ? ಚಮ್ಮಾರನಲ್ಲೋ... ಅಥವಾ ಇನ್ನಾರಲ್ಲೋ, ಯಾರಿಗೆ ಗೊತ್ತು. ಅದಕ್ಕೆ ಬೇರೊಂದು ರೀತಿಯ ಅನುಭವ ಬೇಕಾಗಿತ್ತು. ನಾನು ಈ ವ್ಯಕ್ತಿಯಲ್ಲಿ ನೋಡಿದ್ದು ಭೂಸ್ತರಕ್ಕೆ ಸಂಬಂಧಿಸಿದ ವ್ಯಕ್ತಿತ್ವದ ರಚನೆಯನ್ನು, ಅದು ಮನೋ–ಪ್ರಾಣಿಕ ಸತ್ತೆ; ಬಿಥೋವನ್ ತನ್ನ ಇಡೀ ಮಾನಸಿಕ, ಪ್ರಾಣಿಕ ಹಾಗೂ ಭೌತಿಕ ಸತ್ತೆಯನ್ನು ತನ್ನ ಸಂಗೀತ ಸಾಮರ್ಥ್ಯದ ಸುತ್ತಲೇ ಬೆಳೆಸಿದ್ದ, ಅದೊಂದು ನಿರ್ದಿಷ್ಟ ರೂಪ ತಾಳಿ ಉಳಿದುಕೊಂಡಿತ್ತು, ಅದು ಜೀವಂತ ರೂಪದಲ್ಲಿತ್ತು, ಅದೇ ಈ ವ್ಯಕ್ತಿಯಲ್ಲಿ ಶರೀರಧಾರಣ ಮಾಡಿತ್ತು. ಅದು ಬಿಥೋವನ್‌ನ ಅಂತರಾತ್ಮ ಅಲ್ಲ. ಆದರೆ ಈ ಸಂಗೀತ ಸಾಮರ್ಥ್ಯದ ಜೀವಂತರೂಪ ಅದು. ತನ್ನ ಹಿಂದಿನ ಜನ್ಮದಲ್ಲಿ ಅಂದರೆ ಅವನು ಬಿಥೋವ್‌ನ್ ಆಗಿದ್ದಾಗ ತನ್ನೆಲ್ಲ ಸತ್ತೆಗಳನ್ನು ಆ ರೀತಿ ರೂಪಿಸಿದ್ದ, ಅವನ ಅಂತರಾತ್ಮಿಕ ಸತ್ತೆಯು ಉಳಿದೆಲ್ಲ ಸತ್ತೆಗಳನ್ನು ಹಾಗೆ ಸಂಗೀತ ಸೃಷ್ಟಿಯ

ಸುತ್ತ ವ್ಯವಸ್ಥಿತಗೊಳಿಸಿತ್ತು. ಆದರೆ ಅವನ ದೇಹಾವಸಾನದ ನಂತರ, ಅವನ ಅಂತರಾತ್ಮಿಕ ಸತ್ತೆ ಅಲ್ಲೇ ಉಳಿಯಿತೆಂದು ಹೇಳಲಾಗದು. ಸಾಮಾನ್ಯ ನಿಯಮದಂತೆ ಅದು ಅಂತರಾತ್ಮಿಕ ಸತ್ತೆಯ ಸ್ತರಕ್ಕೆ ತಿರುಗಿ ಹೋಗಿರಬೇಕು. ಆದರೆ ಯಾವುದು ಸಂಗೀತದ ರೂಪ ತಾಳಿತ್ತೋ ಅದಕ್ಕೂ ತನ್ನದೇ ಆದ ಬದುಕು, ಅದು ಸ್ವತಂತ್ರವಾಗಿ ತನ್ನೊಳಗೇ ಉಳಿದುಕೊಂಡಿತ್ತು. ಅದೊಂದು ನಿಶ್ಚಿತ ಉದ್ದೇಶಕ್ಕಾಗಿ ಪ್ರಕಟವಾಗಿತ್ತು, ಅಂತೆಯೇ ತನ್ನ ಪ್ರಕಟಣೆಯನ್ನು ಅದನ್ನು ಉಳಿಸಿಕೊಂಡಿತ್ತು. ತನಗೆ ಯೋಗ್ಯವಾದ ಉಪಕರಣ ಅಂದರೆ ಅಭಿವ್ಯಕ್ತಿ ಸಾಧನ ದೊರೆತ ತಕ್ಷಣ ಅದರಲ್ಲಿ ಪ್ರವೇಶ ಪಡೆದು ಪ್ರಕಟವಾಗಿತ್ತು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/262-63**

*

**ನವಜನ್ಮ ಮತ್ತು ಗತಜನ್ಮದ ಸ್ಮೃತಿಗಳ ಸಂಗತಿಗಳು**

ಸಾಮಾನ್ಯವಾಗಿ ಎಲ್ಲರೂ ನವಜನ್ಮ ಎಂದು ಹೇಳುವ ಸಂಗತಿಯ ಹಿಂದಿರುವ ಸಮಸ್ಯೆಯನ್ನು ಸರಿಯಾಗಿ ತಿಳಿದುಕೊಳ್ಳಬೇಕಾದರೆ, ಎರಡು ವಿಶೇಷ ಅಂಶಗಳನ್ನು ನಾವು ಗಮನಿಸಬೇಕಾಗುತ್ತದೆ. ಮೊದಲನೆಯದು, ದೈವೀ ಪ್ರಜ್ಞೆಯು ತನ್ನದೇ ಅದ ದಾರಿಯಲ್ಲಿ ಸಾಗಿ, ಮೇಲಿನಿಂದ ಕೆಳಗೆ ಇಳಿದು ಬಂದು ಪ್ರಕಟವಾಗಲು ಬಯಸುತ್ತದೆ ಹಾಗೂ ವಿಶ್ವವು ಅದರ ಪ್ರಕಟಣೆಯ ಕ್ಷೇತ್ರವಾಗಿದ್ದು ಈ ಪ್ರಕ್ರಿಯೆಯಲ್ಲಿ ಅದು ನಿಶ್ಚಿತವಾದ ರಚನಾಕ್ರಮವೊಂದನ್ನು ಅನುಸರಿಸುತ್ತದೆ. ಎರಡನೆಯದಾಗಿ, ಚೈತ್ಯಪ್ರಜ್ಞೆಯು ಕೆಳಗಿನಿಂದ ಮೇಲಕ್ಕೇರುವಂಥದು, ಅದು ಪರಮಾತ್ಮ ತತ್ವದ ಬೀಜವಾಗಿದ್ದು ಕಾಲಾನುಕ್ರಮದಲ್ಲಿ ಬೆಳೆಯುತ್ತಾ ಮೇಲಿನ ದಿವ್ಯಶಕ್ತಿಯ ಜೊತೆ ಸಂಯೋಗ ಸಾಧಿಸಿ ಅತಿಮಾನಸ ಸತ್ಯದ ಪಡಿಯಚ್ಚನ್ನು ಪಡೆಯುತ್ತದೆ. ಈ ಚೈತ್ಯಪ್ರಜ್ಞೆಯು ಮಾನವನಲ್ಲಿರುವ ಆಂತರಿಕ ಸತ್ತೆಯಾಗಿದ್ದು ಇದರ ಮೂಲಕವೇ ಅವನ ನಿಜವಾದ ಆತ್ಮ ಅಥವಾ ಜೀವದ ಮರುವಿನ್ಯಾಸ ಸಾಧ್ಯವಾಗುವುದು. ಅದರ ತೀವ್ರವಾದ ಅಭೀಪ್ಸೆಯ ಫಲವಾಗಿಯೇ ಅತಿಮಾನಸವು ಕೆಳಗಿಳಿದು ಬಂದು ಅದಕ್ಕೊಂದು ಗಟ್ಟಿಯಾದ ವ್ಯಕ್ತಿತ್ವವನ್ನು ರೂಪಿಸುವುದು. ಮಾನವನ ಬಾಹ್ಯ ಸತ್ತೆಯು ನಾಶ ಹೊಂದುವಂಥದಾಗಿದ್ದು ವಿಶ್ವದಲ್ಲಿನ ದ್ರವ್ಯದಿಂದ – ಮಾನಸಿಕ, ಪ್ರಾಣಿಕ ಮತ್ತು ಭೌತಿಕ ದ್ರವ್ಯಗಳಿಂದ –

ಅನೇಕ ಶಕ್ತಿಗಳ ಪರಸ್ಪರ ಅನುಸಂಧಾನದಿಂದ ಅತಿ ಸಂಕೀರ್ಣವಾದುದ್ದಾಗಿದೆ. ಅಂತರಾತ್ಮವು ಜೀವನದ ವಿವಿಧ ಅನುಭವಗಳ ಸಾರವನ್ನು ಜೀರ್ಣಸಿಕೊಳ್ಳುತ್ತದೆ. ಆದರೆ ಅವುಗಳ ಜೊತೆ ಸದಾ ಸಂಪರ್ಕದಲ್ಲಿಲ್ಲದಿರುವುದರಿಂದ, ಹಿಂದಿನ ಎಲ್ಲಾ ಜೀವನಗಳಿಗೂ ತಾನೇ ನೇಪಥ್ಯದಲ್ಲಿದ್ದರೂ ಕೂಡ ಎಲ್ಲ ಘಟಾನಾವಳಿಗಳ ಸಂಪೂರ್ಣ ನೆನಪು ಉಳಿಸಿಕೊಳ್ಳುವುದಿಲ್ಲ. ಆದ್ದರಿಂದ ಕೇವಲ ಅಂತರಾತ್ಮದ ಜೊತೆಗಿನ ಸಂಪರ್ಕದಿಂದ ಹಿಂದಿನ ಎಲ್ಲಾ ಜೀವನಗಳನ್ನು ನೆನಪಿಸಿಕೊಳ್ಳುವುದು ಸಾಧ್ಯವಿಲ್ಲ. ಸಾಮಾನ್ಯವಾಗಿ ಇಂಥ ಗತ ಜೀವನದ ಸ್ಮೃತಿಯ ಕಾರ್ಯಕ್ರಮಗಳ ಹೆಸರಿನಲ್ಲಿ ಏನಾಗುವುದೆಂದರೆ, ಉದ್ದೇಶಪೂರ್ವಕವಾದ ಮೋಸ ಅಥವಾ ಅಂತರಂಗದಲ್ಲಿಂದ ದೊರೆತ ಕೆಲ ಪ್ರಬಲ ಸೆಳೆತಗಳ ಸುಳಿವುಗಳಿಂದ ಕೃತ್ರಿಮವಾಗಿ ರೂಪಿಸಿದ ಕಲ್ಪನೆಗಳಾಗಿರುತ್ತವೆ. ಅನೇಕ ಜನರು ತಮ್ಮ ಹಿಂದಿನ ಜನ್ಮಗಳಲ್ಲಿ ತಾವು ಪ್ರಾಣಿಗಳಾಗಿರುವ ಬಗ್ಗೆ ಹೇಳಿಕೊಳ್ಳುವುದುಂಟು, ತಾವು ಇಂಥಿಂಥ ಮಂಗಗಳಾಗಿ ಜಗತ್ತಿನ ಇಂಥಿಂಥ ಭಾಗಗಳಲ್ಲಿ ಇದ್ದುದಾಗಿ ಹೇಳಿಕೊಳ್ಳುತ್ತಾರೆ. ಆದರೆ ಸತ್ಯವೇನೆಂದರೆ ಮಂಗಗಳಿಗೆ ಅಂತರಾತ್ಮಿಕ ಸತ್ತೆಯ ಜೊತೆ ಸಂಪರ್ಕ ಇರುವುದಿಲ್ಲ. ಮತ್ತು ಅದರಿಂದಾಗಿ ತನ್ನ ಅನುಭವದ ಒಂದಂಶವನ್ನೂ ಸಹ ಅದು ನೆನಪಿಸಿಕೊಳ್ಳಲಾರರು. ಅವನ ಮಂಗನ ಸ್ವಭಾವದ ಬಾಹ್ಯ ಪ್ರಕೃತಿಯ ಪ್ರಭಾವಗಳು ಅದರ ಪ್ರಾಣಮಯ ಶರೀರದ ಜೊತೆಗೆ ನಾಶವಾಗಿ ಬಿಡುತ್ತದೆ. ಆದರೆ ಅಂಥ ಜ್ಞಾನ ತಮಗಿದೆ ಎಂದು ಹೇಳಿಕೊಳ್ಳುವುದು ಕೇವಲ ವಂಚನೆ, ಮೋಸ. ವಾಸ್ತವಿಕ ಸಂಗತಿಗಳ ಅರಿವಿಲ್ಲದಿರುವುದರಿಂದ ಇತರರನ್ನು ತಪ್ಪುದಾರಿಗೆಳೆಯುವ ಪ್ರಯತ್ನ ಅದು. ಮಾನವೀಯ ಜನ್ಮಗಳಿಗೆ ಸಂಬಂಧಪಟ್ಟಂತೆ ಕೂಡ ಅಂತರಾತ್ಮನು ಮುಂದೆ ಬಂದು ನಿಂತಿದ್ದರೆ ಮಾತ್ರ ಖಚಿತ ಸ್ಮೃತಿಗಳನ್ನು ಮುಂದಕ್ಕೊಯ್ಯಲು ಸಾಧ್ಯ. ಅದು ಬಾಹ್ಯ ಸತ್ತೆಯ ಜೊತೆ ನಿರಂತರ ಸಂಪರ್ಕದಲ್ಲಿ ಇರದ ಹೊರತು ಗತ ಜೀವನದ ಎಲ್ಲ ವಿವರಗಳನ್ನು ನೆನಪಿಸಿಕೊಳ್ಳುವುದು ಸಾಧ್ಯವಿಲ್ಲ. ಏಕೆಂದರೆ ಭೌತಿಕ ಪ್ರಾಣ ಎರಡು ಜೀವಿಯ ಸಾವಿನೊಂದಿಗೆ ನಾಶವಾಗುತ್ತವೆ. ಅದೆಲ್ಲ ವಿಘಟನೆ ಹೊಂದಿ ವಿಶ್ವ–ಪ್ರಕೃತಿಯಲ್ಲಿ ಸೇರಿ ಹೋಗಿಬಿಡುತ್ತವೆ ಹೀಗಾಗಿ ಅನುಭವಗಳ ಒಂದಂಶ ಕೂಡ ಉಳಿಯುವುದಿಲ್ಲ. ಅವೆಲ್ಲ ಅಂತರಾತ್ಮಿಕ ಸತ್ತೆಯ ಜೊತೆ ಒಂದಾಗುವವರೆಗೆ ಪ್ರಜ್ಞೆ ಒಂದೇ ಇದ್ದರೂ ಕೂಡ ಅದರಲ್ಲಿ ಎರಡು ಭಾಗಗಳಾಗಿರುತ್ತವೆ. ಇಡೀ

ಪ್ರಕೃತಿಯು ಕೇಂದ್ರ ದೈವೀ ಸಂಕಲ್ಪದ ಸುತ್ತ ಒಟ್ಟುಗೂಡಿದ್ದು ಈ ಕೇಂದ್ರ ಸತ್ತೆಯು ಮೇಲಿರುವ ದಿವ್ಯ ಪ್ರಜ್ಞೆಯು ಸೂತ್ರದ ಜೊತೆಗೆ ಸಂಬದ್ಧವಾಗಿರುತ್ತದೆ –– ಇದಾಗುವ ಮೊದಲು ಆಯಾ ಪ್ರಜ್ಞೆಗೆ ಸಂಬಂಧಿಸಿದ ಜ್ಞಾನವನ್ನು ಪಡೆದುಕೊಳ್ಳಬಹುದು ಹಾಗೂ ಎಲ್ಲಾ ಗತ ಜೀವನಗಳ ಅರಿವನ್ನು ಪಡೆಯಬಹುದು. ಇದು ಸಾಧ್ಯಾವಾಗದ ಹೊರತು ವ್ಯಕ್ತಿಯ ಹಿಂದಿನ ಜನ್ಮಗಳು ಹಾಗೂ ವಿವಿಧ ಘಟನೆಗಳ ಬಗ್ಗೆ ಮಾತನಾಡುವುದು ನಿರರ್ಥಕ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/148-49**

*

**ಹಲವು ಶರೀರಗಳಲ್ಲಿ ಒಂದೇ ಆತ್ಮ**

ಅಂತರಾತ್ಮಿಕ ಸತ್ತೆಯು ವಿಕಾಸದ ಫಲವಾಗಿದೆ, ಅಂದರೆ ದೈವೀ ಪ್ರಜ್ಞೆಯು ಭೌತಿಕದಲ್ಲಿ ಹರಡಿ, ಅಲ್ಲಿಂದ ನಿಧಾನವಾಗಿ ಭೌತಿಕವನ್ನು ಮೇಲಕ್ಕೆತ್ತಿ ಪರಮಾತ್ಮನೆಡೆಗೆ ಕರೆದೊಯ್ಯುವ ಹಂತ ಹಂತದ ವಿಕಾಸದ ಕ್ರಮದಲ್ಲಿ ಮೂಡಿಬಂದಿದೆ. ಅಂತರಾತ್ಮಿಕ ಸತ್ತೆಯು ಈ ದೈವೀ ಕೇಂದ್ರದ ಮೂಲಕ ಜನ್ಮಜನ್ಮಾಂತರಗಳಲ್ಲಿ ರಚನೆಯಾಗುತ್ತ, ರೂಪಗೊಳ್ಳುತ್ತ ಬಂದಿದೆ. ಒಂದಿಲ್ಲ ಒಂದು ದಿನ ಅದು ಪರಿಪೂರ್ಣತೆಯ ಹಂತವನ್ನು ತಲುಪುತ್ತದೆ, ಬೆಳವಣಿಗೆಯ ಹಾಗೂ ಸಂರಚನೆಯ ದೃಷ್ಟಿಯಿಂದ ಪರಿಪೂರ್ಣವಾಗುತ್ತದೆ. ಅಂತರಾತ್ಮಿಕ ಸತ್ತೆಗೆ ಸಾಕ್ಷಾತ್ಕಾರದ ತೀವ್ರ ಅಭೀಪ್ಸೆ, ಪರಮಾತ್ಮನನ್ನು ಹೆಚ್ಚು ಹೆಚ್ಚಾಗಿ ಪ್ರಕಟಪಡಿಸಲು ಹೆಚ್ಚು ಹೆಚ್ಚು ಪರಿಪೂರ್ಣತೆ ಬೇಕೆಂಬ ಪ್ರಬಲ ಇಚ್ಛೆ ಇರುವುದರಿಂದ ಅದು ಅಂತರ್ನಿಮಜ್ಜನ ಕ್ರಿಯೆಯ ಮೂಲಕ ಅಂತರಂಗದಲ್ಲಿ ಹುದುಗಿರುವ "ಸತ್ತೆ"ಯನ್ನು ತನ್ನೆಡೆಗೆ ಆಕರ್ಷಿಸುತ್ತದೆ. ಅಂದರೆ ಶ್ರೀ ಅರವಿಂದರು ಹೇಳುವ "ಅಧಿಮಾನಸ" ಸ್ತರದಿಂದ ಅಂಥ ಸತ್ತೆಯನ್ನು ಕರೆ ತರುತ್ತದೆ. ಆ ಅಧಿಮಾನಸದ ಸತ್ತೆಯು ಈ ಅಂತರಾತ್ಮಿಕ ಸತ್ತೆಯಲ್ಲಿ ಅವತೀರ್ಣಗೊಳ್ಳುತ್ತದೆ. ಜನರು ದೇವತೆಗಳೆಂದು ಕರೆಯುತ್ತಾರಲ್ಲ ಅಂಥ ಅಧಿಮಾನಸ ಲೋಕದ ಸತ್ತೆ ಅದಾಗಿರಬಹುದು. ಯಾವಾಗ ಈ ತೆರನಾದ ಸಮ್ಮಿಳನ ಕ್ರಿಯೆ ಅಂತರಾತ್ಮಿಕ ಸತ್ತೆಯಲ್ಲಿ ನಡೆಯುತ್ತದೆಯೋ ಆಗ ಅದು ದೊಡ್ಡದಾಗಿ ಬೆಳೆಯುತ್ತದೆ, ಹಾಗೂ ತನ್ನೊಳಗೆ ಯಾವ ಸತ್ತೆಯು ಅವತೀರ್ಣವಾಗಿದೆಯೋ ಅದರ ಸ್ವಭಾವ, ಗುಣ

ಧರ್ಮಗಳಲ್ಲಿ ಭಾಗಿಯಾಗುತ್ತದೆ. ಆಗ ಅದು ತನ್ನ ಮೂಲಕ ಬೇರೆ ಸತ್ತೆಯ ರೂಪಗಳನ್ನು ಹೊರಹೊಮ್ಮಿಸಲು ಶಕ್ತವಾಗುತ್ತದೆ. ಈ ಸತ್ತೆಗಳು ತಮ್ಮ ಮೂಲಕ ಬೇರೆ ಬೇರೆ ಸತ್ತೆಯ ರೂಪಗಳನ್ನು ಹೊಮ್ಮಿಸಲು ಸಾಧ್ಯವಿದ್ದು, ತಮ್ಮದೇ ಆದ ಭಾಗವನ್ನೇ ಬೇರೊಂದರಲ್ಲಿ ಪ್ರತಿಫಲಿಸುತ್ತವೆ, ಬಿತ್ತುತ್ತವೆ, ಆ ಭಾಗಗಳೇ ಮುಂದೆ ಸ್ವತಂತ್ರವಾಗಿ ತಮ್ಮನ್ನೇ ಪ್ರಕಟಪಡಿಸಿಕೊಳ್ಳುತ್ತ ಹೋಗುತ್ತವೆ. ಹಾಗಾಗಿ ಕೇವಲ ಎರಡಲ್ಲ, ಮೂರು, ನಾಲ್ಕು ಐದು ಹೀಗೆ ಅನೇಕ ಪ್ರಕಟಣೆಗಳಾಗಬಹುದು. ಇದು ಹೀಗೆ ಅಂತಲ್ಲ, ಹೀಗೂ ಆಗಬಹುದು ಅಂತ ಅಷ್ಟೇ. ಅಂದರೆ ಒಂದೇ ಮೂಲ, ಅಂತರಾತ್ಮಿಕ–ದೈವಿಕತೆ ಎಂದು ಹೇಳಬಹುದು. ಈ ರೀತಿ ಅನೇಕ ಪ್ರಕಟಣೆಗಳು ಆದಾಗ ಸಾಮಾನ್ಯವಾಗಿ ಆ ಬೇರೆ ಬೇರೆ ವ್ಯಕ್ತಿಗಳಿಗೆ ತಾವೆಲ್ಲ ಒಂದೇ ಸತ್ತೆ ಎಂಬ ಅನುಭವವಾಗುವುದುಂಟು. ಮತ್ತು ಅದು ನಿಜ ಕೂಡ, ಏಕೆಂದರೆ ಅವರೆಲ್ಲರೂ ಒಂದೇ ದೇವತಾ ಸ್ವರೂಪ ಹೊಂದಿರುತ್ತಾರೆ. ಅದು ಹೇಗೆಂದರೆ, ದೇವತೆಯ ಒಂದು ಭಾಗವು ಆದರಿಂದಲೇ ಹೊರಬಂದು, ಬೇರೊಂದು ಜೀವಿಯಲ್ಲಿ/ ಸತ್ತೆಯಲ್ಲಿ ಸ್ವತಂತ್ರವಾಗಿ ತಾನಾಗಿ ಇದ್ದುಬಿಡುತ್ತದೆ. ಇದನ್ನು ಆತ್ಮ–ಪ್ರತಿರೂಪ ಎಂದು ಕರೆಯಲಾಗದು, ಬದಲಾಗಿ ಇದು ಒಂದು ರೀತಿಯ ಆತ್ಮ–ವಿಸ್ತರಣ ಎಂದು ಹೇಳಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/263-64**

*

**ಗತಜನ್ಮದ ಮರೆವು**

ಆತ್ಮವು ಮರುಜನ್ಮ ತಳೆದಾಗ ಹಿಂದಿನ ಜನ್ಮದ ಎಲ್ಲ ನೆನಪೂ ಅಳಿಸಿ ಹೋಗಬೇಕೆಂಬ ನಿಯಮವೇನಿಲ್ಲ. ಅವು ವಿಶೇಷವಾಗಿ ಬಾಲ್ಯದಲ್ಲಿ, ಗತ ಜನ್ಮದ ಅನೇಕ ಇರುವ ಸಾಧ್ಯತೆ ಇದೆ ಮತ್ತು ವೈವಿಧ್ಯಮಯವಾಗಿರುವುದರ ಜೊತೆಗೆ ಪ್ರಬಲವಾಗಿಯೂ ಇರಬಹುದು. ಆದರೆ ವ್ಯಾವಹಾರಿಕ ಶಿಕ್ಷಣ ಹಾಗೂ ಸಂದರ್ಭ ಸನ್ನಿವೇಶಗಳ ಪ್ರಬಲ ಪ್ರಭಾವಗಳು, ಅನೇಕ ಸಲ, ಯಾವಾಗಲೂ ಅಂತಲ್ಲ, ಆದರೆ ಬಹಳ ಸಲ, ಆ ನೆನಪುಗಳ ನಿಜವಾದ ಗುಣ ಧರ್ಮವನ್ನು ತಿಳಿದುಕೊಳ್ಳಲು ಅಡ್ಡಿಯಾಗುತ್ತವೆ. ನೀವು ಅನೇಕ ಜನಗಳನ್ನು ಕಾಣಬಹುದು, ಅವರಿಗೆ ಅತಿ ಖಚಿತವಾದ ಗತ ಜನ್ಮದ ಸ್ಮೃತಿ ಇರುತ್ತದೆ. ಆದರೆ ಶಿಕ್ಷಣ ಮತ್ತು

ವಾತಾವರಣ ಅದನ್ನು ಪ್ರೋತ್ಸಾಹಿಸುವುದಿಲ್ಲ, ಹೀಗಾಗಿ ಅದು ಉಳಿಯುವುದಿಲ್ಲ, ಬೆಳೆಯುವುದಿಲ್ಲ. ಅನೇಕ ಪ್ರಕರಣಗಳಲ್ಲಿ ಅವು ಮೂಲೋತ್ಪಾಟಿತವಾಗಿ ಬಿಡುತ್ತವೆ. ಇದೇ ಸಂದರ್ಭದಲ್ಲಿ ಒಂದು ಮುಖ್ಯವಾದ ಸಂಗತಿಯೊಂದನ್ನು ನಾವು ಗಮನಿಸಬೇಕು, ಅಂತರಾತ್ಮಿಕ ಸತ್ತೆಯು ತನ್ನ ಜೊತೆ ಏನೆಲ್ಲ (ನೆನಪುಗಳನ್ನು) ಒಯ್ಯುತ್ತದೆಯೋ ಮತ್ತು ಮರಳಿ ತರುತ್ತದೆಯೋ ಅದು ಸಾಮಾನ್ಯವಾಗಿ ಸಾರ ರೂಪದಲ್ಲಿ, ತಿರುಳಿನ ರೂಪದಲ್ಲಿರುತ್ತದೆ, ಗತ ಜೀವನಗಳಲ್ಲಿನ ಅನುಭವಗಳ ಪರಿಣಾಮದ ರೂಪದಲ್ಲಿರುತ್ತದೆಯೇ ಹೊರತು ಸಂಪೂರ್ಣ ವಿವರಗಳು ಅಲ್ಲಿರುವುದಿಲ್ಲ, ಈ ಜೀವನದಲ್ಲಿನ ಸ್ಮೃತಿ ಯಾವ ರೂಪದಲ್ಲಿರುತ್ತದೋ ಅಷ್ಟು ಹರಿತವಾದ ಸ್ಮೃತಿ ಹಿಂದಿನ ಜನ್ಮಗಳ ಘಟನೆಗಳ ಬಗೆಗೂ ಇರುತ್ತದೆ ಎಂದು ನಿರೀಕ್ಷಿಸಬಾರದು.

ಆತ್ಮವು ನೇರವಾಗಿ ಅಂತರಾತ್ಮಿಕ ಸ್ತರಕ್ಕೆ ಹೋಗಬಹುದು ಆದರೆ ದೇಹಾವಸಾನದ ಸಮಯದಲ್ಲಿ ಪ್ರಜ್ಞೆಯ ಸ್ಥಿತಿ ಯಾವ ರೀತಿ ಇರುತ್ತದೆಯೋ ಅದರ ಮೇಲೆ ಇದೆಲ್ಲ ಅವಲಂಬಿಸಿದೆ. ಅಂತರಾತ್ಮ ಮುಂಭಾಗದಲ್ಲೇ ಇದ್ದರೆ ತಕ್ಷಣ ಮರುಜನ್ಮ ಸಾಧ್ಯವಿದೆ. ಇದು ಮನಸ್ಸು, ಪ್ರಾಣ ಮತ್ತು ಅಂತರಾತ್ಮಿಕ ಅಮರತ್ವದ ಸಿದ್ಧಿಯ ಮೇಲೆ ನಿರ್ಭರಕವಾಗಿಲ್ಲ – ಯಾರಿಗೆ ಇದು ಸಾಧ್ಯವಾಗಿದೆಯೋ ಅಂಥವರಿಗೆ ಬೇರೆ ಬೇರೆ ಸ್ತರಗಳಲ್ಲಿ ಹೋಗುವ, ವಿಹರಿಸುವ ಸಾಮರ್ಥ್ಯ ಇರುತ್ತದೆ, ಅಷ್ಟೇ ಅಲ್ಲ ಭೌತಿಕ ಸ್ತರದ ನಿಯಮಗಳಿಂದ ಬದ್ಧರಾಗದೇ ಭೌತಿಕದ ಮೇಲೆ ಕೆಲಸ ಮಾಡುವ ಶಕ್ತಿ ಅವರಿಗೆ ಇರುತ್ತದೆ. ಒಟ್ಟಾರೆಯಾಗಿ ಹೇಳಬೇಕೆಂದರೆ, ಇಂಥ ವಿಷಯಗಳಿಗೆ ನಿಶ್ಚಿತವಾಗಿ ಇಂಥದೇ ರೀತಿ ಎಂದು ಹೇಳಬಲ್ಲ ನಿಯಮ ಇಲ್ಲ. ಅನೇಕ ವಿಧ ಬದಲಾವಣೆಗಳ ಸಾಧ್ಯತೆ ಇದೆ, ವ್ಯಕ್ತಿಯ ಪ್ರಜ್ಞೆ ಅದರ ಶಕ್ತಿಗಳು, ಪ್ರವೃತ್ತಿಗಳು ಮತ್ತು ಆಕಾರ ಇವುಗಳ ಮೇಲೆ ಆ ಬದಲಾವಣೆ ಅವಲಂಬಿತವಾಗಿದೆ. ಆ ಒಂದು ಸಾಮಾನ್ಯ ನಿಯಮ, ವ್ಯವಸ್ಥೆ ಬಂದಿದೆ, ಅದರೊಳಗೇ ಎಲ್ಲವೂ ಸಮಾವೇಶವಾಗುವುದುಂಟಾದರೂ, ಬದಲಾವಣೆಯ ಸಾಧ್ಯತೆಯನ್ನು ಅಲ್ಲಗೆಳೆಯಲಾರದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/536 – ಶ್ರೀ ಅರವಿಂದರು**

*

*ಸ್ವರ್ಗ ಹಾಗೂ ನರಕಗಳು ಸಾಮಾನ್ಯವಾಗಿ ಆತ್ಮದ, ಅಥವಾ ವಿಶೇಷವಾಗಿ ಪ್ರಾಣಿಕ ಸತ್ತೆಯ ಕಾಲ್ಪನಿಕ ಸ್ಥಿತಿಗಳಾಗಿವೆ, ತಾನು ಶರೀರ ತ್ಯಾಗ ಮಾಡಿ ಹೋದ ನಂತರ ಇವುಗಳನ್ನದು ಕಲ್ಪಿಸಿಕೊಳ್ಳುತ್ತದೆ. ನರಕ ಅಂದರೆ ಪ್ರಾಣಿಕ ಲೋಕದಲ್ಲಿರುವ ಒಂದು ಯಾತನಾಮಯವಾದ ದಾರಿ ಅಥವಾ ವೇದನಾಪೂರ್ಣವಾದ ತಂಗುದಾಣ. ಉದಾಹರಣೆಗಾಗಿ, ಆತ್ಮಹತ್ಯೆಯಂಥ ಅನೇಕ ಪ್ರಕರಣಗಳಲ್ಲಿ ತುಂಬ ಅಸಹಜವಾದ ಹಾಗೂ ಉಗ್ರವಾದ ರೀತಿಯಲ್ಲಿ ಶರೀರದಿಂದ ಆತ್ಮವು ನಿರ್ಗಮಿಸುವಾಗ ಅನೇಕ ಬಗೆಯ ಯಾತನಾಮಯ ಹಾಗೂ ಉಗ್ರ ಶಕ್ತಿಗಳಿಂದ ಸುತ್ತುವರಿಯಲ್ಪಟ್ಟಿರುತ್ತದೆ. ಹಾಗೆ ನೋಡಿದರೆ ಅನೇಕ ಸಂತಸಮಯ ಅಥವಾ ಕರಾಳ ಅನುಭವಗಳ ಮಾನಸಿಕ, ಹಾಗೂ ಪ್ರಾಣಿಕ ಲೋಕಗಳೂ ಇವೆ. ಮತ್ತು ವ್ಯಕ್ತಿಯ ಸ್ವಭಾವವು ಯಾವುದರ ಜೊತೆಗೆ ಆತ್ಮೀಯತೆ ಸಾಧಿಸಿದೆಯೋ ಅದರ ಮೂಲಕ ಆಯಾ ದಾರಿಗಳಲ್ಲಿ ಸಾಗಬಹುದು. ಆದರೆ ಶಿಕ್ಷೆ ಅಥವಾ ಬಹುಮಾನಗಳ ಕಲ್ಪನೆ ಮಾತ್ರ ತುಂಬಾ ಬಾಲಿಶ ಮತ್ತು ಒರಟು, ನಾವು ಅದನ್ನು ಕೇವಲ ಜನಪ್ರಿಯವಾದ ಆದರೆ ತಪ್ಪು ಕಲ್ಪನೆಯೆಂದು ತಳ್ಳಿಹಾಕಬಹುದು.*

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/535-36 – ಶ್ರೀ ಅರವಿಂದರು**

*

# ಗತಜನ್ಮದ ಸ್ಮರಣೆಗಳು

– ಅನುವಾದ: ಶ್ರೀ ಎಂ.ಬಿ. ನರವಣಿ ಮತ್ತು ಪುಟ್ಟು ಕುಲಕರ್ಣಿ

**ಗತಜನ್ಮದ ಸ್ಮರಣೆಗಳು**

ನಮ್ಮಲ್ಲಿ ಎಷ್ಟು ಜನರಿಗೆ ನಮ್ಮ ಹಿಂದಿನ ಜನ್ಮದ ಬಗೆಗೆ ತಿಳಿದಿದೆ?

ಒಟ್ಟಂದದಲ್ಲಿ ಹೇಳುವದಾದಲ್ಲಿ, ನಮ್ಮ ಪ್ರಜ್ಞೆಯ ಒಂದು ಭಾಗದಲ್ಲಿ "ನೆನಪು" ಎನ್ನುವದು ಇದ್ದೇ ಇರುತ್ತದೆ. ಆದರೆ ಅದೊಂದು ಅಪಾಯಕಾರೀ ಸಂಗತಿಯೂ ಹೌದು. ಏಕೆಂದರೆ, ಮಾನವನ ಮನಸ್ಸು ರಮ್ಯತೆಯನ್ನೇ ಕುರಿತು ಸದಾ ಆರಾಧನಾ ಮನೋಭಾವ ಹೊಂದಿರುತ್ತದೆ. ಈ ರೀತಿಯ ನವಜನ್ಮದ ಬಗೆಗೆ ಕಿಂಚಿತ್ತು ಸಂಗತಿ ಗೊತ್ತಾದರೂ ಸಾಕು, ಆ ರೀತಿ ಅರಿವಿಗೆ ಬಂದ ತಕ್ಷಣವೇ ಅದರ ಸುತ್ತಲೂ ಸುಂದರವಾದ ಕಥೆಗಳನ್ನು ಹೆಣೆಯಲು ಪ್ರಾರಂಭಿಸುತ್ತದೆ. ಹಲವಷ್ಟು ಜನರು ಈ ಜಗತ್ತು ಹೇಗೆ ಸೃಷ್ಟಿಸಲ್ಪಟ್ಟಿತು ಮತ್ತು ಅದರ ಭವಿಷ್ಯದಲ್ಲಿ ಹೇಗೆ ಮುಂದುವರೆಯುತ್ತದೆ ಎನ್ನುವದರ ಬಗೆಗೆ ಕಾಲ್ಪನಿಕ ಕಥೆಗಳನ್ನು ಹೇಳಲು ಪ್ರಾರಂಭಿಸುತ್ತಾರೆ. ನೀನು ಹಿಂದಿನ ಜನ್ಮದಲ್ಲಿ ಎಲ್ಲಿ ಜನಿಸಿದ್ದೆ ಹಾಗೂ ಈ ನಂತರದಲ್ಲಿ ನೀನು ಏನಾಗುತ್ತೀಯಾ ಎನ್ನುವದನ್ನೂ ಹೇಳುತ್ತಾರೆ. ಅದೂ ಅಲ್ಲದೇ ನೀವು ಕಳೆದ ಹಲವಾರು ಜನ್ಮಗಳ ಮತ್ತು ತಳೆಯಲಿರುವ ಹಲವು ಜನ್ಮಗಳ ಬಗೆಗೂ ಹೇಳುತ್ತಾರೆ. ಆದರೆ ಆಧ್ಯಾತ್ಮಿಕ ಜೀವನ ವಿಧಾನಕ್ಕೆ ಇದು ಯಾವುದೇ ರೀತಿಯಿಂದ ಸಂಬಂಧ ಹೊಂದಿರುವದಿಲ್ಲ. ನಿಜವಾಗಿಯೂ ಹಿಂದಿನ ಜನ್ಮಗಳ ನೆನಪು ಎನ್ನವುದು ಪೂರ್ಣ–ಜ್ಞಾನದ ಒಂದು (Integral Knowledge) ಭಾಗವಾಗಿದೆ; ಹೀಗಾಗಿ ಇದನ್ನು ಕಾಲ್ಪನಿಕ ಭ್ರಾಂತಿಗಳಿಂದ ಲಭ್ಯವಾಗಲಾರದು. ಇದು ಒಂದು ಆಯಾಮದಲ್ಲಿ ವಸ್ತುನಿಷ್ಠ ಜ್ಞಾನ(Objective Knowledge)ವಾಗಿದೆ. ಮತ್ತೊಂದು ಆಯಾಮದಲ್ಲಿ ಬಹುತೇಕವಾಗಿ ವ್ಯಕ್ತಿಗತ ಹಾಗೂ ವ್ಯಕ್ತಿನಿಷ್ಠ ಅನುಭವ(Subjective Experience)ವಾಗಿದೆ. ಮತ್ತೆ ಇಲ್ಲಿ ಸಂಶೋಧನೆಯ ಅವಕಾಶವಿದೆ, ಅಸ್ಪಷ್ಟತೆಯ ಅಥವಾ ಹುಸಿ ರಚನೆ ಇರುತ್ತದೆ.

ಈ ಎಲ್ಲ ಸಂಗತಿಗಳ ಹಿಂದೆ ಇರುವ ಸತ್ಯವನ್ನು ತಲುಪಬೇಕೆಂದರೆ, ನಿನ್ನ ಅನುಭವಜನ್ಯ ಪ್ರಜ್ಞೆಯು ಖಚಿತವಾಗಿಯೂ ಪರಿಶುದ್ಧವಾಗಿರಬೇಕು. ಜೊತಗೆ ನಿರ್ಮಲವೂ ಆಗಿರಬೇಕು. ಇಲ್ಲಿ ಮಾನಸಿಕ ಅಥವಾ ಪ್ರಾಣಿಕ ತತ್ವಗಳ

ಯಾವುದೇ ಹಸ್ತಕ್ಷೇಪ ಇರಬಾರದು. ವೈಯಕ್ತಿಕ ಕಲ್ಪನೆಗಳಿಂದ, ಅಭಿಪ್ರಾಯಗಳಿಂದ, ಅನುಭವಗಳಿಂದ ದೂರವಿರಬೇಕು. ಜೊತೆಗೆ ನಿನ್ನ ಮನದಿಚ್ಛೆಯಂತೆಯೇ ಅದನ್ನು ಮಂಡಿಸುವದನ್ನಾಗಲೀ ಅಥವಾ ವ್ಯಾಖ್ಯಾನಿಸುವದನ್ನಾಗಲೀ ಮಾಡುವಂತಿಲ್ಲ. ಹಿಂದಿನ ಜನ್ಮದ ಅನುಭವಗಳು ಒಂದು ವೇಳೆ ಸತ್ಯವೇ ಆಗಿದ್ದರೂ ಕೂಡಾ, ನೀನು ಏನನ್ನು ಗಮನಿಸಿದ್ದೀಯಾ ಮತ್ತು ನಿನ್ನ ಮನಸ್ಸಿನಲ್ಲಿ ಇರುವ ವಿವರಣೆ ಅಥವಾ ಅದರ ಕುರಿತ ವಿಚಾರ–ರಚನೆಗಳ ಮಧ್ಯದಲ್ಲಿ ಯಾವಗಲೂ ಒಂದು ದೊಡ್ಡ ಆಖಾತವಿರುತ್ತದೆ. ಯಾವಾಗ ನೀನು ಮಾನವ–ಅನುಭವಗಳ ನೆಲೆಯಿಂದ ಮೇಲೇರಿ, ನಿನ್ನ ಮನೋವಲಯದಿಂದ ಸಂಪೂರ್ಣ ಮುಕ್ತನಾದಾಗಲೇ ಈ 'ಸತ್ಯ'ವನ್ನು ತಲುಪಲು ಸಾಧ್ಯವಾಗುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/40–41**

*

**ಚಿನ್ಮಯದ ಜೀವನ**

ತದನಂತರದಲ್ಲಿ, ಯಾರು ಈ ವಿಷಯದಲ್ಲಿ ಅಲ್ಪ ಪ್ರಗತಿಯನ್ನು ಸಾಧಿಸಿದ್ದಾರೋ, ಮತ್ತು ಯಾರು ಬಹುತೇಕವಾಗಿ ಮಾಂತ್ರಿಕರು (ತಾಂತ್ರಿಕರು) ಎನಿಸಿಕೊಂಡಿದ್ದಾರೊ, ಹಾಗೂ ನವಜನ್ಮದ ವಿಷಯದ ಬಗೆಗೆ ಬಾಲಿಶ ರೀತಿಯಲ್ಲಿ ವಿಶ್ವಾಸ ಹೊಂದಿದ್ದಾರೋ, ಅವರೆಲ್ಲರ ಅಭಿಪ್ರಾಯದಂತೆ ಒಬ್ಬ ವ್ಯಕ್ತಿಯು ಧರಿಸಿರುವ ಭೌತಿಕ ನಿಲುವಂಗಿಯಂತೆ ಇರುವ ಈ ದೇಹವು, ಹೇಗೆ ವಸ್ತ್ರವನ್ನು ತ್ಯಜಿಸಲಾಗುತ್ತದೆಯೋ ಮತ್ತೆ ಬೇರೆ ಬೇರೆ ವಸ್ತ್ರಗಳನ್ನು ಧರಿಸಲಾಗುತ್ತದೆಯೋ ಹಾಗೆ... ಅಂದರೆ ಗೊಂಬೆಯೊಂದರ ವಸ್ತ್ರಗಳನ್ನು ಬದಲಾವಣೆ ಮಾಡಿದ ಹಾಗೆ ದೇಹಗಳನ್ನು ತ್ಯಜಿಸುತ್ತ ಹೋಗುತ್ತದೆ. ಅವರಿಗೆ ಇದೆಲ್ಲವೂ ಅದೇ ರೀತಿಯಲ್ಲಿಯೇ ಇರುತ್ತದೆ; ದೇಹವನ್ನು ತ್ಯಜಿಸುವದು ಎಂದರೆ ಧರಿಸಿದ ವಸ್ತ್ರವನ್ನು ತ್ಯಜಿಸಿದಂತೆಯೇ ಇರುತ್ತದೆ. ಮತ್ತೆ ಕೆಲವರು ಈ ವಿಷಯವಾಗಿ ಅತ್ಯಂತ ಗಂಭೀರವಾದ ಗ್ರಂಥಗಳನ್ನೇ ರಚಿಸಿ, ಮಂಗನಿಂದ ಪ್ರಾರಂಭಗೊಂಡ ತಮ್ಮ ಜೀವನದ ವಿಕಸನದ ಬಗೆಗೆ ಬರೆದಿದ್ದಾರೆ! ಇದಂತೂ ತೀರಾ ಬಾಲಿಶತನದಿಂದ ಕೂಡಿದೆ. ಸಾವಿರದಲ್ಲಿ ಒಂಬೈನೂರಾ ತೊಂಬತ್ತೊಂಬತ್ತು ಪ್ರಕರಣಗಳಲ್ಲಿ, ಜೀವಿಯ ಮರಣಾನಂತರದಲ್ಲಿಯೂ ಇದ್ದ ಒಂದು ಸೂಕ್ಷ್ಮಾತಿಸೂಕ್ಷ್ಮ ಚೈತ್ಯ–ರೂಪವು ಮುಂದುವರೆಯುತ್ತದೆ ಅಸ್ತಿತ್ವವನ್ನು

ಉಳಿಸಿಕೊಂಡು ಮುಂದುವರೆಯುತ್ತದೆ. ಉಳಿದಂತೆ ಇತರೇ ಅಂಶಗಳೇಲ್ಲವೂ ವಿಘಟನೆಗೊಳ್ಳುತ್ತವೆ, ಛಿದ್ರ–ಛಿದ್ರವಾಗುತ್ತವೆ, ಅಲ್ಲಿ–ಇಲ್ಲಿ ಎಲ್ಲೆಡೆಗೆ ಚೆದುರಿ ಹೋಗುತ್ತವೆ. ಆ ವ್ಯಕ್ತಿಯ ವ್ಯಕ್ತಿತ್ವ ಅಲ್ಲಿಂದ ಮುಂದೆ ಅಸ್ತಿತ್ವದಲ್ಲಿ ಇರುವದಿಲ್ಲ.

ಹಾಗಾದರೆ, ಈಗ, ಈ ಗತಿಯ ಭೌತಿಕ (ಲೌಕಿಕ) ಜೀವನದಲ್ಲಿ ಆ ಚೈತ್ಯವು ಈಗಿನ ಜೀವನದ ಕ್ರಿಯೆಗಳಲ್ಲಿ ಹೇಗೆ ಪ್ರಜ್ಞಾಪೂರ್ವಕವಾಗಿ ಭಾಗಿಯಾಗುತ್ತದೆ?... ಯಾರು ಯೋಗದ ಸಾಧಕರಾಗಿದ್ದಾರೋ ಮತ್ತು ಯಾರು ಕೊಂಚ ಶಿಸ್ತುಬದ್ಧ ಜೀವನ ಶೈಲಿಯನ್ನು ಅಳವಡಿಸಿಕೊಂಡಿದ್ದಾರೋ ಅವರ ಬಗೆಗೆ ನಾನು ಮಾತನಾಡುವದಿಲ್ಲ; ನಾನು ಈಗ ಮಾತನಾಡುತ್ತಿರುವದು ಸರ್ವೇ ಸಾಮಾನ್ಯ ವ್ಯಕ್ತಿಗಳಾದ ಹಾಗೂ ಯಾರ ಚೈತನ್ಯದ ಸಾಮರ್ಥ್ಯವು ಸಮರ್ಪಕವಾಗಿ ಪ್ರಗತಿ ಹೊಂದಿ ಅವರವರ ಜೀವನದಲ್ಲಿ ಮಧ್ಯ ಪ್ರವೇಶಿಸಲು ಅನುವು ಮಾಡಿಕೊಡುತ್ತಾರೋ ಮತ್ತು, ಮಾರ್ಗದರ್ಶಿಯಾಗಿಸಿಕೊಳ್ಳುವ ವ್ಯಕ್ತಿಗಳ ಬಗೆಗೆ ಮಾತನಾಡುತ್ತಿದ್ದೇನೆ. ಈ ಹಂತವನ್ನು ತಲುಪಲು ಅವರಿಗೆ ವರ್ಷಾನುಗಟ್ಟಲೇ ಬೇಕಾದೀತು. ಅಲ್ಲಿಯವರೆಗೂ ಅವರು ಈ ಚೈತನ್ಯದ ಮಧ್ಯ ಪ್ರವೇಶವಿಲ್ಲದೇ ತಮ್ಮ ಅವಧಿಯನ್ನು ಕಳೆದಿರಬಹುದು. ಮತ್ತೆ ಮೇಲಾಗಿ ತಾವು ಯಾವ ಜನ್ಮದ ತಾಳಿದ್ದೆವು, ತಂದೆ–ತಾಯಿ ಯಾರಾಗಿದ್ದರು? ಅವರು ವಾಸಿಸಿದ್ದ ಮನೆಯು ಹೇಗಿದ್ದಿತು? ಚರ್ಚಿನ ಮೇಲ್ಛಾವಣಿ, ಆ ಚರ್ಚಿನ ಪಕ್ಕದಲ್ಲಿಯೇ ಇದ್ದ ಅರಣ್ಯ... ಹೀಗೆ ಸರ್ವೇಸಾಮಾನ್ಯವಾಗಿ ಇರಬಹುದಾದ ಎಲ್ಲ ವಿಷಯಗಳ ವರ್ಣನೆಯನ್ನು ಹೇಳುತ್ತಾರೆ! ಇದು ಸಂಪೂರ್ಣವಾಗಿ ಮೂರ್ಖತನದ ಮಾತಾಗಿದ್ದು, ಇದೆಲ್ಲವೂ ಸವಕಳಿಗೊಂಡ ವಿಷಯವಾಗಿದೆ. ಇಂತಹ ವಿಷಯಗಳು ದೀರ್ಘಾವಧಿಯಲ್ಲಿ ಉಳಿಯುವದಿಲ್ಲ.

ಆದರೆ, ಆ ವಿಷಯದ ನೆನಪು ಈಗಲೂ ಇದೆ ಎಂದಾದಲ್ಲಿ, ಅದು ಆ ಜನ್ಮದ ವಿಶೇಷ ಸಂದರ್ಭಕ್ಕೆ ಮಾತ್ರ ಸಂಬಂಧಿಸಿರುವದು; ಪ್ರಾಣಿಕ (ವೈಟಲ್) ಘಟನೆಗಳಲ್ಲಿ, ಅಂದರೆ ಆ ಜನ್ಮದ ಯಾವ ಘಟನೆಯಲ್ಲಿ ಪ್ರಾಣವು ತತ್–ಕ್ಷಣವೇ ಭಾಗಿಯಾಗಿರುತ್ತದೆಯೋ, ಅದೂ ಆ ವ್ಯಕ್ತಿಯ ಅಂತರಂಗದ ಕರೆಯ ಮೂಲಕವೋ ಅಥವಾ ಅನಿವಾರ್ಯವಾಗಿಯೋ, – ಇದ್ದಕ್ಕಿದ್ದಂತೆಯೇ ಚೈತನ್ಯದ ಮಧ್ಯಸ್ಥಿಕೆಯಿಂದಾಗಿ – ಘಟಿಸುತ್ತದೆ. ಹೀಗಾಗಿಯೇ ಅದು ಚೈತನ್ಯದ ಸ್ಮರಣೆಯಲ್ಲಿಯೂ ಅಚ್ಚೊತ್ತಲ್ಪಟ್ಟಿರುತ್ತದೆ.

ನೀನು ಈ ತೆರನಾದ ಚೈತನ್ಯದ–ಸ್ಮರಣೆಯನ್ನು ಯಾವಾಗ ಹೊಂದುತ್ತೀಯೋ, ಆ ಜೀವನದ ಒಂದು "ಘಳಿಗೆ"ಯಲ್ಲಿ ಆ ಸಂದರ್ಭಗಳ ಕುರಿತು ನೆನಪುಗಳನ್ನು ಮರುಕಳಿಸಿಕೊಳ್ಳಲು ಈಗಲೂ ಸಾಧ್ಯವಾಗುವದು. ವಿಶೇಷವಾಗಿ, ಆ ಸಂದರ್ಭದಲ್ಲಿ ಪ್ರಜ್ಞಾ ಸ್ತರದಲ್ಲಿನ ಕ್ರಿಯೆಯಿಂದಾಗಿ ಆಂತರ್ಯದ ಭಾವನಾಮಯ ವಿಷಯಗಳಲ್ಲಿ ಇದು ಸಾಧ್ಯವಾಗುವದು. ಮತ್ತೆ ಇದು, ಪ್ರಜ್ಞೆಯ ಮೂಲಕವೇ ಇತರ ಕೆಲವು ಸಂಘಟಿತ ಅಂಶಗಳೊಡನೆ ಸಂಯೋಗಗೊಂಡು ಮುಂದುವರೆಯುತ್ತದೆ. ಈ ಎಲ್ಲವೂ ನಿನ್ನನ್ನು ಆವರಿಸಿಕೊಂಡಿರುವ ವಲಯದಲ್ಲಿಯೇ ನಡೆಯುತ್ತಿದ್ದು, ಅಲ್ಲಿ ಒಂದು ಶಬ್ದವು ಉಚ್ಚರಿಸಲ್ಪಡುತ್ತಿರುವ ಮೂಲಕ, ಸೂಕ್ತ ಉಕ್ತಿಯೊಂದುನ್ನು ಆಲಿಸುವ ಮೂಲಕ ಘಟಿಸುವದು.

ಈ ಎಲ್ಲ ಘಟನೆಗಳಿಗಿಂತ ಅತೀ ಪ್ರಾಮುಖ್ಯವಾದ ಸಂಗತಿ ಎಂದರೆ, ನೀನು ಈ ಹಿಂದೆ ಇದ್ದ ಅವಧಿಯ "ಆತ್ಮದ ಸ್ಥಿತಿ"ಯಾಗಿದೆ. ಹೀಗಾಗಿ ಆ ಅವಧೀಯಲ್ಲಿ ಉಳಿದೆಲ್ಲವೂ ಸ್ಪಷ್ಟವಾಗಿ ಅಚ್ಚೊತ್ತಲ್ಪಟ್ಟಿರುತ್ತದೆ. ಈ ಚೈತ್ಯ–ಜೀವನದಲ್ಲಿ ಹಲವಾರು ದಾಖಲಾರ್ಹ ಸಂಗತಿಗಳು ಇರುತ್ತವೆ. ಇಲ್ಲಿ ಆ ಘಟನೆಗಳು ಅತ್ಯಂತ ನಿಖರವಾಗಿ, ಗಾಢವಾಗಿ ಘಟಿಸಲ್ಪಟ್ಟು ಅಷ್ಟೇ ಪ್ರಬಲವಾದ ಪ್ರಭಾವವನ್ನು ಬೀರಿರುತ್ತವೆ. ಹೀಗಾಗಿ, ಯಾವಾಗ ನೀನು ನಿನ್ನ ಚೈತ್ಯಾತ್ಮವನ್ನು ಮತ್ತೆ ನಿರಂತರವಾಗಿ, ಸ್ಥಿರವಾಗಿ, ಸ್ಪಷ್ಟವಾಗಿ ಕಾಣಲು ಶಕ್ತನಾಗುತ್ತದೆಯೋ ಅದೇ ನಿನ್ನ ಸ್ಮರಣೆಯೂ ಆಗಿರುತ್ತದೆ. ಈ ತೆರನಾದ ಘಟನೆಯ ಕೆಲವು ಉದಾಹರಣೆ ಇರಬಹುದು, ಇವೆಲ್ಲವೂ ಓರ್ವನ ಜೀವನದಲ್ಲಿ ಕೇವಲ ಮಿಂಚಿನ ಸೆಳಕುಗಳು ಇದ್ದಂತೆ ಇರುತ್ತವೆ. ಹೀಗಾಗಿ, "ನಾನು ಅಂತಹ ವ್ಯಕ್ತಿಯಾಗಿದ್ದೆ, ನಾನು ಅಂತಹ ಕಾರ್ಯ ಮಾಡಿದ್ದೆ, ನಾನು ಆ ಹೆಸರಿನಿಂದ ಕರೆಯಲ್ಪಡುತ್ತಿದ್ದೆ, ನಾನು ಏನೆಲ್ಲವನ್ನೂ ಮಡಿದ್ದೇನೆ" ಎಂದು ಹೇಳಲು ಬರುವದಿಲ್ಲ.

ಒಟ್ಟಿನಲ್ಲಿ ಇದನ್ನು ನೋಡುವದಾದಲ್ಲಿ, ಆ ಒಂದು (ಅಪರೂಪದ) ಘಳಿಗೆಯು ನಿಗದಿತವಾದ ಸ್ಥಳ ಮತ್ತು ಸಮಯಗಳನ್ನು ಸೂಕ್ತವಾಗಿ ನಿಗದಿಗೊಳಿಸಿಕೊಳ್ಳುವಲ್ಲಿ, ದೇಶ ಮತ್ತು ಕಾಲಗಳೂ ಸಹಿತ ಸಮಂಜಸವಾಗಿ ಹೊಂದಾಣಿಕೆಯಾದಲ್ಲಿ ಇಂತಹ ಸ್ಮರಣೆಗಳು ಮುಂದುವರೆಯುತ್ತವೆ. ಇದು ಘಟಿಸಬಹುದಾದ ಸಂದರ್ಭವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/32–33**

*

## ಚೈತ್ಯದ ನೆನಪುಗಳು ಮತ್ತು ಪೂರ್ವಜನ್ಮದ ಬಗೆಗೆ ಕಾಲ್ಪನಿಕ ಕಥೆಗಳು

*"ಮತ್ತೊಬ್ಬರ ಜೀವನದ ಬಗೆಗೆ ವಿವರಿಸುವ ಕೆಲವು ವ್ಯಕ್ತಿಗಳು ಇರುತ್ತಾರೆ..."*

ಹೌದು...ಹೌದು.. ಆ ಬಗೆಗೆ ನನಗೂ ಗೊತ್ತಿದೆ. ಈ ವಿಷಯವಾಗಿ ನಾನು ಹಲವಾರು ಸಂಗತಿಗಳನ್ನು ಕೇಳಿದ್ದೇನೆ. ಅವರು ನಿಮ್ಮ ಮುಖವನ್ನು ನೋಡಿದ ತಕ್ಷಣವೇ "ನೀನು ಆ ಜನ್ಮದಲ್ಲಿ ಹೀಗೆ ಇದ್ದೆ. ಹಾಗೆ ಇದ್ದೆ, ನೀನು ಅಂಥ ಮಹಾಕಾರ್ಯಗಳನ್ನು ಮಾಡಿದ್ದೀಯಾ" ಎಂದು ಹೇಳುತ್ತಾರೆ. ಆದರೆ ಇದು ಸತ್ಯ ಸಂಗತಿಯಲ್ಲವೇ ಅಲ್ಲವೆಂದು ಖಂಡಿತವಾಗಿಯೂ ಹೇಳಬಲ್ಲೆ. ಯಾವುದೇ ವ್ಯಕ್ತಿಯು ಮತ್ತೋರ್ವ ವ್ಯಕ್ತಿಯ ಹಿಂದಿನ ಜೀವನದ ಘಟನೆಗಳನ್ನು ಹೇಳಲು ಹೇಗೆ ಸಾಧ್ಯ?" ಇದು ಕೇವಲ ಕಲ್ಪಿತ ಕಥೆಯಂತಿರುತ್ತದೆ ಅಷ್ಟೇ. ಇದನ್ನು ಒಂದು ಕಥಾ–ಪುಸ್ತಕದ ರೂಪದಲ್ಲಿ ಪ್ರಕಟಿಸಬಹುದು. ಯಾವುದೇ ವ್ಯಕ್ತಿಯ ಆಂತರ್ಯವನ್ನು ಗಮನಿಸಿದಾಗ, ಅಂದರೆ ಯಾವಾಗ ಅಂತಹ ಗ್ರಹಣಶಕ್ತಿಯನ್ನು ನೀನು ಹೊಂದಿದ್ದಾಗ, ಅಲ್ಲರುವ ಪ್ರಾಣದ (ಚೈತನ್ಯದ) ಅಸ್ತಿತ್ವವನ್ನು ಗುರುತಿಸಲು ಸಮರ್ಥನಾಗಿರುವಲ್ಲಿ, ಆಗ ಇದ್ದಕಿದ್ದಂತೆಯೇ ಒಂದು ದೃಶ್ಯವನ್ನು ಕಾಣಲು ಸಮರ್ಥನಾಗುತ್ತೀಯಾ; ಒಂದು ಆಕೃತಿಯನ್ನು ಕಾಣುತ್ತೀಯಾ; ಒಂದು ಆಕಾರವನ್ನೂ ಸಹಿತ ನೋಡುತ್ತೀಯಾ, ಅದರ ಜೊತೆಗೆ ಒಂದು ಶಬ್ದ(ಧ್ವನಿ)ವನ್ನೂ ಕೇಳುತ್ತೀಯಾ; ಆ ವ್ಯಕ್ತಿಯ ಸದ್ಯದ ಜೀವನದಲ್ಲಿಯೂ ಸಹಿತ ಹಿಂದಿನ ಜನ್ಮದ ಕೆಲವು ದಯಾಪರತೆಯ ಅಂಶಗಳು ಮತ್ತು ಕಳೇದ ಜನ್ಮದ ಆಕರ್ಷಣೆಯನ್ನು ಉಳಿಸಿಕೊಂಡಿರುವ ಅಂಶಗಳು ಸಂಘಟನಾತ್ಮವಾಗಿ ಅಲ್ಲಿ ಬಂದಿರುತ್ತವೆ.

ಆದರೆ, ನಾನು ಈಗಾಗಲೇ ಹೇಳಿರುವಂತೆ, ಇವೆಲ್ಲವೂ "ಜೀವನದ ಕ್ಷಣಗಳು" ಮಾತ್ರ. ಒಂದು ವೇಳೆ ಓರ್ವನು ಇದನ್ನು ಗಮನಿಸಿದಲ್ಲಿ, ಇಂತಹ ಹಲವಾರು ಕ್ಷಣಗಳನ್ನು ಗಮನಿಸುವದಾದಲ್ಲಿಯೂ ಸಹತ, ಯಾರೇ ಆಗಲಿ ಆ ಜೀವನದ ಸಂಪೂರ್ಣ ವಿವರಣೆ ಕೊಡಲು ಸಾಧ್ಯವಾಗುವದಿಲ್ಲ.

ಈ ಘಟನೆಗಳ ಜೊತೆಗೆ ಶ್ರೀ ಅರವಿಂದರು ಕೆಲವು ಮೋಜಿನ ಪ್ರಸಂಗಗಳನ್ನು ಬರೆದಿದ್ದಾರೆ ಎಂದು ನಾನು ವಿಶ್ವಾಸ ಹೊಂದಿದ್ದೇನೆ. ಈಗಾಗಲೇ ತಿಳಿದಿರುವ ಸೀಜರರ (ವ್ಯಕ್ತಿತ್ವಗಳ) ಬಗೆಗೆ, ಮತ್ತೆ ಮಹಾತ್ಮರಾಗಿರುವ ಕೆಲವರ ವಿಷಯಗಳ ಬಗೆಗೆ, ನೆಪೋಲಿಯನ್ನ ವ್ಯಕ್ತಿತ್ವಗಳ ಬಗೆಗೆ, ಶೆಕ್ಸಪೀಯರ.... ಹೀಗೆ

ಯಾರು ಇತಿಹಾಸದಲ್ಲಿ ಈಗಾಗಲೇ ದಾಖಲಿಸಲ್ಪಟ್ಟಿದ್ದಾರೋ ಅವರೆಲ್ಲರ ಕುರಿತೂ ಶ್ರೀ ಅರವಿಂದರು ಬರೆದಿದ್ದಾರೆ! ಓ.. ಎಷ್ಟೊಂದು ಸಂಖ್ಯೆಯ ದೃಷ್ಟಾಂತಗಳು! ನೂರಾರು.. ನೂರಾರು ಸಂಖ್ಯೆಯಲ್ಲಿವೆ!! ನೀನೂ ಸಹಿತ ಅವರ ಕಥೆಗಳ ಬಗೆಗೆ ಕೇಳಿದ್ದೀಯಾ. "ನಾನು ಅದಾಗಿದ್ದೆ, ನಾನು ಇದಾಗಿದ್ದೆ, ನಾನು ಅದನ್ನು ಮಾಡಿದೆ" ಅಥವಾ ಹಲವು ಗೋಷ್ಠಿಗಳಲ್ಲಿ (ಮಂಡಳಗಳಲ್ಲಿ), ಆ ಆತ್ಮಗಳು ಬಂದು ನಿನ್ನೊಡನೆ ಸಂಭಾಷಣೆ ನಡೆಸುತ್ತವೆ. ಇಂತಹ ಆತ್ಮದ ಜೊತೆಗೆ ಆಟ ನಡೆಸುವ ಚಟುವಟಿಕೆ ನಡೆಸುವವರು ಇದ್ದೇ ಇರುತ್ತಾರೆ. ಅದೂ ಅಲ್ಲದೇ, "ಸ್ವಯಂಚಾಲಿತ ಬರವಣಿಗೆಯ ತಂತ್ರ"(ಅಟೋಮೆಟಿಕ್ ರೈಟಿಂಗ್)ದ ಮೂಲಕ ಆತ್ಮಗಳ ಜೊತೆಗೆ ಸಂಭಾಷಣೆ ನಡೆಸುವವರೂ ಇದ್ದಾರೆ.

ಈಗಂತೂ ಬಹುಭಾಷಾ (Garrulous) ಆತ್ಮಗಳಿವೆ. ಅವು ಏಕಕಾಲಕ್ಕೆ ಹಲವು ಸ್ಥಳಗಳಿಗೆ ಆಗಮಿಸುತ್ತವೆ. ಉದಾಹರಣೆಗೆ, ನೆಪೋಲಿಯನ್ (ಈ ನೆಪೋಲಿಯನ್ನ ಸಲುವಾಗಿಯೇ ಏಕೆ ಈ ಪಕ್ಷಪಾತ ಧೋರಣೆಯಿದೆ ಎನ್ನುವದು ನನಗಂತೂ ಗೊತ್ತಿಲ್ಲ). ಈ ನೆಪೋಲಿಯನ್ನ ಎಲ್ಲೆಡೆಗೂ ಬರುತ್ತಿದ್ದಾನೆ, ಅಲ್ಲದೇ ತನ್ನ ಜೀವನದ ಬಗೆಗೆ ಅಸಾಮಾನ್ಯವೆನಿಸುವ ಹಲವು ದೃಷ್ಟಾಂತಗಳನ್ನು ಹೇಳುತ್ತಾನೆ. ಅದರಲ್ಲಿ ಬಹುತೇಕವಾಗಿ ವಿರೋಧಾಭಾಸದ ಕಥೆಗಳೇ ಇರುತ್ತವೆ. ಅಲ್ಲದೇ ಇವೆಲ್ಲವೂ ಏಕಕಾಲಕ್ಕೇ ಘಟಿಸುತ್ತವೆ ಎನ್ನುವಂತಿವೆ. ಇವರೆಲ್ಲ ಬಹಳ ಕಾರ್ಯಶೀಲ ಪ್ರವೃತ್ತಿಯ ವ್ಯಕ್ತಿಗಳಾಗಿದ್ದರು ಎನ್ನುವದು ಸರಿಯಾದ ವಿಷಯ. ಆದರೆ, ಈಗ ಪ್ರತಿಪಾದಿಸಲ್ಪಡುತ್ತಿರುವ ರೀತಿ ಮಾತ್ರ ಹಾಸ್ಯಾಸ್ಪದವಾದದ್ದು. ಮುಖ್ಯವಾಗಿ ಈ ರೀತಿ ನಡೆಯುವದು ದುಸ್ಸಾಧ್ಯದ ಸಂಗತಿಯಾಗಿದೆ.

ಇಲ್ಲಿರುವ ಸತ್ಯವೆಂದರೆ, ಇವೆಲ್ಲ ಆ ಪ್ರಕಾರದ ಅತ್ಯಂತ ಸೂಕ್ಷ್ಮ (Entity) ಸತ್ತೆಗಳಾಗಿದ್ದಾರೆ. ಆ ವ್ಯಕ್ತಿಯ ಬಯಕೆಗಳು ಆ ವ್ಯಕ್ತಿ ದೇಹವು ವಿಘಟನೆಯಾದ ಮೇಲೆಯೂ ಅಸ್ತಿತ್ವದಲ್ಲಿ ಇದ್ದು, ಅವುಗಳದೇ ಆದ "ಆಕಾರ"ವನ್ನು ಹೊಂದಿ ರೂಪಣೆಗೊಂಡಿರುವ "ಜೀವದ" ಹಂತಗಳಾಗಿವೆ. ಸಾಂದ್ರಗೊಂಡಿರುವ–ಕ್ರೋಡೀಕೃತಗೊಂಡಿರುವ (Coagulated) ಕಲ್ಪನೆಗಳಾಗಿವೆ. ಇವು ಮತ್ತೆ ಪ್ರಕಟವಾಗಿ ಪುನಃ ದರ್ಶನಗೊಳ್ಳುವವು. ಕೆಲವೊಂದು ಸಮಯದಲ್ಲಿ ಇವೆಲ್ಲವೂ ಜಗತ್ತಿನ ಸೂಕ್ಷ್ಮಾತಿಸೂಕ್ಷ್ಮ ಜೀವಿಗಳಾಗಿದ್ದು ಅವೆಲ್ಲವೂ ಸಂಪೂರ್ಣವಾಗಿ ಕರಗಿಹೋಗಿರದ ಅಂಶಗಳಾಗಿವೆ; ಯಾವಾಗ ಜನರು ಇಂತಹ "ಆಟ"ಗಳನ್ನು

ಆಡಲು ಪ್ರಾರಂಭಿಸುತ್ತಾರೋ ಅವುಗಳನ್ನು "ಸ್ವಯಂಚಾಲಿತ ಬರಹ", "ಆತ್ಮದೊಡನೆ ಸಂಭಾಷಣೆ"ಯಂತಹ ಆಟಗಳನ್ನು ನೋಡಿದ ಕೂಡಲೇ – ಅವು ಅಲ್ಲಿಗೆ ಆಗಮಿಸಿ, ಆಟವಾಡಲು ತೊಡಗುತ್ತವೆ. ಮತ್ತೆ ಇವೇ ಅಲ್ಲಿ ಪ್ರಮುಖ ಪಾತ್ರದಲ್ಲಿ ಇದ್ದು, ಅವು ಮಾನವನ ಚಟುವಟಿಕೆಗಳನ್ನು ಸುಲಭದಲ್ಲಿಯೇ ಓದಬಲ್ಲ ಸಾಮರ್ಥ್ಯವನ್ನು ಹೊಂದಿರುವವು. ಹೀಗಾಗಿ ನಿಮ್ಮ ಮೆದುಳಿನಲ್ಲಿ ಏನು ನಡೆಯುತ್ತಿದೆ ಎನ್ನುವದನ್ನು ಸುಲಭದಲ್ಲಿಯೇ ಹೇಳುತ್ತಿವೆ. ನೀವು ಏನನ್ನು ನಿರೀಕ್ಷಿಸುತ್ತೀರೋ ಅದನ್ನೇ ಪ್ರತಿಕ್ರಿಯಿಸುತ್ತವೆ. ನೀವು ಯಾವ ಉತ್ತರವನ್ನು ನಿರೀಕ್ಷಿಸುತ್ತೀರೋ ಅಂತಹದೇ ಉತ್ತರಗಳನ್ನು ನೀಡುತ್ತವೆ; ಮತ್ತೆ ಕೆಲವೊಮ್ಮೆ ನೀವು ಪ್ರಶ್ನೆಯನ್ನು ಕೇಳುವದಕ್ಕಿಂತ ಮೊದಲೇ ಆ ಪ್ರಶ್ನೆಗೇ ಉತ್ತರವನ್ನೂ ಕೊಡುತ್ತವೆ! ನಿಮಗೆ ಸಂಕ್ಷಿಪ್ತ ವಿವರಣೆಗಳನ್ನೂ ಕೊಡುತ್ತವೆ. ನಿಮಗೆ ಇಂತಿಂಥ ಘಟನೆ ನಡೆದಿತ್ತು ಎಂದೂ ಹೇಳುತ್ತವೆ. ನಿಮ್ಮ ಕುಟುಂಬದ ಇಂತಿಂಥ ವ್ಯಕ್ತಿ ಇವರು ಎಂದೂ ತಿಳಿಸುತ್ತವೆ.. ಈ ಎಲ್ಲ ಸಂಗತಿಗಳೂ ಅವುಗಳಿಗೆ ಚೆನ್ನಾಗಿ ಗೊತ್ತಿದೆ.

ಇವು ಅತ್ಯಂತ ಸುಸಂಬದ್ಧವಾದ ಚಿಂತನಾ–ಗ್ರಹಿಕೆಯನ್ನು ಹೊಂದಿದ್ದು ಮತ್ತು ಅದನ್ನು ನಇಮಗೆ ಸಮಾಧಾನವಾಗಿಯೇ ಅರ್ಥವಾಗುವಂತೆ ಹೇಳುತ್ತಿವೆ. "ನಾನು ಮದುವೆಯಾದ ವ್ಯಕ್ತಿ. ನನಗೆ ಮೂರು ಜನ ಗಂಡು ಮಕ್ಕಳು ಮತ್ತು ನಾಲ್ಕು ಜನ ಹೆಣ್ಣು ಮಕ್ಕಳು ಇದ್ದರು ಎಂದು ನಾನು ಹೇಳದೇ ಇದ್ದರೂ ಅದೆಲ್ಲ ಅವರಿಗೆ ಹೇಗೆ ಗೊತ್ತಾಯಿತು? ಎನ್ನುವ ಪ್ರಶ್ನೆಗೆ ಉತ್ತರವೆಂದರೆ ಇವೆಲ್ಲ ವಿಷಯವೂ ಈ ಮೊದಲೇ ನಿಮ್ಮ ಮೆದುಳಿನಲ್ಲಿ ಇತ್ತು.

ಈ "ಚೈತ್ಯದ ನೆನಪುಗಳು" ಒಂದು ವಿಶೇಷ ಗುಣವನ್ನು ಹೊಂದಿದ್ದು ಜೊತೆಗೆ ಅತ್ಯಾವಶ್ಯವಾದ ಗಾಢತೆಯನ್ನು ಹೊಂದಿರುತ್ತದೆ. ಆದರೆ, ಅದನ್ನು ಈ ರೀತಿ–ನಿರೂಪಣೆ ಗೊಳಿಸಲು ಸಾಧ್ಯವಿಲ್ಲ. ಜೀವನದಲ್ಲಿ ಯಾವುದೇ ಸಂದರ್ಭದಲ್ಲಿಯೂ ಮರೆಯಲು ಸಾಧ್ಯವಿಲ್ಲದಂತಹ ಕ್ಷಣಗಳು ಅವಾಗಿದ್ದು, ಅಲ್ಲಿ ಪ್ರಜ್ಞೆಯು ಸಂಪೂರ್ಣ ತೀವ್ರೆಯಲ್ಲಿ, ಪ್ರಕಾಶಮಾಣವಾಗಿದ್ದು, ಬಲಶಾಲಿಯಾಗಿದ್ದು, ಸದಾ ಕಾರ್ಯಪ್ರವೃತ್ತವಾಗಿದ್ದು, ಶಕ್ತಿಪೂರ್ಣವೂ ಆಗಿರುತ್ತದೆ. ಮತ್ತೆ ಕೆಲವೊಮ್ಮೆ ಜೀವನದಲ್ಲಿ ಒಂದು ಮುಖ್ಯ ಬದಲಾವಣೆಯ ಸಮಯ/ಘಟನೆಯಾಗಿರುತ್ತದೆ. ಆದರೆ ಯಾವುದೇ ಸಂದರ್ಭದಲ್ಲಿಯೂ ಸಹಿತ, ಆ ವ್ಯಕ್ತಿಯ ಆ ಸಂದರ್ಭದಲ್ಲಿ

ಯಾವ ರೀತಿಯ ವೇಷಧಾರಿಯಾಗಿದ್ದನು, ಮತ್ತು ಯಾವ ವ್ಯಕ್ತಿಯ ಜೊತೆಯಲ್ಲಿ ಸಂಭಾಷಿಸುತ್ತಿದ್ದನು, ನೆರೆ–ಹೊರೆಯಲ್ಲಿದ್ದವರು ಯಾರು ಮತ್ತು ಯಾವ ವೃತ್ತಿಯಲ್ಲಿ ಇದ್ದನು ಎನ್ನುವದನ್ನು ಹೇಳಲು ಸಾಧ್ಯವಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/34–36**

*

**ಯೋಗ ಮಾಡುತ್ತಿರುವ ಬೆಕ್ಕು ಮತ್ತು ನವಜನ್ಮ**

ಇಲ್ಲೊಂದು ಬೆಕ್ಕು ಇತ್ತು. ಅದರ ಹೆಸರು ಏನು ಎನ್ನುವದು ನನಗೆ ಈಗ ನೆನಪಿಗೆ ಬರುತ್ತಿಲ್ಲ; ನಿಮಗೆಲ್ಲ ತಿಳಿದಿರುವಂತೆ, ನನ್ನ ಹತ್ತಿರ ಹಲವಾರು ಬೆಕ್ಕುಗಳು ಇದ್ದವು. ಹೀಗಾಗಿ ಅದು ನನಗೆ ಈಗ ನೆನಪಿಲ್ಲ; ಅದರ ಜೊತೆಗೆ ಇನ್ನೊಂದು ಬೆಕ್ಕೂ ಇತ್ತು. ಅದರ ಹೆಸರು "ಕೀಕೀ". ಇದು ಆ ಬೆಕ್ಕಿನ ಪ್ರಥಮ ತಳಿ. ತದನಂತರದಲ್ಲಿ ಮತ್ತೊಂದು (ಬೆಕ್ಕು ಜನಿಸಿತು) – ಅದರ ಹೆಸರು "ಬ್ರೌನೀ" ಎಂದಾಗಿತ್ತು.

ಅದೊಂದು ಪ್ರಶಂಸನೆಗೆ ಅರ್ಹವಾದ ಬೆಕ್ಕು ಆಗಿತ್ತು. ಅದು ಬೆಕ್ಕುಗಳಿಗೆ ಬರುವ ರೋಗದಿಂದಾಗಿಯೇ ಸಾವನ್ನಪ್ಪಿತ್ತು. ಸಾಮಾನ್ಯವಾಗಿ ನಾಯಿಗಳಿಗೆ ಬರುವ ರೋಗದಂತೆಯೇ ಬೆಕ್ಕುಗಳಿಗೂ ರೋಗ ಬರುತ್ತದೆ. ಅದರಲ್ಲೂ ಬೆಕ್ಕಿನ ಮರಿಗಳಿಗೆ ರೋಗ ಹೆಚ್ಚು. ಈ ರೋಗವು ಈ ಬೆಕ್ಕಿಗೆ ಹೇಗೆ ತಗುಲಿತೋ ಎನ್ನುವದು ನನಗೆ ತಿಳಿದಿಲ್ಲ. ಆದರೆ, ಅದು ಅನಾರೋಗ್ಯದಲ್ಲಿದ್ದಾಗ ತೋರುತ್ತಿದ್ದ ವರ್ತನೆ ಮಾತ್ರ ಆಶ್ಚರ್ಯಕರವಾಗಿತ್ತು. ನಾನೂ ಸಹಿತ ಅದನ್ನು ಒಂದು ಶಿಶುವಿನ ರೀತಿಯಲ್ಲಿಯೇ ಕಾಳಜಿ ವಹಿಸಿ ನೋಡುತ್ತಿದ್ದೆ, ಅದು ಯಾವಾಗಲೂ ಒಂದು ರೀತಿಯ ಅಭೀಪ್ಸೆಯನ್ನು ವ್ಯಕ್ತಪಡಿಸುವ ಭಾವದಲ್ಲಿಯೇ ಇರುತ್ತಿತ್ತು. ಅದು ಅನಾರೋಗ್ಯಕ್ಕೆ ತುತ್ತಾಗುವ ಮುನ್ನ– –– ನಾವು ಆ ದಿನಗಳಲ್ಲಿ 'ವಾಚನಾಲಯವನ್ನು ಧ್ಯಾನಕ್ಕಾಗಿ ಬಲಸುತ್ತಿದ್ದೆವು, ಅಲ್ಲಿನ ಕೋಣೆಯಲ್ಲಿನ – ಅದು ಶ್ರೀ ಅರವಿಂದರು ಸ್ವಂತಕ್ಕೆ ಬಳಸುವ ಕೋಣೇಯಾಗಿದ್ದಿತು. – ನಾವು ಅಲ್ಲಿ ಕುಳಿತು ಧ್ಯಾನ ಮಾಡುತ್ತಿದ್ದೆವು. ಆ ಕೋಣೆಯ ಮೂಲೆಯಲ್ಲೊಂದು ಆರಾಮ–ಖುರ್ಚಿ ಇತ್ತು. ನಾವು ಧ್ಯಾನಕ್ಕಾಗಿ ಆ ಕೋಣೇಯನ್ನು ಪ್ರವೇಶಿಸಿದಾಗಲೆಲ್ಲವೂ, ಪ್ರತಿಬಾರಿಯೂ ಈ ಬೆಕ್ಕೂ ಸಹಿತ ಅಲ್ಲಗೆ ಆಗಮಿಸಿ ಅಲ್ಲಿದ್ದ ಆರಾಂ ಖುರ್ಚಿಯ

ಮೇಲೆ ಕುಳಿತುಕೊಳ್ಳುತ್ತಿತ್ತು. ಅಕ್ಷರಶಃ ಅದು ಸಮಾಧಿ ಸ್ಥಿತಿಯಲ್ಲಿ ಇರಬಹುದಾದ ಚಲನಶೀಲತೆಯನ್ನು ಹೊಂದಿದ್ದಿತು. ಅದು ನಿದ್ರೆಯ ಹಂತವಂತೂ ಅಲ್ಲವೇ ಅಲ್ಲ. ಅದು ನಿಜವಾಗಿಯೂ ಸಮಾಧಿ ಸ್ಥಿತಿ. ಅದರ ಸಂಕೇತಗಳನ್ನೂ ಸಹಿತ ಅದು ಅಭಿವ್ಯಕ್ತಗೊಳಿಸುತ್ತಿತ್ತು. ಸಾಮಾನ್ಯವಾಗಿ ಪ್ರಾಣಿಗಳು ಕನಸಿನಲ್ಲಿ ತೋರುವ ಚಲನವಲನಗಳಂತೆ ಕಾಣುತ್ತಿತ್ತು. ಅದಕ್ಕಿಂತ ಮುಖ್ಯವೆಂದರೆ, ಅದು ಆ ಸ್ಥಿತಿಯಿಂದ ಹೊರಬರಲು ಇಚ್ಛಿಸುತ್ತಿರಲಿಲ್ಲ. ಗಂಟೆಗಟ್ಟಳೇ ಆದರೂ ಸಹಿತ ಅದೇ ಸ್ಥಿತಿಯಲ್ಲಿಯೇ ಇದ್ದು ಅಲ್ಲಿಂದ ಹೊರ ಬರಲು ನಿರಾಕರಿಸುತ್ತಿತ್ತು. ಆದರೆ ಯಾವತ್ತೂ ಸಹಿತ ನಾವು ಧ್ಯಾನಕ್ಕೆ ಅಲ್ಲಿ ಪ್ರವೇಶಿಸುವದಕ್ಕಿಂತ ಮೊದಲು ಎಂದಿಗೂ ಅಲ್ಲಿಗೆ ಬರುತ್ತಿರಲಿಲ್ಲ. ಅದು ಅಲ್ಲಿಯೇ ವಾಸ್ತವ್ಯ ಹೂಡಿ, ನಮ್ಮ ಧ್ಯಾನ ಮುಗಿಯುವ ತನಕವೂ ಅಲ್ಲಿಯೇ ಉಳಿಯುತ್ತಿತ್ತು.

ನಾವು ಧ್ಯಾನವನ್ನು ಮುಗಿಸಿದರು ಸಹಿತ, ಅದು ಮಾತ್ರ ಅದೇ ಸ್ಥಿತಿಯಲ್ಲಿ ಅಲ್ಲೆಯೇ ಉಳಿಯುತಿತ್ತು. ನಾನು ಅದನ್ನು ಕರೆದರೆ ಮತ್ತು ಎತ್ತಿಕೊಳ್ಳಲು ಹೋದರೆ ಮಾತ್ರ ಬರುತ್ತಿತ್ತು. ಅದರಲ್ಲೂ ಅದನ್ನು ಕರೆಯುವ ವಿಶಿಷ್ಟ ರೀತಿಯಲ್ಲಿಯೇ ಕರೆದರೆ ಮಾತ್ರ ಅದು ಆ ಸ್ಥಿತಿಯಿಂದ ಎಚ್ಚೆತ್ತುಕೊಂಡು, ದೈಹಿಕ ಪ್ರಜ್ಞೆಗೆ ಬರುತ್ತಿತ್ತು. ಆವಾಗ ಮಾತ್ರ ಅಲ್ಲಿಂದ ಕದಲಲು ಒಪ್ಪಿಕೊಳ್ಳುತ್ತಿತ್ತು. ಇಲ್ಲವಾದಲ್ಲಿ ಬೇರೆ ಯಾರೇ ಬಂದು ಕರೆದರೂ ಅದು ಅಲ್ಲಿಂದ ಕಿಂಚಿತ್ತೂ ಕದಲುತ್ತಿರಲಿಲ್ಲ.

ಇಷ್ಟೆಲ್ಲ ಇದ್ದರೂ, ಆ ಬೆಕ್ಕು ಸದಾ ಒಂದು ಉದಾತ್ತವಾದ ಅಭೀಪ್ಸೆಯನ್ನು ಹೊಂದಿತ್ತು, ಅಂದರೆ ಮಾನವ ರೂಪಧಾರಣೆ ಮಾಡಿಕೊಂಡು ಜನಿಸಬೇಕೆಂಬ ಮಹತ್ತರವಾದ ಅಭೀಪ್ಸೆಯನ್ನು ಹೊಂದಿತ್ತು. ಒಂದು ಸಂಗತಿ ಎಂದರೆ, ಅದು ಎಂದು ಸಾವನ್ನಪ್ಪಿತೋ, ತದನಂತರದಲ್ಲಿ ಅದು ಓರ್ವ ವ್ಯಕ್ತಿಯ ದೇಹದ ಮೂಲಕವೇ ಜನಿಸಿದೆ. ಮಾನವ ಜೀವಿಗೆ ಹೋಲಿಸಿದರೆ, ಇದು ಪ್ರಜ್ಞೆಯ ಅತ್ಯಂತ ಸೂಕ್ಷ್ಮವಾದ ಅಂಶವಾಗಿದೆ.

ಇನ್ನೊಂದು ಘಟನೆಯಲ್ಲಿ, ಇದಕ್ಕೆ ತದ್ವಿರುದ್ಧವಾಗಿ, ಬೇರೆಯದೇ ಸ್ತ್ರೀಯೊಡನೆ ಇದ್ದ ಬೇರೆ ಬೆಕ್ಕಿನ ಘಟನೆ ಇದೆ. ಆದರೆ ಆ ಮೊದಲಿನ ಬೆಕ್ಕು ಮಾತ್ರ ಹಲವು ಜನ್ಮಗಳ ಹಂತಗಳಲ್ಲಿ ಸಾಗಿ ಮಾನವನ ದೇಹಕ್ಕೆ ಬರುವ ಪ್ರಯಾಣದಲ್ಲಿ, ಇದು ಒಮ್ಮೆಲೇ ಪ್ರಗತಿ ಸಾಧಿಸಿದೆ. ಮಾನವ ದೇಹವು ಅತ್ಯಂತ

ಸೂಕ್ತವಾಗಿದ್ದು, ಸರಳವಾಗಿದ್ದು, ಈಗಲೂ ಸಹಿತ ಎಲ್ಲವೂ ಅದೇ ರೀತಿಯಲ್ಲಿಯೇ ... ಇರುವದು.

ಆದರೆ ಒಂದು ಬೆಕ್ಕಿನ ಮತ್ತು ಮಾನವನ ಪ್ರಗತಿಯ ಮಧ್ಯದಲ್ಲಿ ವ್ಯತ್ಯಾಸ ಇದ್ದೇ ಇರುತ್ತದೆ. ಇಂತಹ ಘಟನೆಗಳು ನಡೆಯುತ್ತವೆ, .. ನನ್ನಭಿಪ್ರಾಯದ ಪ್ರಕಾರ ಇವು ಅಪರೂಪದಲ್ಲಿಯೇ ಅಪರೂಪವಾದ ಪ್ರಸಂಗಗಳಾಗಿವೆ. ಆದರೆ ಖಂಡಿತವಾಗಿಯೂ ಇಂತಹ ಘಟನೆಗಳು ಘಟಿಸುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/98–99 – ಶ್ರೀಮಾತೆ**

*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 17ನೇ ನವೆಂಬರ್ ಶನಿವಾರದಂದು "ಶ್ರೀಮಾತೆಯವರ ಮಹಾಸಮಾಧಿ"ಯ ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 7.00 ಗಂಟೆಯಿಂದ 7.30ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ಈ ಕಾರ್ಯಕ್ರಮಕ್ಕೆ ಗುರು–ಬಂಧುಗಳು ಇತರರು ಹಾಜರಿದ್ದರು.

ದಿನಾಂಕ 24ನೇ ನವೆಂಬರ್ 2018 ರ ಶನಿವಾರ "ಶ್ರೀ ಅರವಿಂದರ ಸಿದ್ಧಿ" ದಿನ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 10.00 ಗಂಟೆಯಿಂದ 10.20 ಗಂಟೆಯವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರ, ಪ್ರಸಾದವನ್ನು ವಿತರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್ ವಹಿಸಿದ್ದರು. ಅವರು ಶ್ರೀ ಅರವಿಂದರ ಸಿದ್ಧಿ ದಿನ ಮಹತ್ವದ ಬಗ್ಗೆ ಕೆಲವು ಅಚ್ಚರಿ ಸಂಗತಿಗಳನ್ನು ಸಭಿಕರಿಗೆ ತಮ್ಮ ಭಾಷಣದಲ್ಲಿ ತಿಳಿಸಿಕೊಟ್ಟರು. ನಂತರ ಶ್ರೀ ಮಂದರ್ಕೆ ಮಾಧವ ಪೈ ರವರು ಕನ್ನಡಕ್ಕೆ ಅನುವಾದಿಸಿದ "ಶ್ರೀ ಅರವಿಂದರ ಸಾವಿತ್ರಿ" ಕೃತಿ ಮತ್ತು ಶ್ರೀ ಅರವಿಂದರ "The Human Cycle" "ಮಾನುಷ ಚಕ್ರ" ಕನ್ನಡಕ್ಕೆ

ಅನುವಾದಿಸಿದ ಶ್ರೀ ಶ.ಸ. ಸಿಂಹ, ಈ ಎರಡು ಕೃತಿಗಳನ್ನು ಶ್ರೀ ಮಂದರ್ಕೆ ಮಾಧವ ಪೈ ಮತ್ತು ಖ್ಯಾತ ಸಾಹಿತಿಗಳಾದ ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ್‌ರವರು ಲೋಕಾರ್ಪಣೆ ಮಾಡಿದರು. ಈ ಕಾರ್ಯಕ್ರಮವನ್ನು ಶ್ರೀ ಅರವಿಂದೋ ಸೊಸೈಟಿ, ಗೌರಿಬಿದನೂರು ಶಾಖೆ ಶ್ರೀ ಕೆ. ವರಾಹಮೂರ್ತಿ ಅಚ್ಚುಕಟ್ಟಾಗಿ ನಿರೂಪಿಸಿದರು. "ಶ್ರೀ ಅರವಿಂದರ ಸಾವಿತ್ರಿ" ಬಗ್ಗೆ ಶ್ರೀಮತಿ ಉಮಾದೇವಿ ಸಿರಸಿ ಮಾತನಾಡಿದರು. ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

– – –

## ಶ್ರೀ ಅರವಿಂದೋ ಸೊಸೈಟಿ, ರಾಯಚೂರು ಕೇಂದ್ರ

ಶ್ರೀ ಅರವಿಂದೋ ಸೊಸೈಟಿ ಕೇಂದ್ರ, ರಾಯಚೂರು ಹಾಗೂ ನಂದಿನಿ ಶಿಕ್ಷಣ ಸಮಿತಿ, ರಾಯಚೂರು ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ 5ನೇ ನವೆಂಬರ್ 2018 ರಂದು "ಶ್ರೀ ಅರವಿಂದರ ಪೂರ್ಣ ಯೋಗ"ದ ವಿಷಯವಾಗಿ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಪ್ರಧಾನ ಉಪನ್ಯಾಸಕರಾಗಿ ಶ್ರೀ ಪುಟ್ಟು ಕುಲಕರ್ಣಿ, ಸಂಪಾದಕರು "ಅಖಿಲ ಭಾರತ ಪತ್ರಿಕೆ" ಇವರು "ಪೂರ್ಣಯೋಗದ" ರೂಪು–ರೇಷೆಗಳನ್ನು ವಿವರಿಸಿದರು, ಇನ್ನೋರ್ವ ಉಪನ್ಯಾಸಕರಾದ ಶ್ರೀ ಕರಿಬಸಪ್ಪ, ಯೋಗ ಶಿಕ್ಷಕರು, ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಕೇಂದ್ರ ಜಿಗಣಿ–ಬೆಂಗಳೂರು ಇವರು "ಯೋಗದ ಆಯಾಮಗಳ" ಕುರಿತು ವಿವರಿಸಿದರು. ಶಿಕ್ಷಣ ವಿದ್ಯಾಲಯದ ಪ್ರಾಚಾರ್ಯ ಶ್ರೀ ವಿಜಯಕುಮಾರ ಕಟ್ಟಿಮನಿ ಅಧ್ಯಕ್ಷತೆ ವಹಿಸಿದ್ದರು.

ಅದೇ ದಿನ ಸಂಜೆ ಶ್ರೀ ಅರವಿಂದ ಸೊಸೈಟಿ ಕೇಂದ್ರದಲ್ಲಿ ಸತ್ಸಂಗ ಜರುಗಿತು. ಶ್ರೀ ಅರವಿಂದರ "ಸಾವಿತ್ರಿ"ಯ ಕುರಿತು ಶ್ರೀ ಪುಟ್ಟು ಕುಲಕರ್ಣಿಯವರು ಸಾವಿತ್ರಿಯ ವಿವಿಧ ಆಯಾಮ ಹಾಗೂ ವ್ಯಾಪ್ತಿ ಕುರಿತು ವಿವರಿಸಿದರು.

*



*When mind is still,*
*then Truth gets her chance to be heard*
*in the purity of the silence.*

- Sri Aurobindo

**RNI No. 22511/1971**
No. of Pages **68 + 4 (Cov. Page)**
KAR Reg No : RNP/KA/BGS/368/2018-2020
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till : 31-12-2020
Licensed to Post at BG PSO, Mysore Road, Bengaluru - 560 026

## ಶ್ರೀ ಅರವಿಂದ ಪಥ

ಕೋಟಿ ಕೋಟಿ ಗ್ರಹ ಮಂಡಲ ಬ್ರಹ್ಮಾಂಡದ ಬಸಿರಲಿ
ಕೋಟಿ ಕೋಟಿ ಕಾಲವಲ್ಲ ಕಾಲದೊಂದೇ ಉಸಿರಲಿ ।

ಕಾಲವೆ ಕಣ್ಣಾಗಿ ಕಾಂಬ ವಿಶ್ವರೂಪ ದೈವಕೆಂಬ
ನಿನ್ನೊಳಿಹುದು ಬ್ರಹ್ಮಾಂಡ ಅದುವೆ ಅಮೃತ ಪಿಂಡಾಂಡ ।

ಲೋಕ ಜನಕೆ ಮಾತು ಹಗಲು ಅದರೊಳವರಿಗೆಚ್ಚರ –
ಮೌನ ಹಗಲು ಮಾತು ಇರುಳು ಸಂಯಮಿ ನಿನ್ನುತ್ತರ ।

ದಿವ್ಯಲೋಕದಮರಗೀತ ದೇಹಧರಿಸಿ ನಿಂದ ವ್ರತ –
ಸರ್ವಭೂತ ಹಿತೇರತ ಅರವಿಂದರ ಸತ್ಪಥ ।

– **ಗಣಪತಿರಾವ್ ಆರ್. ಪಾಂಡೇಶ್ವರ್**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.